# ಗುರಿ ಒಂದೇ, ಸಾಧನೆ ಒಂದೇ



ಪೂಜ್ಯ ಶ್ರೀ ಗುರುದೇವ ಆತ್ಮಾನಂದರು


-: ಲೇಖಕರು :-

**ಪೂಜ್ಯ ಶ್ರೀ ಪ್ರೊ. ಎಸ್.ಎಸ್.ಕುರುಬರ**

ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ

ಸಾ:ಹಂಗರಕಿ, ತಾ/ಜಿ:ಧಾರವಾಡ.



ಗ್ರಂಥ ಪೋಷಕರು:

**ಶ್ರೀಮತಿ ರುದ್ರಮ್ಮ ಮತ್ತು ಶ್ರೀ ಸತ್ಯಪ್ಪ ಯಮನಪ್ಪ ಅಂಗಡಿ**

ಸಾ: ಗುಂಡೇನಟ್ಟಿ, ತಾ:ಖಾನಾಪೂರ, ಜಿ:ಬೆಳಗಾವಿ.

**ಅಧ್ಯಾತ್ಮ ಜ್ಞಾನ ಪ್ರಕಾಶನ**

ಸುಖಯೋಗಾಶ್ರಮ, ಸಾ॥ಗುಂಡೇನಟ್ಟಿ, ತಾ॥ಖಾನಾಪೂರ, ಜಿ॥ಬೆಳಗಾವಿ.

ಪ್ರಥಮ ಮುದ್ರಣ : 1997
ದ್ವಿತೀಯ ಮುದ್ರಣ : 2018

ಪ್ರತಿಗಳು : 2,000 (ಎರಡು ಸಾವಿರ)

ಎಲ್ಲ ಹಕ್ಕುಗಳು ಲೇಖಕರಿಂದ ಹಾಗೂ ಪ್ರಕಾಶಕರಿಂದ ಕಾಯ್ದಿರಿಸಲ್ಪಟ್ಟಿವೆ.

ಬೆಲೆ : ರೂ. 15–00 (ಹದಿನೈದು ರೂಪಾಯಿಗಳು ಮಾತ್ರ)

ಮುದ್ರಕರು : ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್, ಧಾರವಾಡ.

## ಪ್ರಕಾಶಕರ ನುಡಿ

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ದಿನಾಂಕ 19–12–1983ರ ರಾತ್ರಿ 9:30 ಗಂಟೆಗೆ ತಮ್ಮ ಪಂಚಭೂತಾತ್ಮಕ ಶರೀರವನ್ನು ತ್ಯಾಗಮಾಡಿ ಭಾವರಹಿತ ಪರಮಾತ್ಮರಾಗಿ ಉಳಿದರು. ನಂತರ ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಭಕ್ತರು 1984 ರಲ್ಲಿ ಅವರ ಸ್ಮರಣ ಸಂಚಿಕೆಯನ್ನು ಪ್ರಕಾಶನಗೊಳಿಸಬೇಕೆಂದು ನಿರ್ಧರಿಸಿದರು. ಆಗ ಅವರು ನನ್ನನ್ನು ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ಭೋದಿಸಿದ ತತ್ತ್ವ ವಿಚಾರವನ್ನು ಪ್ರಶ್ನೋತ್ತರ ರೂಪದಲ್ಲಿ ಬರೆಯಬೇಕೆಂದು ಕೇಳಿಕೊಂಡರು. ಆಗ ನಾನು ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ಭೋದಿಸಿದ ತತ್ತ್ವ ವಿಚಾರವನ್ನು ಪ್ರಶ್ನೋತ್ತರ ರೂಪದಲ್ಲಿ ಬರೆದೆನು. ಅದು **'ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಸ್ಮರಣ ಸಂಚಿಕೆ'** ಎಂಬ ಗ್ರಂಥದಲ್ಲಿ ಪ್ರಕಟವಾಯಿತು. ಆದರೆ ಆ ಗ್ರಂಥಗಳೆಲ್ಲವೂ ತೀರಿ ಹೋದದ್ದರಿಂದ ಈ ಲೇಖನವನ್ನು ಪ್ರಥಮ ಬಾರಿಗೆ 1997 ರಲ್ಲಿ ಇದರ ಒಂದು ಸಾವಿರ ಪ್ರತಿಗಳನ್ನು ಮುದ್ರಿಸಲಾಯಿತು. ಮುದ್ರಣಕ್ಕಾಗಿ ಬೇಕಾದ ಹಣದ ಸಹಾಯವನ್ನು ಶ್ರೀ ಮಹಾಬಳೇಶ್ವರ ಸಂಗಣ್ಣವರ ಸಾ॥ದೇವಗಾಂವ 5000 ರೂಪಾಯಿ; ಶ್ರೀ ಸಂಗಪ್ಪ ಕಣಿವೆಪ್ಪ ಬೆಣಚಮರಡಿ ಸಾ॥ಅಂಬಡಗಟ್ಟಿ 2000 ರೂಪಾಯಿ; ಶ್ರೀಮತಿ ಶಾಂತಮ್ಮ ಕರಿವೀರಪ್ಪ ಬುರಡಿ ಸಾ॥ಗುಂಡೇನಟ್ಟಿ 500 ರೂಪಾಯಿ; ಈ ರೀತಿಯಾಗಿ ದಾನ ಮಾಡಿದರು. ಆ ಎಲ್ಲ ಒಂದು ಸಾವಿರ ಗ್ರಂಥಗಳು ತೀರಿ ಹೋದದ್ದರಿಂದ ಈಗ ನಾವು ಈ ಗ್ರಂಥದ ದ್ವಿತೀಯ ಮುದ್ರಣವನ್ನು ಕೈಕೊಂಡಿದ್ದೇವೆ. ಈಗ ಈ ಗ್ರಂಥದ ಪೋಷಕರಾಗಿ ಶ್ರೀ ಸತ್ಯಪ್ಪ ಯಮನಪ್ಪ ಅಂಗಡಿ ಸಾ॥ಗುಂಡೇನಟ್ಟಿ ಇವರು 20,000 ರೂಪಾಯಿಗಳ ಉದಾರ ದಾನವನ್ನು ನೀಡಿದ್ದಾರೆ. **'ಜ್ಞಾನದಾತಾ ಸುಖಿಭವ'** ಎಂಬ ಉಕ್ತಿಯಂತೆ ಅವರಿಂದ ಇನ್ನೂ ಅನೇಕ ಪುಣ್ಯ ಕಾರ್ಯಗಳು ಜರುಗಲಿ, ಅವರಿಗೆ ಮತ್ತು ಅವರ ಕುಟುಂಬದವರಿಗೆ ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ದೀರ್ಘ ಆಯುಷ್ಯ ಮತ್ತು ಆರೋಗ್ಯವನ್ನು ದಯಪಾಲಿಸಿ, ಅವರು ನಿತ್ಯ ಸುಖದಲ್ಲಿ ಇರುವಂತಾಗಲಿ ಎಂದು ಹಾರೈಸುತ್ತೇನೆ.

**ಪ್ರೊ॥ ಎಸ್.ಎಸ್.ಕುರುಬರ**
ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ
ಮು:ಹಂಗರಕಿ, ಪೋ:ಗರಗ
ತಾ॥ ಜಿ॥ ಧಾರವಾಡ.

## –:: ಮನನೋಕ್ತಿಗಳು ::–

- ನಾವು ಮಾಡಿದ ಕರ್ಮದ ಫಲವನ್ನು ಉಂಡೇ ತೀರಿಸಬೇಕಾಗುವದು.
- ಶರೀರ ಮತ್ತು ವಿಷಯ ವಸ್ತುಗಳಿಂದ ಸುಖ ಪಡೆಯಬೇಕೆನ್ನುವವನು ತನ್ನ ವಿಷಯ ವಾಸನೆ ಮತ್ತು ಕರ್ಮಕ್ಕನುಸಾರವಾಗಿ ಪುನರ್ಜನ್ಮ ಹೊಂದುವನು.
- ತನ್ನಂತೆ ಪರರು ಎಂದು ತಿಳಿದುಕೊಂಡು ನಡೆಯುವವನು ಇದ್ದ ಸ್ಥಾನವೇ ಕೈಲಾಸವು.
- ಪರಸ್ಪರ ನೀತಿಯಿಂದ ನಡೆದರೆ ಸಮಾಜದಲ್ಲಿಯ ಜೀವಿಗಳ ವ್ಯವಹಾರವು ಸರಳವಾಗಿ ನಡೆಯುವದು.
- ಮನಸ್ಸಿನಲ್ಲಿ ವಿಷಯಗಳ ಆಸೆ ಹಾಗೂ ದೇಹಭಾವ ಹಿಡಿದರೆ ದುಃಖ, ಬಿಟ್ಟರೆ ಸುಖ.
- ಇಚ್ಛಿತ ವಿಷಯವು ಸಿಕ್ಕಾಗ ಮನಸ್ಸು ನಿಶ್ಚಲವಾಗಿ ಸುಖವು ಅನುಭವಕ್ಕೆ ಬರುವದು, ನಂತರ ವಿಷಯ ಭೋಗವು ನಡೆದು, ಅದು ಬೇಸರವಾಗಿ ದುಃಖವಾಗುವದು. ಆದ್ದರಿಂದ ಮನಸ್ಸಿನ ನಿಶ್ಚಲ ಸ್ಥಿತಿಯೇ ಸುಖವು.
- ತಾನೇ ಆನಂದ ಸ್ವರೂಪನು, ವಿಷಯಗಳಲ್ಲ.
- ಜ್ಞಾನ ಸಮಾಧಿಯನ್ನು ಹೊಂದಿದಾಗ ಪುನರ್ಜನ್ಮವಿಲ್ಲ.
- ವಿಷಯಗಳಿಗೆ ಸೋತವನು ಗುರುವಲ್ಲ.
- ಜೀವಿಗಳನ್ನು ಸಂತೋಷಗೊಳಿಸುವದೇ ದೇವಪೂಜೆ.

ಸುಖಕ್ಕೆ ರೂಪವಿಲ್ಲ, ಆದ್ದರಿಂದ ಸುಖವನ್ನು ರೂಪಗಳಲ್ಲಿ ಹುಡುಕದೆ, ಕಲ್ಪಿತ ರೂಪಗಳಿಗಾಗಿ (ಶಿವ, ಪಾರ್ವತಿ, ವಿಷ್ಣು, ಲಕ್ಷ್ಮಿ, ಮುಂತಾದವುಗಳು) ಜಗಳಾಡದೆ, ರೂಪರಹಿತ ಸುಖವನ್ನು ನೆನಪಿಗೆ ತಂದುಕೊಳ್ಳಬೇಕು. ಆದ್ದರಿಂದ ಸುಖಕ್ಕೇ ನಮಸ್ಕಾರ (ಓಂ ನಮಃ ಸುಖಾಯ). ಸುಖವು ತನ್ನ ನಿಜಸ್ವರೂಪವೇ ಇರುವದು. ಆದ್ದರಿಂದ ಸುಖವನ್ನು ತನ್ನ ನಿಜಸ್ವರೂಪದ ಹೊರಗೆ ಹುಡುಕಿ, ವ್ಯರ್ಥ ಬಳಲದೆ, ತನ್ನ ಸುಖಮಯ ನಿಜಸ್ವರೂಪವನ್ನೇ ನೆನಪಿಗೆ ತಂದುಕೊಳ್ಳಬೇಕು. ಆದ್ದರಿಂದ ತನ್ನ ನಿಜಸ್ವರೂಪಕ್ಕೇ ನಮಸ್ಕಾರ. (ಓಂ ನಮೋ ನಾನವೆ).

**–ಸ್ವಾಮಿ ಆತ್ಮಾನಂದರು.**

# ಪೂಜ್ಯ ಶ್ರೀ ಸದ್ಗುರು ಆತ್ಮಾನಂದರ
# ಸಂಕ್ಷಿಪ್ತ ಪರಿಚಯ

ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು 1904ರಲ್ಲಿ ಪರಮ ತಪಸ್ವಿಗಳು, ಅವತಾರಿ ಪುರುಷರೂ ಆದ ಪೂಜ್ಯ ಶ್ರೀ ಸದ್ಗುರು ಶಿವಾನಂದರ (ನಾಗನೂರ–ಗದಗ) ಏಕಮೇವ ಮಾನಸ ಮತ್ತು ಔರಸ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೇ ಅವರಿಗೆ ಅಧ್ಯಾತ್ಮ ವಿಚಾರದ ಕಡೆಗೆ ಒಲವು ಇತ್ತು. ಪೂಜ್ಯ ಶ್ರೀ ಸದ್ಗುರು ಶಿವಾನಂದರು ಅಧ್ಯಾತ್ಮ ಬೋಧೆಗಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟರು. ಆತ್ಮಾನಂದರು ತಮ್ಮ ತಂದೆಯವರ ವಿಶೇಷ ಪೋಷಣೆಯಲ್ಲಿಯೇ ಬೆಳೆದರು. ಅವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಪೂಜ್ಯ ಶ್ರೀ ಸದ್ಗುರು ಶಿವಾನಂದರು ತುರ್ಯಸ್ಥಿತಿಯನ್ನು ಹೊಂದುತ್ತಿದ್ದರು. ಅದು ಎರಡು–ಮೂರು ದಿನಗಳವರೆಗೆ ಇರುತ್ತಿತ್ತು. ಆಗ ಪೂಜ್ಯ ಶ್ರೀ ಆತ್ಮಾನಂದರು ಪೂಜ್ಯ ಶ್ರೀ ಸದ್ಗುರು ಶಿವಾನಂದರ ತುರ್ಯ ಸ್ಥಿತಿಯನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿ, ಅದರ ಗೂಢಾರ್ಥವನ್ನು ತಿಳಿದುಕೊಂಡರು. ಅವರು 1932ರಲ್ಲಿ "ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ" ಎಂಬ ವಿಷಯವನ್ನು ತೆಗೆದುಕೊಂಡು, ಬನಾರಸ ಹಿಂದೂ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ನಂತರ ತಮ್ಮ ತಂದೆಯವರ ವಿಶೇಷ ಮಾರ್ಗದರ್ಶನದಿಂದ ಮತ್ತು ತಮ್ಮ ಹಿಂದಿನ ಜನ್ಮದ ಆತ್ಮಾಭ್ಯಾಸದ ತೀವ್ರ ಸಂಸ್ಕಾರದಿಂದ ತುರ್ಯ ಸ್ಥಿತಿಯನ್ನು ಹೊಂದಿಯೇ ತೀರಬೇಕೆಂದು ನಿಶ್ಚಯಿಸಿದರು. ಎಲ್ಲ ಅಧಿಕಾರ, ಸಂಪತ್ತು, ಐಷಾರಾಮದ ಜೀವನ ಮತ್ತು ಲೋಕ ಪ್ರಸಿದ್ಧಿಯನ್ನು ನಿರ್ಲಕ್ಷಿಸಿದರು. ಆಗ ಅವರು ಕೆಲವು ಕಾಲದವರೆಗೆ ಸಂಚಾರವನ್ನು ಕೈಕೊಂಡರು. ಆಗ ಅವರು ಸ್ವರೂಪಾವ ಸ್ಥಿತಿಯನ್ನು ಹೊಂದುವ ಸತತ ಅಭ್ಯಾಸದಲ್ಲಿ ತೊಡಗಿ, ಅಲ್ಪ ಕಾಲದಲ್ಲಿಯೇ ಆತ್ಮಜ್ಞಾನಿಗಳಾದರು. ನಂತರ ಅವರು ಸನ್ 1936 ರಲ್ಲಿ ನೀತಿ ಸಂಪನ್ನಳಾದ ದೇವಕಿ ಎಂಬ ಕನ್ಯೆಯನ್ನು ವಿವಾಹವಾದರು. ಶ್ರೀಮತಿ ದೇವಮ್ಮನವರು ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಸಾಧನೆಗೆ ಸಂಪೂರ್ಣ ಸಹಕಾರವಿತ್ತರು.

ಪೂಜ್ಯ ಶ್ರೀ ಸದ್ಗುರು ಶಿವಾನಂದರು ಮತ್ತು ಅವರ ಪುತ್ರರಾದ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ವ್ಯಾಸ, ಶುಕದೇವ ಮುನಿಗಳಂತೆ ಇರುವರು. ಪ್ರವಚನ ಹೇಳುವ ಕಾಲಕ್ಕೆ ಅನೇಕ ಸಲ ತುರ್ಯ ಸ್ಥಿತಿಯನ್ನು ಹೊಂದಿದ ಧೀರರಿವರು. ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ತಾವು ಪಡೆದ ಪರಮೋನ್ನತ ಶಾಂತಿಯನ್ನು ಇನ್ನುಳಿದ ಜೀವಿಗಳು ಪಡೆದು ಸುಖಿಯಾಗಲಿ ಎಂದು ವೈಯ್ಯಾಕರಣಿಯ ಸ್ಥಿತಿಯಿಂದ ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ 45 ವರ್ಷಗಳವರೆಗೆ ಅಧ್ಯಾತ್ಮ ಜ್ಞಾನವನ್ನು ಬೋಧಿಸಿದರು.

ಎಲ್ಲ ಜೀವಿಗಳಿಗೆ ಬೇಕಾದದ್ದು ಶಾಶ್ವತ ಸುಖವು, ಅದು ರೂಪರಹಿತವಿದೆ. ಆದರೆ ಅಜ್ಞಾನಿ ಜೀವಿಗಳು ರೂಪಗಳಲ್ಲಿಯೇ ಸುಖವನ್ನು ಹುಡುಕುತ್ತಾರೆ ಮತ್ತು ಕಲ್ಪಿತ ರೂಪಗಳಿಗಾಗಿ ಜಗಳಾಡುತ್ತಾರೆ. ಆದ್ದರಿಂದ ಜೀವಿಗಳು ವ್ಯರ್ಥವಾಗಿ ರೂಪಗಳಲ್ಲಿ ಸುಖವನ್ನು ಹುಡುಕದೆ ಮತ್ತು ಕಲ್ಪಿತ ರೂಪಗಳಿಗಾಗಿ (ಶಿವ, ಪಾರ್ವತಿ, ವಿಷ್ಣು, ಲಕ್ಷ್ಮಿ ಮುಂತಾದವುಗಳಿಗಾಗಿ) ಜಗಳಾಡದೆ ಕೇವಲ ರೂಪರಹಿತ ಸುಖವನ್ನು ನೆನಪಿಗೆ ತಂದುಕೊಳ್ಳುವದಕ್ಕಾಗಿ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು 'ಓಂ ನಮಃ ಸುಖಾಯ' ಎಂಬ ಮಂತ್ರವನ್ನು ಹೇಳಿದರು.

ಅದರಂತೆ ಅಜ್ಞಾನಿ ಜೀವರು ಸುಖವನ್ನು ತಮ್ಮ ನಿಜ ಸ್ವರೂಪದ ಹೊರಗೆ ಹುಡುಕಿ ಬಳಲುತ್ತಾರೆ. ಹೀಗೆ ಅವರು ವ್ಯರ್ಥ ಬಳಲದೆ, ತಮ್ಮ ನಿಜ ಸ್ವರೂಪವೇ ಸುಖವೆಂದು ತಿಳಿದು, ಕೇವಲ ತಮ್ಮ ಸುಖಮಯ ನಿಜ ಸ್ವರೂಪವನ್ನೇ ನೆನಪಿಗೆ ತಂದುಕೊಳ್ಳಲು ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು 'ಓಂ ನಮೋ ನಾನವೆ' ಎಂಬ ಮಂತ್ರವನ್ನು ಹೇಳಿದರು.

ಜೀವಿಗಳಿಗೆ ಆನಂದದ ಗುರುತು ಭಾವ ಉದಯವಾದಾಗಿನಿಂದಲೂ ಇದೆ. ಇದೇ ಪ್ರಥಮಾನುಭೂತಿ, ಅದನ್ನು ಮರೆತಂತಾಗಿದೆ. ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು ಆನಂದನಿಷ್ಠರಾಗಲು ಘಂಟಾಘೋಷವಾಗಿ ಶ್ರೀಗಳು ತಿಳಿಸಿದರು.

ಬ್ರಹ್ಮಚರ್ಯಾಶ್ರಮ (ಬಾಲ್ಯದಲ್ಲಿ ಬ್ರಹ್ಮವಿದ್ಯೆಯ ಅಭ್ಯಾಸ), ಗೃಹಸ್ಥಾಶ್ರಮ (ವಿಷಯಭೋಗದ ವ್ಯವಹಾರವು ನಡೆದಾಗಲೆಲ್ಲ ಅದರಲ್ಲಿ ಸುಖವಿದೆಯೋ ಅಥವಾ ದುಃಖವಿದೆಯೋ ಎಂಬುದನ್ನು ವಿಚಾರ ಮಾಡುವದು), ವಾನಪ್ರಸ್ಥಾಶ್ರಮ (ಮನೆತನದ ವ್ಯವಹಾರವನ್ನು ಕೈಬಿಟ್ಟು ಆತ್ಮ ವಿಚಾರದಲ್ಲಿ ತೊಡಗುವದು) ಇವು ಪುನಃ ಪ್ರತಿಷ್ಠಾಪನೆಯಾಗದ ಹೊರತು ಸಮಾಜದಲ್ಲಿ ಸುಖ ಶಾಂತಿಗಳು ನೆಲೆಸಲಾರವು ಎಂದು ಪೂಜ್ಯ ಶ್ರೀ ಆತ್ಮಾನಂದ ಗುರುಗಳು ತಿಳಿಸಿದರು.

ನೀತಿ, ವೈರಾಗ್ಯ, ತುರ್ಯಸ್ಥಿತಿ(ಆತ್ಮಜ್ಞಾನ)ಯನ್ನು ಪಡೆಯದೆ ಮೋಕ್ಷವಿಲ್ಲವೆಂದು ಅವರು ಘಂಟಾಘೋಷವಾಗಿ ತಿಳಿಸಿದರು. ಅವರು ಇಡೀ ವಿಶ್ವದ ದಾರ್ಶನಿಕ ಶಾಸ್ತ್ರಗಳ ಸಾರವನ್ನೇ ಅರ್ಥಾತ್ ತಮ್ಮ ಅನುಭವವನ್ನೇ ಹೇಳಿರುವರು.

* * *

## ಪ್ರೊ. ಸುರೇಂದ್ರ. ಎಸ್. ಕುರುಬರ ಇವರ ಸಂಕ್ಷಿಪ್ತ ಪರಿಚಯ ಹಾಗೂ ವಿಚಾರಧಾರೆ

ಇವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಗಳತಗಿ ಗ್ರಾಮದಲ್ಲಿ ಶ್ರೀ ಸಿದ್ದಪ್ಪ ಮತ್ತು ಕಲ್ಲಮ್ಮ ದಂಪತಿಗಳ ಪವಿತ್ರ ಉದರದಿಂದ ದಿನಾಂಕ 25–09–1945 ರಲ್ಲಿ ಜನಿಸಿದರು. ಇವರಿಗೆ ಬಾಲ್ಯಾವಸ್ಥೆಯಿಂದಲೇ ಅಧ್ಯಾತ್ಮದ ಒಲವು ಇತ್ತು, ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಗಳತಗಿ ಗ್ರಾಮದಲ್ಲಿಯೇ ಮುಗಿಸಿಕೊಂಡರು. ನಂತರ ಬೆಡಕಿಹಾಳ ಗ್ರಾಮದ ಬಿ. ಎಸ್. ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣವನ್ನು ಪೂರೈಸಿಕೊಂಡರು. ನಂತರ ಬೆಳಗಾವಿಯ ರಾಜಾ ಲಖಮನಗೌಡ ವಿಜ್ಞಾನ ಸಂಸ್ಥೆಯಲ್ಲಿ ಪಿ.ಯು.ಸಿ. ಕ್ಲಾಸಿನಲ್ಲಿ ಓದುತ್ತಿರುವಾಗ, 'ಬ್ರಹ್ಮಚರ್ಯವೇ ಜೀವನ, ವೀರ್ಯನಾಶವೇ ಮೃತ್ಯು' ಲೇಖಕರು –ಶ್ರೀ ಶಿವಾನಂದ ಸ್ವಾಮಿಗಳು ವರೂಢ ಆಶ್ರಮ ಮಹರಾಷ್ಟ್ರ; 'ಆತ್ಮಾನ್ವೇಷಣೆ' ಲೇಖಕರು–ಭಗವಾನ್ ಶ್ರೀ ರಮಣ ಮಹರ್ಷಿಗಳು; 'ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ' ಲೇಖಕರು –ಸ್ವಾಮಿ ರಾಮತೀರ್ಥರು; 'ವೇದಾಂತ ಜ್ಞಾನಸಿಂಧು' ಲೇಖಕರು– ಚಿದಾನಂದಾವಧೂತರು; 'ಸ್ವಾಮಿ ವೀವೇಕಾನಂದರ ಸಂಪೂರ್ಣ ಕೃತಿ ಶ್ರೇಣಿ' ಎಂಬ ಗ್ರಂಥಗಳು ಇವರ ಮನಸ್ಸಿನ ಮೇಲೆ ಅತಿ ಹೆಚ್ಚಿನ ಪರಿಣಾಮವನ್ನು ಬೀರಿದವು. ನಂತರ ಇವರು 1968 ರಲ್ಲಿ ಶ್ರೀ ರಾಜಾ ಲಖಮನಗೌಡ ವಿಜ್ಞಾನ ಮಹಾವಿದ್ಯಾಲಯದಿಂದ ತಮ್ಮ ಬಿ.ಎಸ್‌ಸಿ ಪದವಿಯನ್ನು ಮುಗಿಸಿಕೊಂಡರು. ಅವರ ತಂದೆಯವರು "ಕಲಿತು ಯಾರು ಸುಖಿಯಾಗಿದ್ದಾರೆ, ಹೊಲ ಮನೆಯನ್ನು ನೀಗಿಸಿಕೊಂಡು ಹೋಗು" ಎಂದು ಹೇಳಿದರು; ಆದರೆ ಕಲಿಯಬೇಕೆಂಬ ಅವರ ತೀವ್ರ ಅಪೇಕ್ಷೆಯನ್ನು ತಿಳಿದುಕೊಂಡು, ಅವರ ತಾಯಿಯವರು ಅವರ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಶ್ರೀ ಸುರೇಂದ್ರರವರು ತಾಯಿಯವರ ಇಚ್ಛೆಯಂತೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಮ್.ಎಸ್‌ಸಿ ಪದವಿಯನ್ನು ಪಡೆದರು. ಅವರಿಗೆ ಕಲಿಯುತ್ತಿರುವಾಗಲೇ ಅಧ್ಯಾತ್ಮದಲ್ಲಿ ವಿಶೇಷ ಆಸಕ್ತಿಯು ಇತ್ತು. ಆಗ ಅವರು ಅನೇಕ ಸಾಧು ಸಂತರ ಸಂಗವನ್ನು ಮಾಡಿದರು. ಅನೇಕ ಮಹಾತ್ಮರ ಅಧ್ಯಾತ್ಮ ಗ್ರಂಥಗಳನ್ನು ಓದಿದರು. ನಂತರ ಅವರು ಧಾರವಾಡದ ಜೆ.ಎಸ್.ಎಸ್. ಮಹಾವಿದ್ಯಾಲಯದಲ್ಲಿ 1970ರಲ್ಲಿ ಪ್ರಾಧ್ಯಾಪಕರಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು.

ಪ್ರೊ. ಸುರೇಂದ್ರರು 1970ರ ನವ್ಹಂಬರ್ ತಿಂಗಳಲ್ಲಿ ಪೂಜ್ಯ ಶ್ರೀ ಗುರುದೇವ ಆತ್ಮಾನಂದರನ್ನು, ಅವರು ಧಾರವಾಡ ತಾಲೂಕಿನ ಅಮ್ಮಿನಭಾವಿ ಗ್ರಾಮದ ಕ್ಯಾಂಪ್‌ದಲ್ಲಿರುವಾಗ ಭೆಟ್ಟಿಯಾದರು. ಆಗ ಅವರು ಪೂಜ್ಯರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು, ಅವು ಕೆಳಗಿನಂತೆ ಇವೆ:

ಪ್ರೊ॥ ಸುರೇಂದ್ರರು : ಜೀವ, ಜಗತ್ತು ಮತ್ತು ಈಶ್ವರ ಇವುಗಳ ನಡುವಿನ ಸಂಬಂಧವೇನು?

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು : ಜೀವ, ಜಗತ್ತು ಮತ್ತು ಈಶ್ವರ ಇವು ನಿಮ್ಮ ಸ್ವರೂಪದ ಆಧಾರದ ಮೇಲೆ ತೋರಿದ ತೋರಿಕೆಗಳು ಮಾತ್ರ.

ಪ್ರೊ॥ ಸುರೇಂದ್ರರು : ಅವು ನಮ್ಮ ಆಧಾರದ ಮೇಲೆ ತೋರಿದ ತೋರಿಕೆಗಳು ಎಂದು ನೀವು ಹೇಗೆ ಹೇಳುತ್ತೀರಿ?

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು : ಹಾಗೆ ಹೇಳಬೇಕಾದರೆ ಅದರ ವೈಯಕ್ತಿಕ ಅನುಭವವು ಇರಬೇಕಾಗುತ್ತದೆ.

ಪ್ರೊ॥ ಸುರೇಂದ್ರರು : ಹಾಗಾದರೆ ಆ ಅನುಭವವನ್ನು ನೀವು ಹೊಂದಿರುವಿರೋ?

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು : ಆ ಅನುಭವವನ್ನು ನಾನು ಹೊಂದಿಲ್ಲ, ಆದರೆ ನಮ್ಮ ತಂದೆಯವರಾದ ಪೂಜ್ಯ ಶ್ರೀ ಸದ್ಗುರು ಶಿವಾನಂದರು ಅಂಥ ಆತ್ಮಾನುಭವವನ್ನು (ತೂರ್ಯ ಸ್ಥಿತಿಯನ್ನು) ಹೊಂದಿದವರಾಗಿದ್ದರು. ಯಾರಾದರೂ ಅಂಥ ಸ್ಥಿತಿಯನ್ನು ಹೊಂದಿದ್ದಾರೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಒರೆಗಲ್ಲು ನನ್ನಲ್ಲಿದೆ.

ಮಗನಿಗೆ ಪ್ರಾಧ್ಯಾಪಕ ಹುದ್ದೆಯು ದೊರಕುವದೇ ತಡ, ತಾಯಿ ಕಲ್ಲಮ್ಮನವರು ಮಗನ ಮದುವೆಯ ತಯಾರಿ ನಡೆಸಿದರು. ಆಗ ಶ್ರೀ ಸುರೇಂದ್ರರು ಮದುವೆಯಾಗಲು ಒಪ್ಪಲಿಲ್ಲ, ಅವರು ಸ್ವಾಮಿ ವಿವೇಕಾನಂದರಂತೆ ವೀರ ಸನ್ಯಾಸ ಜೀವನವನ್ನು ನಡೆಸಿ, ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಂಡು, ಜನ್ಮಸಾರ್ಥಕ ಮಾಡಿಕೊಳ್ಳಬೇಕೆಂಬುದೇ ಅವರ ಧ್ಯೇಯವಾಗಿತ್ತು. ಆದರೆ ತಾಯಿ ಕಲ್ಲಮ್ಮನವರು ಹಠ ಹಿಡಿದರು, ಪ್ರೊ॥ ಸುರೇಂದ್ರರು ಮದುವೆಯಾಗದಿದ್ದರೆ ತಾವು ಪ್ರಾಣತ್ಯಾಗ ಮಾಡುತ್ತೇವೆ ಎಂದು ಹೇಳಿ ವಿಷ ಸೇವಿಸಿದರು; ಆಗ ಅದಕ್ಕೆ ಔಷಧೋಪಚಾರ ಮಾಡಿದಾಗ ಅವರು ಗುಣವಾದರು. ತಾಯಿಯವರ ಒತ್ತಾಯಕ್ಕೆ ಮಣಿದು ಪ್ರೊ॥ ಸುರೇಂದ್ರರು ಮದುವೆಯಾಗಲು ಒಪ್ಪಿದರು. ಕುಮಾರಿ ಶಕುಂತಲಾ ಎಂಬ ಪದವೀಧರೆಯ ಜೊತಗೆ 1972 ರಲ್ಲಿ ವಿವಾಹವಾದರು. ಪ್ರಾರಬ್ಧ ವೈಚಿತ್ರ್ಯವನ್ನು ಮೀರುವವರಾರು! ಅವರ ತಂದೆಯವರು ಶ್ರೀ ಸುರೇಂದ್ರರು ಎಮ್.ಎಸ್‌ಸಿ. ಮೊದಲನೆಯ ವರ್ಷದಲ್ಲಿ ಓದುತ್ತಿದ್ದಾಗ ಕ್ಷಯರೋಗದ ಭಾದೆಯಿಂದ ಮರಣ ಹೊಂದಿದರು. 1974 ರಲ್ಲಿ ಅವರ ತಾಯಿಯವರೂ ಮರಣ ಹೊಂದಿದರು. ಆಗ ಮನೆತನದ ಎಲ್ಲ ಭಾರವು ಇವರ ಮೇಲೆಯೇ ಬಿದ್ದಿತು. ಶ್ರೀ ಸುರೇಂದ್ರರು ತಮ್ಮನ ಹಾಗೂ ಮೂರು ಜನ ಸಹೋದರಿಯರ ಮದುವೆಯನ್ನು ಸ್ವಂತ ದುಡಿಮೆಯ ಖರ್ಚಿನಲ್ಲಿ ಮಾಡಿದರಲ್ಲದೆ, ಪಿತ್ರಾರ್ಜಿತ ಆಸ್ತಿಯಲ್ಲಿ ಯಾವ ಪಾಲನ್ನೂ ಕೇಳದೆ, ಮೂರು ಎಕರೆ ಹೊಲ ಹಾಗೂ ತಮ್ಮ ಮನೆಯನ್ನು ತಮ್ಮ ತಮ್ಮನಿಗೇ ಬಿಟ್ಟುಕೊಟ್ಟು, ಹಂಗರಕಿ ಆಶ್ರಮದ ಬದಿಯಲ್ಲಿಯೇ ಸ್ವಂತ ಖರ್ಚಿನಿಂದ ಮನೆಯನ್ನು ಕಟ್ಟಿಕೊಂಡು ಉಳಿದದ್ದು ಅವರ ತ್ಯಾಗಮಯ ಜೀವನಕ್ಕೆ ನಿದರ್ಶನವಾಗಿದೆ. ಅವರು ದೀನ ದಲಿತರನ್ನು ಕಂಡಾಗ ಅವರಿಗೆ ಮುಕ್ತ ಹೃದಯದಿಂದ ಸಹಾಯ ಮಾಡುತ್ತಾರೆ. ಶ್ರೀ ಸುರೇಂದ್ರರು ಇಂತಹ ಉದಾರ ಬುದ್ಧಿಯುಳ್ಳ ನಿಸ್ವಾರ್ಥ ಸೇವಾ ಪುರುಷರು. ಇವರು ಅತಿ ಸರಳ ಸಾದಾ ಸೀದಾ ವ್ಯಕ್ತಿ, ಇವರು ಕೋಟು ಬೂಟು ಹಾಕಿಲ್ಲ, ಟೈ ಕಟ್ಟಿಲ್ಲ. ಇವರು ಜನರೊಡನೆ ಆತ್ಮೀಯರಾಗಿ ಬೆರೆಯುವಾಗ "ಇವನಾರವ

ಇವನಾರವ" ಎನ್ನದೆ "ಇವ ನಮ್ಮವ ಇವ ನಮ್ಮವ" ಎಂಬ ಹೃದಯ ವಿಶಾಲತೆಯು ಇವರಲ್ಲಿದೆ, ಮಾತನಾಡಿದರೆ ಕೇವಲ ಅಧ್ಯಾತ್ಮದ ಕುರಿತಾಗಿಯೇ ಮಾತನಾಡಬೇಕೆಂಬ ವಿಚಾರವು ಇವರದು.

ನಂತರ ಪ್ರೊ॥ ಸುರೇಂದ್ರರು ಪೂಜ್ಯಶ್ರೀ ಗುರುದೇವ ಆತ್ಮಾನಂದರ ಸಂಗದಲ್ಲಿಯೇ ಇದ್ದು, ಅವರಿಂದ ಅಧ್ಯಾತ್ಮ ವಿಚಾರಗಳನ್ನು ಶ್ರವಣಮಾಡಿ, ಪೂಜ್ಯರ ಅಧ್ಯಾತ್ಮ ಧಾರೆಯನ್ನು ಅನೇಕ ಪುಸ್ತಕಗಳ ರೂಪದಲ್ಲಿ ಪ್ರಕಟಪಡಿಸಿದ್ದಾರೆ. ಅವು ಯಾವವೆಂದರೆ 'ಆತ್ಮ ಸಾಕ್ಷಾತ್ಕಾರ', 'ಪ್ರಥಮಾನುಭೂತಿ', 'ಶಾಶ್ವತ ಶಾಂತಿ', 'ಗುರಿ ಒಂದೇ ಸಾಧನೆ ಒಂದೇ', 'ಗಾಢ ನಿದ್ರೆ ಮತ್ತು ಸಮಾಧಿ', 'ಅವಿದ್ಯೆಯು ಅನಾದಿ ಅನಂತವಲ್ಲ, ಅದು ಸಾದಿ ಸಾಂತವು'; 'ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಪ್ರವಚನ ಸಂಗ್ರಹ', 'ಪುನರ್ಜನ್ಮ', 'ಆತ್ಮಾನಂದ ಬೋಧ ಭಾಗ–1', 'ಪೂಜ್ಯ ಶ್ರೀ ಸದ್ಗುರು ಶಿವಾನಂದರ ಪ್ರವಚನ ಸಾರ', 'ಪೂಜ್ಯ ಶ್ರೀ ಸ್ವಾಮಿ ರಾಮತೀರ್ಥರ ಪ್ರವಚನ ಸಾರ', 'ಓಂ ನಮಃ ಸುಖಾಯ ಮಂತ್ರದ ಬೆಳ್ಳಿ ಹಬ್ಬದ ಕಾರ್ಯಕ್ರಮದಲ್ಲಿಯ ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಪ್ರವಚನಗಳು', 'ಅಧ್ಯಾತ್ಮ ಪ್ರಶ್ನೋತ್ತರ ಸಂಗ್ರಹ'.

ಹೆಚ್ಚು ಶಿಕ್ಷಣ ಕಲಿತವರು ಶಾಸ್ತ್ರ, ಧರ್ಮ, ನೀತಿ, ತತ್ತ್ವವಿಚಾರಗಳಿಗೆ ಮಾರು ಹೋಗುವದು ಅತಿ ವಿರಳ. ಇವರು ಧಾರವಾಡದಲ್ಲಿಯ ಜೆ.ಎಸ್.ಎಸ್ ಬಡಾವಣೆಯಲ್ಲಿಯ ತಮ್ಮ ವಸತಿ ಗೃಹದ ಐಷರಾಮದ ಜೀವನವನ್ನು ಕಳೆಯುದನ್ನು ಬಿಟ್ಟು, ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಆಜ್ಞೆಯ ಮೇರೆಗೆ ಹಂಗರಕಿ ಗ್ರಾಮದಲ್ಲಿಯೇ ವಾಸವಾಗಿ, ಪೂಜ್ಯ ಶ್ರೀ ಗುರುಗಳ ಆಶ್ರಮದಲ್ಲಿ ಸುಮಾರು 42 ವರ್ಷಗಳ ಕಾಲ ಪ್ರವಚನ ಸೇವೆಯನ್ನು ಸಲ್ಲಿಸಿದ್ದಾರೆ. ಇವರು 34 ವರ್ಷಗಳ ಕಾಲ ತಮ್ಮ ಪ್ರಾಧ್ಯಪಕ ವೃತ್ತಿಯನ್ನು ಪೂರೈಸಿ 2003ರಲ್ಲಿ ನಿವೃತ್ತರಾದರು. ಅಂದಿನಿಂದ ಇಲ್ಲಿಯವರೆಗೆ ಇವರು ನಿರಂತರ ಆತ್ಮ ಚಿಂತನೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದಾರೆ. ಅವರು ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನೇಕ ಅಧ್ಯಾತ್ಮ ಕೇಂದ್ರಗಳನ್ನು ಸ್ಥಾಪಿಸಿ, ಮೇಲಿಂದ ಮೇಲೆ ಅಲ್ಲಿಗೆ ಹೋಗಿ ಪ್ರವಚನಗೈದು, ದಿನನಿತ್ಯವೂ ಆ ಎಲ್ಲ ಕೇಂದ್ರಗಳಲ್ಲಿ ಅಧ್ಯಾತ್ಮ ವಿಚಾರವು ಮುಂದುವರಿಯುವದಕ್ಕೆ ಕಾರಣಿಭೂತರಾಗಿದ್ದಾರೆ. ಇಂಥ ಕೇಂದ್ರಗಳು ಯಾವವೆಂದರೆ: ಧಾರವಾಡ ತಾಲೂಕಿನ ಮುಗಳಿ, ಹೊಸೆಟ್ಟಿ, ಕಲ್ಲಾಪೂರ, ಕೊಟಬಾಗಿ, ಧಾರವಾಡ, ಲೋಕೂರ ಮತ್ತು ಬೆಳಗಾವಿ ಜಿಲ್ಲೆಯ ಬಸರಕೋಡ, ಗುಂಡೇನಟ್ಟಿ, ಬೆಳಗಾವಿ, ಶಿವಪೇಠ, ಮುಂತಾದವು. ಇಷ್ಟೇ ಅಲ್ಲದೆ ಇವರು ಜನರ ಆಗ್ರಹವಿದ್ದಲ್ಲಿಗೆ ಹೋಗಿ ಅಧ್ಯಾತ್ಮ ವಿಚಾರಗಳನ್ನು ಪ್ರಚಾರ ಮಾಡಿದ್ದಾರೆ. ಇದಕ್ಕಾಗಿ ಅವರು ಹಣವನ್ನು ಸ್ವೀಕರಿಸುವದಿಲ್ಲ, ತಮ್ಮದೇ ಆದ ಸ್ವಂತ ಖರ್ಚಿನಿಂದ ಈ ಉಚಿತ ಸೇವೆಯನ್ನು ಮಾಡುತ್ತಿದ್ದಾರೆ. ಇವರು ಎಲೆ ಮರೆಯ ಕಾಯಿಯಂತೆ, ಸದ್ದು ಗದ್ದಲವಿಲ್ಲದಂತೆ, ಗಂಧದ ಕೊರಡಿನಂತೆ ತಮ್ಮ ದೇಹವನ್ನು ಸವೆಸುತ್ತ, ನಾಡಿನ ಜನರಿಗೆಲ್ಲ ತತ್ತ್ವವಿಚಾರಗಳ ಸೌರಭವನ್ನು ನಿಷ್ಕಾಮ ಕರ್ಮಯೋಗಿಯಾಗಿ ಬೀರುತ್ತಿದ್ದಾರೆ. ಇವರು ಯಾವುದೇ ಜಾತಿ ಧರ್ಮ ಮತ ಪಂಥ ಸಾಂಪ್ರದಾಯಗಳ ಬೇಧವಿಲ್ಲದೆ, ಬಡವ ಶ್ರೀಮಂತ, ರಾಜ ರಂಕ ಎಂಬ ಬೇಧವಿಲ್ಲದೆ, ಎಲ್ಲರನ್ನೂ ಸಮಭಾವದಿಂದ ದೇವಭಾವದಿಂದ ನೋಡುತ್ತಿರುವದು

ಇವರ ಆದರ್ಶವಾಗಿದೆ. 'ದೇವರು ದೀನ ದಲಿತರ ಹಾಗೂ ಶೋಷಿತರ ಹೃದಯದಲ್ಲಿ ಇರುತ್ತಾನೆ, ಅವರ ಸೇವೆಯನ್ನು ಮಾಡುವದೇ ಈಶ್ವರ ಪೂಜೆಯಾಗಿದೆ' ಎಂದು ಅವರು ಮನಗಂಡು ಆಚರಿಸುತ್ತಿದ್ದಾರೆ. "ವಿಶ್ವವೆ ಮಂದಿರ, ಜೀವರೆ ದೇವರು, ನಾವೇ ಪೂಜಾರಿಗಳು" ಎಂಬ ವಿಚಾರಧಾರೆಯಂತೆ ಅವರು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ.

ಇವರು ಸ್ಥಾಪಿಸಿದ ಅಧ್ಯಾತ್ಮ ಕೇಂದ್ರಗಳಲ್ಲಿ ದಿನನಿತ್ಯವೂ ಅಧ್ಯಾತ್ಮ ಪ್ರವಚನಗಳು ನಡೆಯುತ್ತವೆ. ಇಲ್ಲಿ ಶಾಸ್ತ್ರ ಶ್ರವಣ, ಮನನ, ನಿಧಿಧ್ಯಾಸನಗಳೇ ಜರುಗುತ್ತವೆ. ಸ್ಥೂಲ ಜೀವಿಗಳಿಗೆ ಅಷ್ಟೇ ಅಲ್ಲದೆ, ಸೂಕ್ಷ್ಮ ಜೀವಿಗಳಾದ ಸಾವಿರಾರು ಪ್ರೇತಗಳಿಗೂ ಸಂತೋಷಗೊಳಿಸುವ ಪವಿತ್ರ ಕಾರ್ಯದಲ್ಲಿ ಇವರು ತೊಡಗಿದ್ದಾರೆ. ಪಾಪಾತ್ಮ ಜೀವಿಗಳು ಪಿಶಾಚಿ ರೂಪದಿಂದ ಬಂದು ತಮ್ಮ ದುಃಖವನ್ನು ತೋಡಿಕೊಳ್ಳುತ್ತವೆ. ಅವರು ಊಟದಲ್ಲಿ ರುಚಿಯನ್ನು ಪರಿಗಣಿಸದೆ, ಗಂಜಿ ಪಾಯಸಗಳಲ್ಲಿ ಭೇದವೆನಿಸದೆ, ಕಹಿ ಸಿಹಿಗಳನ್ನು ಸಮವೆಂದು ಕಾಣುತ್ತಾರೆ; ದೊರಕಿದ್ದುದರಲ್ಲಿಯೇ ತೃಪ್ತಿಯನ್ನು ಹೊಂದುತ್ತಾರೆ; ಇನ್ನೊಂದು ಯಾವದಕ್ಕೂ ಆಶೆಯನ್ನು ಮಾಡುವದಿಲ್ಲ. ಗಾದೆಯ ಮೇಲೆ ಮಲಗಿದರೂ ಅಷ್ಟೇ, ಚೀಲದ ತಟ್ಟಿನ ಮೇಲೆ ಮಲಗಿದರೂ ಅಷ್ಟೇ; ಹೊದ್ದುಕೊಳ್ಳುವದಕ್ಕೆ ರತ್ನಗಂಬಳಿ ಇದ್ದರೂ ಅಷ್ಟೇ, ಹರಕು ಕಂಬಳಿ ಇದ್ದರೂ ಅಷ್ಟೇ; ಏನೂ ಇರದಿದ್ದರೂ ಅಷ್ಟೇ; ಸೊಳ್ಳೆಗಳು ಇರಲಿ, ತಗಣಿಗಳು ಇರಲಿ, ಚಿಕ್ಕಾಡುಗಳು ಇರಲಿ, ಮಲಗುವಷ್ಟರಲ್ಲಿಯೇ ನಿದ್ರೆಗೆ ಹೋಗುತ್ತಾರೆ.

ಶ್ರೀ ಸುರೇಂದ್ರರ ಪತ್ನಿಯಾದ ಶ್ರೀಮತಿ ಶಕುಂತಲಮ್ಮನವರು ಶ್ರೀ ಸುರೇಂದ್ರರ ಎಲ್ಲ ಸೇವಾ ಕಾರ್ಯಗಳಲ್ಲಿ ಸರ್ವ ರೀತಿಯಿಂದಲೂ ಸಹಕರಿಸಿದ್ದಾರೆ. ಇವರಿಗೆ ಮೂರು ಜನ ಹೆಣ್ಣು ಮಕ್ಕಳು; (ವನಜಾ, ಭಾರತಿ, ಜ್ಯೋತಿ) ಇವರೆಲ್ಲರೂ ವಿದ್ಯಾವಂತರು, ಅವರೆಲ್ಲರ ಲಗ್ನವು ಆಗಿದೆ, ಇವರಿಗೆ ಮಕ್ಕಳೂ ಆಗಿದ್ದಾರೆ, ಅವರ ಎರಡನೆಯ ಮಗಳಾದ ಶ್ರೀಮತಿ ಭಾರತಿಯವರು ಕರ್ನಾಟಕ ರಾಜ್ಯದ ಔಷಧ ಇಲಾಖೆಯಲ್ಲಿ ವೈಜ್ಞಾನಿಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು; ಆಗ ಅವರು ಕ್ಯಾನ್ಸರ್ ಬಾಧೆಯಿಂದ ಬಳಲಿ, 2016 ರಲ್ಲಿ ಮೃತ್ಯುವಶರಾದರು. ಆಗ ಪ್ರೊ॥ ಸುರೇಂದ್ರರು ಎಳ್ಳಷ್ಟೂ ದುಃಖಕ್ರಾಂತರಾಗದೆ ಸಮಚಿತ್ತರಾಗಿಯೇ ಇದ್ದರು. ಅವರ ದೊಡ್ಡ ಮಗಳು ಫಾರ್ಮಾಸಿಷ್ಟ್‌ರಾಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅವರ ಚಿಕ್ಕ ಮಗಳಾದ ಡಾ॥ ಜ್ಯೋತಿಯವರು ವೈದ್ಯರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

## ಪ್ರೊ॥ ಸುರೇಂದ್ರರವರ ವಿಚಾರ ಧಾರೆ

ವಿಶಾಲವಾದ ವಿಶ್ವವೇ ಮಂದಿರ, ಜೀವಿಗಳೆಲ್ಲರೂ ದೇವರು, ನಾವೇ ಪೂಜಾರಿಗಳು. ಜೀವಿಗಳನ್ನು ಸಂತೋಷಗೊಳಿಸುವದೇ ದೇವ ಪೂಜೆ. ಒಬ್ಬರಿಗೊಬ್ಬರು ದೇವರೆಂದು ತಿಳಿದುಕೊಂಡು ಸಂತೋಷಗೊಳಿಸಿದರೆ ವಿಶ್ವದಲ್ಲಿ ಶಾಂತಿಯು ನೆಲೆಸುವದು. ನಾವೆಲ್ಲರೂ ಒಂದೇ ದೇವನ ದೇಟಿನ ಕಾಯಿಗಳು, ಒಂದೇ ದೇಟಿನ ಮಾವುಗಳು. ದೇಹಗಳು ಬೇರೆ ಬೇರೆಯಾದರೂ ನಮ್ಮೆಲ್ಲರ ದೇಹಗಳಲ್ಲಿ ಇರುವ

ಪರಮಾತ್ಮನು ಒಬ್ಬನೇ ಇದ್ದಾನೆ, ಆದ್ದರಿಂದ ನಾವೆಲ್ಲರೂ ಒಂದು. ಪರಸ್ಪರ ಪ್ರೇಮವೇ ಜೀವನ, ದ್ವೇಷವೇ ಮರಣ, ದ್ವೇಷವಿದ್ದವನೇ ಪಿಶಾಚಿಯು. ಪ್ರೇಮದಿಂದ ದ್ವೇಷವು ಶಾಂತವಾಗುವದು, ದ್ವೇಷದಿಂದ ದ್ವೇಷವು ಎಂದೂ ಶಾಂತವಾಗಲಾರದು. ಪ್ರೇಮ ಮಾಡುವದು ದೇವನ ಸ್ವಭಾವ, ದ್ವೇಷ ಮಾಡುವದು ರಾಕ್ಷಸಿ ಸ್ವಭಾವ. ಏಕತ್ವವೇ ಜೀವನ, ಭೇದತ್ವವೇ ಮರಣ. ನಾವು ಎಲ್ಲರೂ ಒಂದು ಎಂದಾಗ ಸುಖ, ನಾನು ಹೆಚ್ಚು, ನೀನು ಕಡಿಮೆ ಎಂದಾಗ ದುಃಖ. ಮನೆಯಲ್ಲಾಗಲಿ ಓಣಿಯಲ್ಲಾಗಲಿ ಊರಲ್ಲಾಗಲಿ, ತಾಲೂಕು ಜಿಲ್ಲೆ ದೇಶ ಪ್ರಪಂಚದಲ್ಲಿಯೇ ಆಗಲಿ, ವೈರತ್ವವು ಇದ್ದರೆ ಮನೆ ಓಣಿ ಊರು ತಾಲೂಕು ಜಿಲ್ಲೆ ರಾಜ್ಯ ದೇಶ ಪ್ರಪಂಚದಲ್ಲೆಲ್ಲ ದುಃಖವೇ ನೆಲೆಸುವದು; ಆದ್ದರಿಂದ ಅಣ್ಣ ತಮ್ಮಂದಿರಾಗಲಿ, ಅತ್ತೆ ಸೊಸೆಯಂದಿರಾಗಲಿ, ನಾದಿನಿ ನೆಗೆನ್ನಿಯರು ಆಗಲಿ, ತಂದೆ ಮಕ್ಕಳು ಆಗಲಿ, ಯಾರಲ್ಲಿಯೇ ಆಗಲಿ, ಎಲ್ಲಿ ವೈರತ್ವವಿದೆಯೋ ಅಲ್ಲಿ ದುಃಖವೇ ಇರುವದು. ತನ್ನ ಸಿಟ್ಟು ತನಗೇ ವೈರಿ, ತನ್ನ ಶಾಂತಿ ತನಗೇ ಮಿತ್ರ, ತನ್ನ ಶಾಂತಿ ಪರರಿಗೆ ವೈರಿ. ತಾಳ್ಮೆಗಿಂತ ಅನ್ಯ ತಪವಿಲ್ಲ. ಲಗ್ನವಾಗುವದು ಪರಸ್ಪರ ಸೇವೆಗಾಗಿ ಮತ್ತು ಆತ್ಮನ ಸುಖವನ್ನು ಹೊಂದುವದಕ್ಕಾಗಿ ಇದೆ. ಮಕ್ಕಳನ್ನು ಹಡೆಯುವದಕ್ಕಾಗಿ ಮಾತ್ರ ಭೋಗವು, ಭೋಗದಿಂದ ಸುಖವನ್ನು ಪಡೆಯುವದಕ್ಕಾಗಿ ಅಲ್ಲ. ಪತಿ ಪತ್ನಿಯರಾಗುವದು ನೀತಿಯಿಂದ ನಡೆದು, ಆತ್ಮಜ್ಞಾನಿಗಳನ್ನು ಹಡೆಯುವದಕ್ಕಾಗಿ. ಚೆಂದದ ಬೆನ್ನು ಹತ್ತಿದರೆ ಪತಿವ್ರತವನ್ನಾಗಲಿ ಪತ್ನಿವ್ರತವನ್ನಾಗಲಿ ಪಾಲಿಸುವದು ಸಾಧ್ಯವೇ ಇಲ್ಲ. ಚೆಂದದ ಬೆನ್ನು ಹತ್ತಿದರೆ ಸ್ತ್ರೀ ಪುರುಷರ ಮೋಹದಲ್ಲಿ ಬಿದ್ದು, ವ್ಯಭಿಚಾರಿಗಳಾಗುವದೇ, ಬಡಿಸಿಕೊಂಡು ಚೆಂದಗೇಡಿಗಳಾಗುವದೇ; ಆದ್ದರಿಂದ ನೀತಿಯೇ ಚೆಂದ. ರೋಗಿ ನಕ್ಕಾಗ ವೈದ್ಯ ನಕ್ಕ, ರೋಗಿ ಅತ್ತಾಗ ವೈದ್ಯ ಅತ್ತ; ವೈದ್ಯರಿಗೆ ರೋಗಿಗಳೇ ದೇವರು, ವೈದ್ಯರೇ ರೋಗಿಗಳ ಪೂಜಾರಿಗಳು, ಇದೇ ವೈದ್ಯರ ನೀತಿಯು. ಆಹಾರ ನಿದ್ರೆ ಭಯ ಮೈಥುನಗಳೇ ಮಾನವನ ಜೀವನದ ಗುರಿಯಾದರೆ, ಶರೀರವನ್ನು ಬಿಟ್ಟ ಮೇಲೆ ಅವರು ನಾಯಿ ನರಿ ಹಂದಿಗಳಾಗಿ ಹುಟ್ಟಬೇಕಾಗುವದು. ಪರಸ್ತ್ರೀಯರನ್ನು ತಾಯಿಯಂತೆ, ಪರಪುರುಷರನ್ನು ತಂದೆಯಂತೆ, ಪರರ ವಸ್ತುಗಳನ್ನು ಮಣ್ಣಿನಂತೆ ಮತ್ತು ಎಲ್ಲರನ್ನು ತನ್ನಂತೆ ಎಂದು ತಿಳಿದುಕೊಳ್ಳುವವನೇ ಸಾಮಾನ್ಯ ಪಂಡಿತನು. ನೀವು ಶಿಕ್ಷಣವನ್ನು ಕಲಿಯದಿದ್ದರೂ ಅಡ್ಡಿಯಿಲ್ಲ, ಆದರೆ ಉಪಕಾರ ಮಾಡುವದನ್ನು ಕಲಿತರೆ ಸಾಕು, ತಮಗೆ ಅಪಕಾರ ಮಾಡಿದವರಿಗೆ ಉಪಕಾರ ಮಾಡುವದೇ ನೀತಿಯು.

ಕಾಮ ವಿಕಾರವು ಮದುವೆಯಾದರೂ ನಾಶವಾಗುವದಿಲ್ಲ, ಮದುವೆಯು ಆಗದಿದ್ದರೂ ನಾಶವಾಗುವದಿಲ್ಲ, ಆದ್ದರಿಂದ ಮದುವೆಯು ಆಗಲಿ ಅಥವಾ ಆಗದಿರಲಿ, ಯಾರು ವಿಚಾರದಿಂದ ಕಾಮನನ್ನು ನಾಶ ಮಾಡಿಕೊಳ್ಳುವರೋ ಅವರೇ ಸುಖಿಗಳು. ವಿಶ್ವವೇ ನನ್ನ ಮನೆ, ಜೀವ ಕುಲವೇ ನನ್ನ ಕುಟುಂಬ; ಜಗವೆಲ್ಲವೂ ನಾನೇ, ಜಗದೊಡೆಯನೂ ನಾನೇ. ವಿಷಯಗಳಲ್ಲಿ ಸುಖವಿಲ್ಲ, ಆತ್ಮನಲ್ಲಿಯೇ ಸುಖವಿದೆ. ವಿಷಯ ವಸ್ತುಗಳು, ನಿದ್ರೆ, ಮಾದಕ ಪದಾರ್ಥಗಳು, ಪ್ರಾಣಾಯಾಮ, ಮೂರ್ಛೆ, ಆಕಳಿಕೆ ಮುಂತಾದ ಉಪಾಧಿಗಳ ಮುಖಾಂತರ ಮನಸ್ಸು ನಿಶ್ಚಲವಾಗಿ, ಆ ನಿಶ್ಚಲ ಮನಸ್ಸಿನಲ್ಲಿ ಆತ್ಮನ ಆನಂದವೇ ಪ್ರತಿಬಿಂಬಿಸಿದಾಗ

ನಮಗೆ ಆನಂದದ ಅನುಭವವು ಆಗುವದು. ವಿಷಯಗಳ ಆಶೆಯಿಂದಲೇ ಜೀವನು ಹುಟ್ಟು ಸಾವುಗಳೆಂಬ ಕರ್ಮದ ಚಕ್ರದಲ್ಲಿ ಸಿಕ್ಕು ಬಳಲುತ್ತಿದ್ದಾನೆ. ಹಿತಾಹಿತ ವಿಚಾರವು ನಡೆಯದ ಮನೆಯು ಸ್ಮಶಾನವಿದ್ದಂತೆ, ಅಲ್ಲಿ ಪಿಶಾಚಿಗಳು ವಾಸವಾಗುತ್ತವೆ. ಜೀವವು ಇಂದೇ ಹೋಗಲಿ, ಆದರೆ ವಿಷಯ ವಾಸನೆಗಳು ಉಳಿಯಬಾರದು. ಮಾನವ ಜನ್ಮಕ್ಕಿಂತ ಶ್ರೇಷ್ಠವಾದ ಜನ್ಮವು ಈ ಲೋಕದಲ್ಲಿಯೇ ಇಲ್ಲ, ಏಕೆಂದರೆ ಅವನಿಗೆ ವಿವೇಕವಿದೆ, ಈ ವಿವೇಕದಿಂದ ಅವನು ದುಃಖವನ್ನು ಪೂರ್ಣವಾಗಿ ಕಳೆದುಕೊಂಡು, ಶಾಶ್ವತ ಸುಖವನ್ನು ಹೊಂದಬಲ್ಲನು, ಇದು ಉಳಿದ ಪಶು ಪಕ್ಷ್ಯಾದಿಗಳಿಗೆ ಸಾಧ್ಯವಿಲ್ಲ. ನೀವು ಈ ಪ್ರಪಂಚವನ್ನು ಎಷ್ಟು ಮರೆಯುತ್ತೀರಿ ಅಷ್ಟು ಸುಖಿಯಾಗುತ್ತೀರಿ, ಎಷ್ಟು ಪ್ರಪಂಚವನ್ನು ಹಚ್ಚಿಕೊಳ್ಳುತ್ತೀರಿ ಅಷ್ಟು ದುಃಖಿಯಾಗುತ್ತೀರಿ. ವಿಷಯಗಳ ಆಶೆಯನ್ನು ಹಿಡಿದುಕೊಂಡವರು ನೀತಿಯಿಂದ ನಡೆಯುವದು ಎಂದಿಗೂ ಸಾಧ್ಯವಿಲ್ಲ. ಮಾನವನು ನಿದ್ರೆಯಲ್ಲಿ ದೇಹ ಮತ್ತು ಪ್ರಪಂಚವನ್ನು ಮರೆತು ಬಿಟ್ಟು, ಮರೆತು ಅರಿವು ರೂಪಾಗಿ ಉಳಿಯುವದರಿಂದ ತಾತ್ಪೂರ್ತಿಕ ಸುಖವನ್ನು ಹೊಂದುವನು; ಈಗ ನಾವು ದೇಹ ಮತ್ತು ಪ್ರಪಂಚವನ್ನು ತಿಳಿದು ಬಿಟ್ಟು, ತಿಳಿದು ಅರಿವು ರೂಪಾಗಿ ಉಳಿದರೆ ಶಾಶ್ವತ ಆನಂದವು ಪ್ರಾಪ್ತಿಯಾಗುತ್ತದೆ. ಈ ಶವವು ನೀನಲ್ಲ, ಶಿವನೇ ನೀನು. ಮನಸ್ಸು ಚಂಚಲವಾದಾಗ ದುಃಖ, ಮನಸ್ಸು ನಿಶ್ಚಲವಾದಾಗ ಸುಖ. ವಿಶ್ವವು ಕೋಟಿ ಕೋಟಿ ಸಲ ನಾಶವಾಗಿ ಹೋದರೂ ಮಾನವನು ತಾನು ಮಾಡಿದ ಕರ್ಮದ ಫಲವನ್ನು ಉಂಡೇ ತೀರಿಸಬೇಕಾಗುವದು. ಎಲ್ಲಿಯವರೆಗೆ ದೇಹಭಾವ ಮತ್ತು ವಿಷಯಗಳ ವ್ಯಾಮೋಹವು ಇರುವದೋ, ಅಲ್ಲಿಯವರೆಗೆ ದುಃಖವು ಇದ್ದೇ ಇರುವದು. ಯಾವಾಗ ವಿಚಾರದಿಂದ ವಿಷಯಗಳ ವ್ಯಾಮೋಹವನ್ನು ಮೀರಿ, ಆತ್ಮ ಭಾವದಲ್ಲಿ ನೆಲೆಯಾಗಿ ನಿಲ್ಲುತ್ತೇವೆಯೋ, ಆಗ ಶಾಶ್ವತ ಸುಖವು ಪ್ರಾಪ್ತವಾಗುವದು.

ವಿಷಯ ವ್ಯಾಮೋಹವನ್ನು ವಿಚಾರವೆಂಬ ಬೆಂಕಿಯಿಂದ ಸುಟ್ಟು ಹಾಕಿ, ಆತ್ಮನಲ್ಲಿಯೇ ಸುಖವಿದೆ ಎಂದು ತಿಳಿದು, ಆತ್ಮನಲ್ಲಿ ನೆಲೆಯಾಗಿ ನಿಲ್ಲುವದೇ ತಪಸ್ಸು. ಮಾನವ ದೇಹವಿದ್ದು, ವಿವೇಕವು ಇಲ್ಲದಿದ್ದರೆ ಏನು ಫಲ? ಮಾನವನು ತನ್ನ ದೈವದ ಶಿಲ್ಪಿ ತಾನೇ ಇರುವನು. ನಾವು ಪಿಶಾಚಿಯಂಥ ಕೆಲಸವನ್ನು ಮಾಡಿ, ಪಿಶಾಚಿ ಜನ್ಮವನ್ನು ಪಡೆಯಲೂ ಬರುತ್ತದೆ, ಅಧ್ಯಾತ್ಮ ಸಾಧನೆಯನ್ನು ಮಾಡಿ ದೇವನಾಗಿ ಇರಲೂ ಬರುತ್ತದೆ. ಈ ವಿಶ್ವವು ಕೋಟಿ ಕೋಟಿ ಸಲ ನಾಶವಾದರೂ ತಾನು ಮಾಡಿದ ಕರ್ಮದ ಫಲವನ್ನು ಉಂಡೇ ತೀರಿಸಬೇಕಾಗುವುದು.

*****

## ಗ್ರಂಥ ಪೋಷಕರ ಪರಿಚಯ

ಶ್ರೀ ಸತ್ಯಪ್ಪ ಯಮನಪ್ಪ ಅಂಗಡಿ ಸಾ॥ಗುಂಡೇನಟ್ಟಿ ತಾ॥ಖಾನಾಪೂರ ಜಿ॥ಬೆಳಗಾವಿ ಇವರು ಈ ಗ್ರಂಥದ ಪೋಷಕರು. ಶ್ರೀ ಸತ್ಯಪ್ಪ ಯಮನಪ್ಪ ಅಂಗಡಿ ಇವರು ಶ್ರೀಮತಿ ಗಂಗಮ್ಮ ಇವರ ಪವಿತ್ರ ಉದರದಲ್ಲಿ ದಿನಾಂಕ 01-10-1963 ರಂದು ಜನಿಸಿದರು. ಶ್ರೀ ಸತ್ಯಪ್ಪನವರು, ತಂದೆ ಶ್ರೀ ಯಮನಪ್ಪ ಮತ್ತು ತಾಯಿ ಶ್ರೀಮತಿ ಗಂಗಮ್ಮನವರ ಪಾಲನೆ ಪೋಷಣೆಯಲ್ಲಿ ಬೆಳೆದರು. ಶ್ರೀ ಯಮನಪ್ಪ ಮತ್ತು ಶ್ರೀಮತಿ ಗಂಗಮ್ಮ ದಂಪತಿಗಳು ಪ್ರಾಮಾಣಿಕರು ಮತ್ತು ಸರಳ ಜೀವಿಗಳು ಇದ್ದರು.

ಶ್ರೀ ಯಮನಪ್ಪನವರು ಗುಂಡೇನಟ್ಟಿ ಗ್ರಾಮದ ಹಿರಿಯರಾದ ಶ್ರೀ ಬಾಳಪ್ಪ ಮತ್ತು ಶ್ರೀಮತಿ ಫಕ್ಕೀರವ್ವ ಅಂಗಡಿ ದಂಪತಿಗಳ ಜೇಷ್ಠ ಪುತ್ರರು. ಶ್ರೀ ಯಮನಪ್ಪ ಬಾಳಪ್ಪ ಅಂಗಡಿ ಇವರಿಗೆ ನಾಲ್ಕು ಜನ ಪುತ್ರರು ಮತ್ತು ಮೂರು ಜನ ಪುತ್ರಿಯರು ಇರುತ್ತಾರೆ. ಶ್ರೀ ಯಮನಪ್ಪನವರು ದಿ: 02-10-2009 ರಂದು ಶಿವಾಧೀನರಾದರು.

ಶ್ರೀಮತಿ ಗಂಗಮ್ಮನವರು ಬಚ್ಚನಕೇರಿ ಗ್ರಾಮದ ತಿಮ್ಮಾಪೂರ ಮನೆತನದ ಶ್ರೀ ಸತ್ಯಪ್ಪ ಮತ್ತು ಶ್ರೀಮತಿ ಬಸಮ್ಮ ತಿಮ್ಮಾಪೂರ ಇವರ ತೃತೀಯ ಸುಪುತ್ರಿಯರು. ಇವರು ಧೀರ ಕನ್ಯಾಮಣಿಯವರೂ, ಕಷ್ಟ ಸಹಿಷ್ಣುಗಳೂ, ದೀನ ದಲಿತರ ಬಗ್ಗೆ ತುಂಬಾ ದಯಾಪರರೂ ಆಗಿದ್ದರು. ಶ್ರೀಮತಿ ಗಂಗಮ್ಮನವರು ದಿ: 14-08-2016 ರಂದು ಶಿವಾಧೀನರಾದರು.

ಶ್ರೀ ಯಮನಪ್ಪ ಮತ್ತು ಶ್ರೀಮತಿ ಗಂಗಮ್ಮ ದಂಪತಿಗಳು ಒಕ್ಕಲುತನ, ಕಿರಾಣಿ ವ್ಯಾಪಾರ ಮತ್ತು ಹೈನುಗಾರಿಕೆಯಿಂದ ಜೀವನ ಸಾಗಿಸುತ್ತಿದ್ದರು.

ಇವರು ಗುಂಡೇನಟ್ಟಿ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣವನ್ನು ಮುಗಿಸಿಕೊಂಡರು. ನಂತರ ಇವರು ಚಿಕ್ಕ ವಯಸ್ಸಿನಲ್ಲಿಯೇ ಒಕ್ಕಲುತವನ್ನು ಮಾಡಹತ್ತಿದರು. ಶ್ರೀ ಸತ್ಯಪ್ಪನವರಿಗೆ ಚಿಕ್ಕಂದಿನಿಂದಲೇ ಅಧ್ಯಾತ್ಮದ ಕಡೆಗೆ ಒಲವು ಇತ್ತು. ಇವರು ಅಧ್ಯಾತ್ಮ ಪ್ರವಚನದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ನಂತರ ಪ್ರಾರಬ್ಧಕ್ಕನುಸಾರವಾಗಿ ನೀತಿ ಸಂಪನ್ನಳಾದ ಮತ್ತು ಅಕ್ಕನ ಮಗಳಾದ ಶ್ರೀಮತಿ ರುದ್ರಮ್ಮಳೊಡನೆ ಇವರ ವಿವಾಹವಾಯಿತು. ಶ್ರೀಮತಿ ರುದ್ರಮ್ಮನವರು ಅವರ ಪತಿಯವರ ಒಕ್ಕಲುತನದ ವ್ಯವಹಾರದಲ್ಲಿ ಸಹಕರಿಸಿದರು. ಶ್ರೀ ಸತ್ಯಪ್ಪ ಮತ್ತು ಶ್ರೀಮತಿ ರುದ್ರಮ್ಮ ದಂಪತಿಗಳಿಗೆ ಕ್ರಮವಾಗಿ ಗೌರಮ್ಮ, ಗಿರಿಜಾ, ಶಂಕರ, ಸವಿತಾ ಎಂಬ ನಾಲ್ಕು ಮಕ್ಕಳು ಜನಿಸಿದರು. ಕುಮಾರಿ ಗೌರಮ್ಮಳು ಹದಿಮೂರನೆಯ ವಯಸ್ಸಿನಲ್ಲಿ ಹೃದಯಾಘಾತದಿಂದ ಅಕಾಲ ಮೃತ್ಯುವಿಗೆ ಈಡಾದಳು. ಇವರ ಎರಡನೆಯ ಪುತ್ರಿಯಾದ ಕುಮಾರಿ ಗಿರಿಜಾಳು ಹದಿನಾಲ್ಕನೆಯ ವಯಸ್ಸಿನಲ್ಲಿ ಹೃದಯಾಘಾತದಿಂದ ಅಕಾಲ ಮೃತ್ಯುವಿಗೆ ಈಡಾದಳು. ಮೂರನೆಯ ಪುತ್ರನಾದ

ಶ್ರೀ ಶಂಕರನು ಡಿಪ್ಲೊಮಾ ಅಗ್ರಿಕಲ್ಚರ ಕೋರ್ಸನ್ನು ಮುಗಿಸಿಕೊಂಡು ಒಕ್ಕಲುತನದಲ್ಲಿ ತಂದೆಗೆ ಸಹಕರಿಸುತ್ತಿದ್ದಾರೆ. ಕುಮಾರಿ ಸವಿತಾಳು ಬಿ.ಎ. ಡಿಗ್ರಿಯನ್ನು ಮುಗಿಸಿಕೊಂಡು, ತಾಯಿಯವರಿಗೆ ಮನೆಗೆಲಸದಲ್ಲಿ ಸಹಕರಿಸುತ್ತಿದ್ದಾಳೆ.

ಶ್ರೀ ಸತ್ಯಪ್ಪನವರಿಗೆ ಅಧ್ಯಾತ್ಮದ ಕಡೆಗೆ ಒಲವು ಇದ್ದ ಕಾರಣ ಅವರು ಗುಂಡೇನಟ್ಟಿ ಗ್ರಾಮದ ಶ್ರೀ ಸುಖಯೋಗಾಶ್ರಮದ ಸತ್ಸಂಗದ ಬಳಗದಲ್ಲಿ 1991 ರಲ್ಲಿ ಸೇರಿಕೊಂಡರು. ನಂತರ ಶ್ರೀ ಸತ್ಯಪ್ಪನವರು ದಿನಾಲೂ ತಪ್ಪದೆ ಶಾಸ್ತ್ರ ಶ್ರವಣಕ್ಕೆ ಬರಹತ್ತಿದರು. ನಂತರ ಇವರು ಗುಂಡೇನಟ್ಟಿ ಗ್ರಾಮದ ಸಾವಯವ ಕೃಷಿಕರ ಸಂಗದ ನಿರ್ದೇಶಕರಾದರು. ಈಗ ಅವರು ನಿಷ್ಠಾವಂತ ಸಾವಯವ ರೈತರು ಆಗಿದ್ದಾರೆ. ಇವರು ಪೂಜ್ಯ ಶ್ರೀ ಪ್ರೊ. ಸುರೇಂದ್ರ ಎಸ್. ಕುರುಬರ ಮತ್ತು ಶ್ರೀ ಭೀಮಣ್ಣ ಬಸವಣ್ಣೆಪ್ಪ ಕಿಲಾರಿಯವರ ಪ್ರಭಾವದಿಂದ ಪ್ರೋತ್ಸಾಹಿತರಾಗಿ **"**ಪರೋಪಕಾರಾಯ ಫಲಂತಿ ವೃಕ್ಷಾಃ, ಪರೋಪಕಾರಾಯ ವಹಂತಿ ನದ್ಯಃ, ಪರೋಪಕಾರಾಯ ದುಹಂತಿ ಗಾವಃ, ಪರೋಪಕಾರಾರ್ಥಂ ಇದಂ ಶರೀರಂ**"** ಎಂಬ ಸುಭಾಷಿತದ ಅರ್ಥಕ್ಕನುಸಾರವಾಗಿ ಶ್ರೀ ಸತ್ಯಪ್ಪನವರು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇವರು ಪ್ರಾಮಾಣಿಕವಾಗಿ ಗಳಿಸಿದ ಸಂಪತ್ತನ್ನು **"**ಅನ್ನದಾತಾ ಸುಖಿಭವ, ಜ್ಞಾನದಾತಾ ಸುಖಿಭವ**"** ಎಂಬ ಉಕ್ತಿಯಂತೆ ಅಧ್ಯಾತ್ಮ ಗ್ರಂಥದ ಪೋಷಕರಾದರೆ ಜನ್ಮ ಸಾರ್ಥಕವಾಗುವದೆಂದು ಮತ್ತು ತಮ್ಮ ಮೃತರಾದ ತಂದೆ ತಾಯಿಯವರ ಆತ್ಮಕ್ಕೆ ಶಾಂತಿ ಲಭಿಸುವದೆಂಬ ಉದ್ದೇಶದಿಂದ ಶ್ರೀಮತಿ ರುದ್ರಮ್ಮ ಮತ್ತು ಶ್ರೀ ಸತ್ಯಪ್ಪ ದಂಪತಿಗಳು **'**ಗುರಿ ಒಂದೇ ಸಾಧನೆ ಒಂದೇ**'** ಎಂಬ ಈ ಗ್ರಂಥಕ್ಕೆ ಪೋಷಕರಾದರು. ಈ ದಂಪತಿಗಳು ಈಗ ಅಧ್ಯಾತ್ಮ ಸಾಧನೆಯಲ್ಲಿ ಕಾಲಕಳೆಯುತ್ತಿದ್ದಾರೆ. ಅವರಿಂದ ಇನ್ನೂ ಮುಂದೆ ಅನೇಕ ಪರೋಪಕಾರದ ಕೆಲಸಗಳು ಜರುಗಲಿ, ಅವರಿಗೆ ಮತ್ತು ಅವರ ಕುಟುಂಬದವರಿಗೆ ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ದೀರ್ಘ ಆಯುಷ್ಯ ಮತ್ತು ಆರೋಗ್ಯವನ್ನು ದಯಪಾಲಿಸಿ ಅವರನ್ನು ಉದ್ಧಾರ ಮಾಡಲಿ ಎಂದು ಕೋರುತ್ತೇನೆ.

**ಪ್ರೊ|| ಸುರೇಂದ್ರ ಎಸ್. ಕುರುಬರ**
ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ
ಮು.ಹಂಗರಕಿ, ಪೋ.ಗರಗ, ತಾ/ಜಿ.ಧಾರವಾಡ

# ಗುರಿ ಒಂದೇ, ಸಾಧನೆ ಒಂದೇ

ನನ್ನ ಗುರುಗಳಾದ ಪೂಜ್ಯ ಶ್ರೀ ಗುರುದೇವ ಆತ್ಮಾನಂದರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ವಿವರಿಸಿ, ಅವರು ಬೋಧಿಸಿದ ತತ್ತ್ವವಿಚಾರವನ್ನು ಪ್ರಶ್ನೋತ್ತರ ರೂಪದಲ್ಲಿ ವಿವರಿಸಿ ನನ್ನ ಅಳಿಲು ಸೇವೆಯನ್ನು ಸಲ್ಲಿಸ ಬಯಸುತ್ತೇನೆ.

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು 1904 ರಲ್ಲಿ ಪರಮ ತಪಸ್ವಿಗಳೂ, ಅವತಾರಿ ಪುರುಷರೂ ಆದ, ಪೂಜ್ಯ ಶ್ರೀ ಸದ್ಗುರು ಶಿವಾನಂದರ (ನಾಗನೂರ–ಗದಗ) ಏಕಮೇವ ಮಾನಸ ಮತ್ತು ಔರಸ ಪುತ್ರರಾಗಿ, ಶ್ರೀಮತಿ ನೀಲಮ್ಮನವರ ಪವಿತ್ರ ಉದರದಿಂದ ಜನಿಸಿದರು. ಬಾಲ್ಯದಿಂದಲೇ ಅವರಿಗೆ ಅಧ್ಯಾತ್ಮದ ತೀವ್ರ ಸಂಸ್ಕಾರವಿತ್ತು. ಬಾಲಕರಿದ್ದಾಗ ಅವರಿಗೆ ಲೌಕಿಕ ಶಿಕ್ಷಣವನ್ನು ಕಲಿಯುವದರ ಕಡೆಗೆ ಲಕ್ಷ್ಯವಿರಲಿಲ್ಲ. ಅವರು ತಮ್ಮ ತಂದೆಯವರ ವಿಶೇಷ ಪೋಷಣೆಯಲ್ಲಿಯೇ ಬೆಳೆದರು. ಅವರು ತಮ್ಮ ತಂದೆಯವರ ಆಜ್ಞೆ ಮತ್ತು ಒತ್ತಾಯದ ಮೇರೆಗೆ ಲೌಕಿಕ ಶಿಕ್ಷಣವನ್ನು ಕಲಿತರು. ಅವರು ಪ್ರಾಥಮಿಕ ಶಾಲೆಯಲ್ಲಿದ್ದಾಗ ರಜೆಯ ದಿನಗಳಲ್ಲಿ ತಮ್ಮ ಹೊಲಕ್ಕೆ ಹೋಗಿ, ಮೂರ್‍ನಾಲ್ಕು ತಾಸುಗಳವರೆಗೆ ಆತ್ಮಧ್ಯಾನದಲ್ಲಿ ಮಗ್ನರಾಗುತ್ತಿದ್ದರು. ಪೂಜ್ಯರು ಪ್ರಾಥಮಿಕ ಶಾಲೆಯಲ್ಲಿದ್ದಾಗ ಅವರ ತಂದೆಯವರು ತುರ್ಯಸ್ಥಿತಿಯನ್ನು ಹೊಂದುತ್ತಿದ್ದರು. ಅದು ಎರಡು ಮೂರು ದಿನಗಳವರೆಗೆ ಮುಂದುವರೆಯುತ್ತಿತ್ತು. ಆಗ ಪೂಜ್ಯ ಶ್ರೀ ಆತ್ಮಾನಂದರು ತಮ್ಮ ತಂದೆಯವರ ತುರ್ಯಸ್ಥಿತಿಯನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿ, ಅದರ ಗೂಢಾರ್ಥವನ್ನು ತಿಳಿದುಕೊಂಡರು. ತಮ್ಮ ತಂದೆಯವರ ಆಜ್ಞೆಯ ಮೇರೆಗೆ ಅವರು 1932 ರಲ್ಲಿ 'ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ' ಎಂಬ ವಿಷಯವನ್ನು ತೆಗೆದುಕೊಂಡು, ಬನಾರಸ ಹಿಂದೂ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ರಜೆಯ ದಿನಗಳಲ್ಲಿ ಪೂಜ್ಯ ಶ್ರೀ ಆತ್ಮಾನಂದರು ತಮ್ಮ ತಂದೆಯವರ ಸಂಗದಲ್ಲಿಯೇ ಇದ್ದುಕೊಂಡು, ಅವರ ಪ್ರವಚನಗಳನ್ನು ಕೇಳುತ್ತ, ಅವರ ಮಾರ್ಗದರ್ಶನದಂತೆ ಧ್ಯಾನಕ್ಕೆ ಕೂಡ್ರುತ್ತಿದ್ದರು. ಅವರಿಗೆ ಯಾವದೇ ಲೌಕಿಕ ಕ್ರಿಯೆಯ ಕಡೆಗೆ ಇಚ್ಛೆ ಮತ್ತು ಲಕ್ಷ್ಯವು ಇದ್ದಿಲ್ಲ. ತಮ್ಮ ತಂದೆಯವರ ವಿಶೇಷ ಮಾರ್ಗದರ್ಶನದಿಂದ ಮತ್ತು ತಮ್ಮ ಹಿಂದಿನ ಜನ್ಮಗಳ ಅಧ್ಯಾತ್ಮ ಅಭ್ಯಾಸದ ತೀವ್ರ ಸಂಸ್ಕಾರದಿಂದ ತುರ್ಯಸ್ಥಿತಿಯನ್ನು ಹೊಂದಿಯೇ ತೀರಬೇಕೆಂದು ನಿಶ್ಚಯಿಸಿದರು. ಎಲ್ಲ ಅಧಿಕಾರ, ಸಂಪತ್ತು, ಐಷಾರಾಮದ ಜೀವನ ಮತ್ತು ಲೋಕ ಪ್ರಸಿದ್ಧಿಯನ್ನು ನಿರ್ಲಕ್ಷಿಸಿದರು. ಅವರು ಕೆಲವು ಕಾಲದವರೆಗೆ ಸಂಚಾರವನ್ನು ಕೈಕೊಂಡರು. ಆಗ ಅವರು ಕೇವಲ ಆತ್ಮಧ್ಯಾನದಲ್ಲಿಯೇ ತೊಡಗಿ ಅಲ್ಪಕಾಲದಲ್ಲಿಯೇ ತುರ್ಯಸ್ಥಿತಿಯನ್ನು ಹೊಂದಿದರು. ತಾವು ಅನುಭವಿಸಿದ ಪರಮಾನಂದವನ್ನು ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ ವೈಯ್ಯಾಕರಣಿ

ಸ್ಥಿತಿಯಿಂದ ಐವತ್ತು ವರ್ಷಗಳವರೆಗೆ ನಿರಂತರ ಬೋಧಮಾಡಿ 19.12.1983 ರಂದು ಮಹಾಸಮಾಧಿಯನ್ನು ಹೊಂದಿದರು.

ಪ್ರಶ್ನೆ : ಜಾತಿಗಳೆಷ್ಟಿವೆ?

ಉತ್ತರ : ಎಲ್ಲರ ಜಾತಿಯು ಒಂದೇ ಇದೆ. ಜಾತಿಯು ಹುಟ್ಟುವಿಕೆಯನ್ನು ಸೂಚಿಸುತ್ತದೆ. ನಾವೆಲ್ಲರೂ ತಾಯಿಯ ಗರ್ಭದಿಂದಲೇ ಹುಟ್ಟುತ್ತೇವೆ. ತಾಯಿಯ ಗರ್ಭವು ಅತಿ ಹೊಲಸು ಇರುವದು. ಆದ್ದರಿಂದ ನಾವೆಲ್ಲರೂ ಹೊಲೆ ಜಾತಿಯವರೇ. ಆದರೆ ವಿಚಾರ ಮಾಡಿ ನೋಡಿದರೆ ಪಂಚಭೂತಾತ್ಮಕವಾದ ಜಡಶರೀರವು ನಾವಲ್ಲ. ಏಕೆಂದರೆ ನಾವು ಜಡಶರೀರವನ್ನು ತಿಳಿಯುತ್ತೇವೆ. ನಾವು ಯಾವುದನ್ನು ತಿಳಿಯುತ್ತೇವೆಯೋ ಅದು ನಾವು ಎಂದೂ ಆಗಲಾರೆವು, ಅಂದರೆ ನಾವು ತಿಳಿಯುವವರಾದೆವು. ಈ ತಿಳುವಳಿಕೆಗೆ ದೇವರು ಎನ್ನುವದು ಮತ್ತೊಂದು ಹೆಸರು. ಅಂದಮೇಲೆ ಈ ತಿಳುವಳಿಕೆಯು ಎಲ್ಲಿಂದ ಹುಟ್ಟಿತು? ಈ ತಿಳುವಳಿಕೆಯನ್ನು ನಮಗೆ ಯಾರು ಕೊಟ್ಟರು? ಎಂದು ವಿಚಾರ ಮಾಡಿದಾಗ, ತಿಳುವಳಿಕೆಯನ್ನು ನಮಗೆ ಯಾರೂ ಕೊಟ್ಟಿಲ್ಲ, ಅದು ಸ್ವಯಂ ಸಿದ್ಧವಿದೆ. ಅದು ನಮ್ಮ ನಿಜ ಸ್ವರೂಪವೇ ಆಗಿದೆ. ಆದ್ದರಿಂದ ನಾವೆಲ್ಲರೂ ದೇವಜಾತಿಯವರೇ. ಹೀಗೆ ವಿಚಾರ ಮಾಡದಿದ್ದಾಗ, ಅಂದರೆ ತಪ್ಪು ತಿಳುವಳಿಕೆಯಲ್ಲಿ ನಾವೆಲ್ಲರೂ ಹೊಲೆ ಜಾತಿಯವರೇ ಮತ್ತು ಮೇಲಿನಂತೆ ವಿಚಾರ ಮಾಡಿದರೆ ನಾವೆಲ್ಲರೂ ದೇವ ಜಾತಿಯವರೇ. ಹೀಗೆ ಜಾತಿಯು ಒಂದೇ ಇದೆ. ಆದರೆ ನಾವು ಅಜ್ಞಾನದಿಂದ ಅನೇಕ ಜಾತಿಗಳನ್ನು ಕಲ್ಪಿಸಿಕೊಂಡು; ನಮ್ಮ ಜಾತಿ ಹೆಚ್ಚು, ನಿಮ್ಮ ಜಾತಿಯು ಕಡಿಮೆ ಎಂದು ವ್ಯರ್ಥವಾಗಿ ಬಡಿದಾಡಿ, ಕೊಲೆ ಸುಲಿಗೆ ಮುಂತಾದ ಪಾಪ ಕೃತ್ಯಗಳನ್ನು ಮಾಡಿ, ಅತಿ ದುಃಖಕ್ಕೀಡಾಗುತ್ತೇವೆ. ಹೀಗೆ ಎಲ್ಲರ ಜಾತಿಯು ಒಂದೇ ಎಂಬುದು ಎಲ್ಲಿಯವರೆಗೆ ದೃಢವಾಗುವದಿಲ್ಲವೋ, ಅಲ್ಲಿಯವರೆಗೆ ಜಾತಿಯ ಗಲಭೆಗಳು ನಡೆದು, ಮಾನವರು ಅತಿ ದುಃಖಕ್ಕೀಡಾಗುತ್ತಾರೆ. ಆದ್ದರಿಂದ ಜಾತಿಯು ಒಂದೇ ಎಂಬುದನ್ನು ನಾವು ಆಚರಣೆಯಲ್ಲಿ ತಂದಾಗ ಮಾನವರಿಗೆ ಜಾತಿಯ ಗಲಭೆಗಳಿಂದಾಗುವ ದುಃಖವು ತಪ್ಪುವದು.

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು, ಎಲ್ಲರೂ ದೇವ ಜಾತಿಯವರೇ ಎಂಬುದನ್ನು ತಮ್ಮ ಆಚರಣೆಯಲ್ಲಿ ತಂದಿದ್ದರು. ಅವರು ತಮ್ಮಲ್ಲಿಗೆ ಬರುವ ಭಕ್ತಾದಿಗಳನ್ನು, ಅವರು ಯಾವ ಜಾತಿಯವರು ಎಂಬುದಾಗಿ ಎಂದೂ ಕೇಳಲಿಲ್ಲ. ಅವರು ಮಾನವರಲ್ಲಿ ಯಾವದೇ ರೀತಿಯ ಜಾತಿ ಭೇದವನ್ನು ಲಕ್ಷಿಸದೆ ಅವರಲ್ಲಿರುವ ದೇವತ್ವವನ್ನೇ ಲಕ್ಷಿಸಿ, ಅವರನ್ನು ಸಮಭಾವದಿಂದ ಕಾಣುತ್ತಿದ್ದರು.

ಪ್ರಶ್ನೆ : ಮತಗಳೆಷ್ಟಿವೆ?

ಉತ್ತರ : ಎಲ್ಲರ ಮತವು ಒಂದೇ ಇದೆ. ಹೇಗೆಂದರೆ 'ಮತ' ಎಂದರೆ ಅಭಿಪ್ರಾಯ, ಬಯಕೆ ಅಥವಾ ಆಶೆ. ಎಲ್ಲರಿಗೂ ಯಾವುದರ ಬಯಕೆಯಿರುವದು? ಎಲ್ಲರೂ ಎಳ್ಳಷ್ಟೂ ದುಃಖವು ಬೇಡ, ಪೂರ್ಣ ಸುಖವು ಬೇಕು ಎಂದು ಬಯಸುತ್ತಾರೆ.

ಮಾನವರು ಯಾವದೇ ಉದ್ಯೋಗವನ್ನು ಕೈಕೊಂಡರೂ ಅದರಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳುಳ್ಳ ವಿಷಯ ವಸ್ತುಗಳನ್ನು ಗಳಿಸಿ, ಅವುಗಳನ್ನು ಭೋಗಿಸಿ, ಪೂರ್ಣ ಸುಖವನ್ನು ಹೊಂದಲು ಪ್ರಯತ್ನಿಸುತ್ತಿದ್ದಾರೆ. ಹೀಗೆ ಈ ಜಗತ್ತಿನಲ್ಲಿ ಸುಖವನ್ನು ಬಯಸದವರಾರು? ಎಂದು ಕೇಳಿದರೆ ಯಾರೂ ಇಲ್ಲ ಎಂದು ಹೇಳಬೇಕಾಗುತ್ತದೆ. ಅಂದರೆ ಎಲ್ಲರೂ ಸುಖವನ್ನು ಬಯಸುವವರೇ. ಆದ್ದರಿಂದ ಎಲ್ಲರ ಮತವು ಒಂದೇ ಇದೆ, ಅದೆಂದರೆ ಸುಖಮತವು. ಆದರೆ ಅಜ್ಞಜೀವಿಗಳು ಅನೇಕ ಮತಗಳನ್ನು ಕಲ್ಪಿಸಿಕೊಂಡು ನಮ್ಮ ಮತವು ಹೆಚ್ಚು, ನಿಮ್ಮ ಮತವು ಕಡಿಮೆ, ಎಂದು ಬಡಿದಾಡಿ ದುಃಖಕ್ಕೀಡಾಗುತ್ತಾರೆ. ಮತದ ಅಭಿಮಾನದಿಂದಾಗಿ ಆಗುವ ಈ ದುಃಖವು ತಪ್ಪಬೇಕಾದರೆ ಎಲ್ಲರ ಮತವು ಒಂದೇ, ಎಂಬುದು ನಮ್ಮ ಆಚರಣೆಯಲ್ಲಿ ಬರಬೇಕು.

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ತಮ್ಮಲ್ಲಿ ಬರುವವರಿಗೆ, ಅವರು ಯಾವ ಮತದವರು ಎಂಬುದಾಗಿ ಎಂದೂ ಕೇಳಲಿಲ್ಲ. ಎಲ್ಲರ ಮತವು ಒಂದೇ, ಅದೆಂದರೆ ಸುಖಮತ ಎಂದು ತಿಳಿಸಿಕೊಡುತ್ತಿದ್ದರು. 'ಎಲ್ಲರಿಗೂ ಸುಖವೇ ಬೇಕು, ಸುಖವೇ ಎಲ್ಲರ ಮತವು' ಎಂದು ಬೋಧಿಸುತ್ತಿದ್ದರು. ಜನ ಗಣತಿಯು ನಡೆದಾಗ ಒಮ್ಮೆ ಒಬ್ಬ ಪ್ರಾಥಮಿಕ ಶಾಲಾ ಗುರುಗಳು ಪೂಜ್ಯ ಶ್ರೀ ಆತ್ಮಾನಂದರನ್ನು ಅವರ ಕುಲ ಯಾವದು? ಮತ್ತು ಮತ ಯಾವದು? ಎಂಬುದಾಗಿ ಕೇಳಿದರು. ಆಗ ಪೂಜ್ಯರು, ತಮ್ಮ ಕುಲವು ಋಷಿ ಕುಲವೆಂದೂ ಮತ್ತು ತಮ್ಮ ಮತವು ಸುಖ ಮತವೆಂದೂ ಹೇಳಿದರು. ಪ್ರಾಥಮಿಕ ಶಾಲಾ ಗುರುಗಳು ಪೂಜ್ಯರು ಹೇಳಿದ್ದನ್ನು ತಮ್ಮ ಜನ ಗಣತಿಯ ಪುಸ್ತಕದಲ್ಲಿ ಟಿಪ್ಪಣಿ ಮಾಡಿಕೊಂಡರು. ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದ ಅಸಂಖ್ಯ ಋಷಿಗಳು ಅವತರಿಸಿದ್ದಾರೆ, ಅವರೇ ನಮಗೆ ಆದರ್ಶಪ್ರಾಯರು. ಅವರ ಜೀವನ ಕ್ರಮವನ್ನು ನಾವು ಅನುಸರಿಸಬೇಕು. ಆದ್ದರಿಂದ ಅವರು ನಮ್ಮ ಕುಲವೆಂದರೆ ಋಷಿ ಕುಲವೆಂದು ತಿಳಿಸುತ್ತಿದ್ದರು. ಎಲ್ಲ ಋಷಿಗಳ ಬೋಧವು (ನೀತಿ, ವೈರಾಗ್ಯ, ಜ್ಞಾನ) ಒಂದೇ ಇದೆ, ಅವರು ಸಾಧಿಸಿದ ಸಾಧ್ಯ ಸ್ಥಿತಿಯು ಸಹ (ಜ್ಞಾನಸಮಾಧಿ, ಶಾಶ್ವತ ಸುಖ) ಒಂದೇ ಇದೆ ಎಂಬುದಾಗಿ ಅವರು ತಿಳಿಸುತ್ತಿದ್ದರು.

ಪ್ರಶ್ನೆ : ಧರ್ಮಗಳೆಷ್ಟಿವೆ?

ಉತ್ತರ : ಎಲ್ಲರ ಧರ್ಮವೂ ಕೂಡ ಒಂದೇ ಇದೆ. ಧರ್ಮವೆಂದರೆ ಗುಣ, ಲಕ್ಷಣ. ಎಲ್ಲರ ಶರೀರದ ಧರ್ಮ ಒಂದೇ ಇದೆ. ಶರೀರವು ಪಂಚಮಹಾಭೂತಗಳಿಂದ ಕೂಡಿದೆ. ಎಲ್ಲರ ಜ್ಞಾನೇಂದ್ರಿಯಗಳ ಲಕ್ಷಣಗಳು ಒಂದೇ ಇರುವವು. ಅದು ಹೇಗೆಂದರೆ, ಎಲ್ಲರ ಕಣ್ಣುಗಳು ನೋಡುತ್ತವೆ, ಕಿವಿಗಳು ಕೇಳುತ್ತವೆ, ಮೂಗು ಮೂಸುತ್ತವೆ, ಇತ್ಯಾದಿ. ಅದರಂತೆ ಎಲ್ಲರ ಕರ್ಮೇಂದ್ರಿಯಗಳ ಲಕ್ಷಣಗಳು ಒಂದೇ ಇರುವವು. ಎಲ್ಲರ ಕೈಗಳು ಯಾವದಾದರೊಂದು ಕೆಲಸವನ್ನು ಮಾಡುತ್ತವೆ, ಕಾಲುಗಳು ನಡೆಯುತ್ತವೆ, ಬಾಯಿಯು ಮಾತನಾಡುತ್ತದೆ, ಇತ್ಯಾದಿ. ಎಲ್ಲರ ಪ್ರಾಣದ ಧರ್ಮವು (ಲಕ್ಷಣ) ಒಂದೇ ಇರುವದು. ಎಲ್ಲರಿಗೂ ನೀರಡಿಕೆಯಾಗುತ್ತದೆ.

ನೀರಡಿಕೆಯಾದಾಗ ಗಂಟಲು ಒಣಗುತ್ತದೆ, ಅದರಂತೆ ಎಲ್ಲರಿಗೂ ಹಸಿವೆಯಾಗುತ್ತದೆ, ಹಸಿವೆಯಾದಾಗ ಹೊಟ್ಟೆಯು ಉರಿಯುತ್ತದೆ. ಎಲ್ಲರ ಮನಸ್ಸಿನ ಧರ್ಮವು ಒಂದೇ ಇರುವದು. ಮನಸ್ಸಿನಲ್ಲಿಯ ಯಾವುದಾದರೂ ಆಶೆಯು ಪೂರ್ತಿಯಾಗದೆ ಇರುವಾಗ, ಅದು ಚಂಚಲವಾಗಿ ದುಃಖವಾಗುವದು. ಮನಸ್ಸಿಗೆ ಅದು ಬಯಸಿದ ವಸ್ತುವು ಪ್ರಾಪ್ತವಾದಾಗ, ಮನಸ್ಸು ನಿಶ್ಚಲವಾಗಿ ಸುಖವು ಅನುಭವಕ್ಕೆ ಬರುವದು. ಎಲ್ಲರ ಬುದ್ಧಿಯ ಧರ್ಮವು (ವಿಚಾರ ಮಾಡುವದು) ಒಂದೇ ಇರುವದು. ಎಲ್ಲ ಮಾನವರ ಬುದ್ಧಿಯ ಧರ್ಮವು ಸುಖವು ಯಾವುದು? ದುಃಖವು ಯಾವುದು? ತನ್ನ ನಿಜ ಸ್ವರೂಪವೇನು? ತನಗೆ ಅನ್ಯವಾದದ್ದು ಯಾವುದು? ಎಂಬುದನ್ನು ವಿಚಾರ ಮಾಡುವದೇ ಆಗಿದೆ. ಅದರಂತೆ ಎಲ್ಲರ ಚಿತ್ತದ ಧರ್ಮ ನೆನಪು ಇಡುವದು ಆಗಿದೆ. ಎಲ್ಲರ ಅಹಂಕಾರದ ಧರ್ಮ, 'ನಾನು ಮಾಡುವವನು, ನಾನು ಉಣ್ಣುವವನು' ಎಂಬ ತಿಳುವಳಿಕೆಯೇ ಆಗಿದೆ. ಎಲ್ಲರ ನಿಜಸ್ವರೂಪದ ಧರ್ಮ ಅರಿವು, ಆನಂದ. ಹೀಗೆ ಎಲ್ಲರ ಶರೀರದ, ಜ್ಞಾನೇಂದ್ರಿಯಗಳ, ಕರ್ಮೇಂದ್ರಿಯಗಳ, ಪ್ರಾಣ, ಮನ, ಬುದ್ಧಿ, ಚಿತ್ತ, ಅಹಂಕಾರ ಮತ್ತು ನಿಜ ಸ್ವರೂಪದ ಧರ್ಮವು (ಲಕ್ಷಣ) ಒಂದೇ ಇದೆ.

ಪ್ರಶ್ನೆ : ಮೋಕ್ಷವೆಂದರೇನು, ಅದನ್ನು ಹೊಂದಲು ಸಾಧನ ಕ್ರಮಗಳೆಷ್ಟು ?

ಉತ್ತರ : ಧರ್ಮದ ಇನ್ನೊಂದು ಅರ್ಥ ಮುಕ್ತಿ, ಮೋಕ್ಷ. 'ಮುಕ್ತಿ'ಯೆಂದರೆ ಬಿಡುಗಡೆ, ದುಃಖದಿಂದ ಬಿಡುಗಡೆ. ದುಃಖದಿಂದ ಬಿಡುಗಡೆ ಹೊಂದುವ ಸಾಧನ ಕ್ರಮವೂ ಸಹ ಒಂದೇ ಇದೆ. ಇಂದು ಸಮಾಜದಲ್ಲಿ ವಿಷಯಗಳಿಗಾಗಿ ಬಡಿದಾಟವು ಇದೆ. ಅದು ತಪ್ಪಬೇಕಾದರೆ ವಿಷಯಗಳನ್ನು ಹಂಚಿಕೊಂಡು ಉಪಭೋಗಿಸಬೇಕು, ಇದೇ ನೀತಿ. ಇದರ ಹೊರತಾಗಿ ಬೇರೆ ಉಪಾಯವೇ ಇಲ್ಲ. ಇದರಿಂದ ಜೀವಿಗಳ ವ್ಯವಹಾರವು ಸರಳವಾಗಿ ನಡೆಯುವದು, ಮನಸ್ಸು ಶಾಂತ ಇರುವದು. ಶರೀರದ ವ್ಯವಹಾರವು ಸರಳವಾಗಿ ನಡೆದರೂ, ಮನಸ್ಸಿನಲ್ಲಿಯ ವಿಷಯಗಳ ವ್ಯಾಮೋಹವು ಹೋಗಬೇಕಾದರೆ, ವಿಷಯಗಳಲ್ಲಿ ಸುಖವು ಇದೆಯೋ ಅಥವಾ ದುಃಖವು ಇದೆಯೋ ಎಂಬುದನ್ನು ನಾವು ವಿಚಾರಿಸಿಕೊಳ್ಳಬೇಕು. ದೀರ್ಘ ಕಾಲದವರೆಗೆ ಈ ವಿಚಾರದಲ್ಲಿ ತೊಡಗಿದರೆ, ವಿಷಯಗಳಲ್ಲಿ ಸುಖವಿಲ್ಲ, ದುಃಖವಿದೆ (ಬೇಸರ, ದಣಿವು, ರೋಗ, ಅರಿಷಡ್ವರ್ಗ ಸನ್ನಿಹಿತ, ಆನಂದ ಪ್ರತಿಬಂಧಕ, ಆತ್ಮಜ್ಞಾನ ಪ್ರತಿಬಂಧಕ, ಅನೀತಿ, ನರದ ತುರಿಕೆ, ಜಗಳ, ಹೊಡೆದಾಟ, ಕಾಳಗ, ಯುದ್ಧ, ಮಹಾಯುದ್ಧಗಳಿಗೆ ಕಾರಣ) ಎಂಬುದು ದೃಢವಾಗುವದು. ವಿಷಯ ವ್ಯಾಮೋಹವನ್ನು ಕಳೆದುಕೊಳ್ಳಲು ಒಂದೇ ಉಪಾಯವಿದೆ. ಅದು ಏನೆಂದರೆ ಸುಖ ದುಃಖದ ವಿಚಾರ. ಇದಕ್ಕೆ ಅನ್ಯವಾಗಿ ಬೇರೆ ಉಪಾಯವೇ ಇಲ್ಲ. ವಿಷಯಗಳ ಮೇಲಿನ ವ್ಯಾಮೋಹವನ್ನು ಕಳೆದುಕೊಂಡರೂ ಪುನರ್ಜನ್ಮವು ಬರುವದು ತಪ್ಪುವದಿಲ್ಲ. ಜನ್ಮವೆಂದರೆ ದುಃಖವೇ. ಪುನರ್ಜನ್ಮವನ್ನು ತಪ್ಪಿಸಿಕೊಳ್ಳಬೇಕಾದರೆ ಆತ್ಮಜ್ಞಾನವು ಒಂದೇ ಸಾಧನ, ಅನ್ಯ ಸಾಧನವು ಇಲ್ಲ. ನಾವು ಎಲ್ಲಿಯವರೆಗೆ ಮಾಡುವವರಾಗುವೆವೋ ಅಲ್ಲಿಯವರೆಗೆ ಉಣ್ಣುವದಕ್ಕಾಗಿ ಪುನರ್ಜನ್ಮವನ್ನು

ಹೊಂದಬೇಕಾಗುವದು. 'ದೇಹವೇ ನಾನು' ಎಂಬ ಭಾವದಿಂದ ನಾವು ಮಾಡುವವರು ಆಗುವೆವು. (ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನ, ಬುದ್ಧಿ, ಅಹಂಕಾರ, ಚಿತ್ತಗಳಿಂದ) ಆದರೆ (ಅರಿವು, ಇರುವು, ಆನಂದ ರೂಪವಾದ) 'ಆತ್ಮವೇ ನಾನು' ಎಂಬ ಭಾವದಿಂದ ನಾವು ಮಾಡುವವರು ಆಗುವದಿಲ್ಲ. (ಆತ್ಮವು ನಿಷ್ಕ್ರಿಯವು). ಆದ್ದರಿಂದ ಉಣ್ಣುವದಕ್ಕಾಗಿ ಪುನರ್ಜನ್ಮವನ್ನು ಪಡೆಯಬೇಕಾಗುವದಿಲ್ಲ. ಹೀಗೆ ದುಃಖದಿಂದ ಬಿಡುಗಡೆ ಹೊಂದುವ ಎಲ್ಲರ ಸಾಧನೆಯು (ಧರ್ಮ) ಒಂದೇ ಇರುವದು. ಆದ್ದರಿಂದ ಎಲ್ಲರ ಧರ್ಮವು ಒಂದೇ ಇದೆ; ಅದೆಂದರೆ ನೀತಿ, ವೈರಾಗ್ಯ, ಜ್ಞಾನ.

ಆದರೆ ಇಂದು ಮೋಕ್ಷವನ್ನು ಹೊಂದಲು ಅನೇಕ ಧರ್ಮಗಳಿವೆ ಎಂಬ ಭಾವನೆಯು ಬೇರೂರಿದೆ. (ಹಿಂದು, ಇಸ್ಲಾಂ, ಜೈನ, ಬೌದ್ಧ, ಕ್ರೈಸ್ತಧರ್ಮ ಮುಂತಾದವು). ಹೀಗಾಗಿ ನಮ್ಮ ಧರ್ಮವು ಹೆಚ್ಚು, ನಿಮ್ಮ ಧರ್ಮವು ಕಡಿಮೆ, ಹೀಗೆ ಘೋರ ಹೋರಾಟವೇ ನಡೆದಿದೆ. ಧರ್ಮದ ಹೆಸರಿನಲ್ಲಿ ಹರಿದಷ್ಟು ರಕ್ತದ ಕಾಲುವೆ ಇನ್ನಾವುದರ ನೆವದಿಂದಲೂ ಹರಿದಿಲ್ಲ, ಹರಿಯುತ್ತಿದೆ, ಭವಿಷ್ಯತ್ತಿನಲ್ಲಿ ಹರಿಯುವದು. ಇದು ತಪ್ಪಬೇಕಾದರೆ ಧರ್ಮವು ಒಂದೇ ಎಂಬುದು ಜಗತ್ತಿನಲ್ಲಿಯ ಮಾನವರಿಗೆ ಖಾತ್ರಿಯಾಗಬೇಕು.

ಪೂಜ್ಯರು ಧರ್ಮವು ಒಂದೇ ಎಂಬುದನ್ನು ಘಂಟಾಘೋಷವಾಗಿ ತಿಳಿಸುತ್ತಿದ್ದರು. ಒಮ್ಮೆ ಒಬ್ಬರು ದಿನಪತ್ರಿಕೆಯಲ್ಲಿ ಜಪಾನಿನಲ್ಲಿ ಸರ್ವಧರ್ಮ ಸಮ್ಮೇಳನವು ಜರುಗುವ ಬಗ್ಗೆ ಪೂಜ್ಯರಿಗೆ ತಿಳಿಸಿದರು. ಆಗ ಪೂಜ್ಯರು "ಸರ್ವಧರ್ಮ ಸಮ್ಮೇಳನ ಎನ್ನುವಿರಿ, ಆದರೆ ಧರ್ಮವು ಒಂದೇ ಇರುವದು ಅಂದಾಗ, ಸರ್ವಧರ್ಮ ಸಮ್ಮೇಳನವು ಹೇಗೆ ಸಾಧ್ಯ?" ಎಂದರು, ಮತ್ತೊಮ್ಮೆ ಒಬ್ಬರು ಪೂಜ್ಯರೊಡನೆ ಒಂದು ವಿಶಿಷ್ಟ ಮತದ ಸಿದ್ಧಾಂತದ (ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಇತ್ಯಾದಿ) ಬಗ್ಗೆ ಚರ್ಚಿಸುವದಕ್ಕಾಗಿ ಬರುವದಾಗಿ ತಿಳಿಸಿದರು. ಅವರಿಗೆ ಪೂಜ್ಯರು "ಚರ್ಚೆ ಮಾಡುವದಕ್ಕಾಗಿ ಬರಲಿಕ್ಕೆ ಅಡ್ಡಿಯಿಲ್ಲ. ಆದರೆ ಮೊದಲು ನಿದ್ರೆಯಲ್ಲಿ ಎಷ್ಟು ಮತಗಳು ಇರುವವು, ಎಷ್ಟು ಸಿದ್ಧಾಂತಗಳು ಇರುವವು ಎಂಬುದನ್ನು ವಿಚಾರ ಮಾಡಿಕೊಂಡು ಬನ್ನಿರಿ" ಎಂದು ತಿಳಿಸಿದರು. ಅದರಂತೆ ಧಾರವಾಡದ ಶ್ರೀ ಸುರೇಂದ್ರ ಶಿವರಾವ ದೇಸಾಯಿಯವರು 'ವಿಶ್ವಧರ್ಮ' ಎಂಬ ವಿಷಯದ ಬಗ್ಗೆ ಒಂದು ಲೇಖನವನ್ನು ಬರೆದಿದ್ದರು. ಆ ಲೇಖನವನ್ನು ಓದುವಾಗ ಪೂಜ್ಯರು "ಅದು ವಿಶ್ವಧರ್ಮ, ಇದು ವಿಶ್ವಧರ್ಮವಲ್ಲ ಎನ್ನುವದು ಸಮಂಜಸವಲ್ಲ. ಏಕೆಂದರೆ ಧರ್ಮವು ಒಂದೇ ಇರುವದು. ವೈರಾಗ್ಯವೇ ಧರ್ಮ, ಅದೇ ವಿಶ್ವಧರ್ಮ"ವೆಂದು ತಿಳಿಸಿದರು.

ಪ್ರಶ್ನೆ : ಮಾನವನ ಜೀವನದ ಗುರಿಗಳೆಷ್ಟು? ಸಾಧನೆಯ ಕ್ರಮಗಳೆಷ್ಟು?

ಉತ್ತರ : ಮಾನವನ ಜೀವನದ ಗುರಿಯೂ ಒಂದೇ ಇದೆ, ಅದನ್ನು ಹೊಂದುವ ಸಾಧನೆಯ ಕ್ರಮವೂ ಒಂದೇ ಇದೆ. ಮಾನವನ ಜೀವನದ ಗುರಿ ಎಳ್ಳಷ್ಟೂ ದುಃಖವು ಇಲ್ಲದ ಶಾಶ್ವತ ಸುಖವು. ಶಾಶ್ವತ ಸುಖವನ್ನು ಹೊಂದುವ ಸಾಧನೆಯ

ಕ್ರಮವೂ ಒಂದೇ ಇದೆ. ಅದೆಂದರೆ ಸುಖದ (ಅರಿವು) ಭಾವದಲ್ಲಿ ಇರುವದು. ನಮಗೆ ಯಾವುದಾದರೂ ವಸ್ತುವಿನ ಅನುಭವವು ಆಗಬೇಕಾದರೆ ನಮ್ಮ ಮನಸ್ಸು ಆ ವಸ್ತುವಿನ ಆಕಾರ ವೃತ್ತಿಯನ್ನು ತಾಳಬೇಕಾಗುವದು. ಅದರಂತೆ ಮನಸ್ಸು ಆನಂದವನ್ನು ಅನುಭವಿಸಬೇಕಾದರೆ ಅದು ಆನಂದದ ಆಕಾರ ವೃತ್ತಿಯನ್ನು ತಾಳಬೇಕಾಗುವದು, ಅಂದರೆ ಮಾತ್ರ ಆನಂದಾನುಭವವು ಆಗುವದು. "ಧ್ಯಾನಾವಸ್ಥಿತ ತದ್ಗತೇನ ಮಾನಸಾ ಪಶ್ಯಂತಿ ಯಂ ಯೋಗಿನೋ" ಎಂಬುದರ ಅರ್ಥವೂ ಕೂಡ ಇದೇ ಆಗಿದೆ.

ಪ್ರಶ್ನೆ : ಮಹಾಪುರುಷರ ಹೆಸರಿನ ಅಭಿಮಾನದಿಂದಾಗಿ ಸಮಾಜದಲ್ಲಿ ನಡೆದಿರುವ ಹೋರಾಟವು ನಿಲ್ಲುವದು ಹೇಗೆ?

ಉತ್ತರ : ಸಾಮಾನ್ಯವಾಗಿ ಮಹಾಪುರುಷರ ಅಭಿಮಾನದಿಂದಾಗಿ ಅಜ್ಞ ಜೀವರು ಅನೇಕ ಧರ್ಮಗಳನ್ನೇ ಕಲ್ಪಿಸಿಕೊಂಡಿದ್ದಾರೆ. ಹೀಗಾಗಿ ಮಹಾವೀರ ಅವರದು ಜೈನ ಧರ್ಮ, ಬುದ್ಧ ಅವರದು ಬೌದ್ಧ ಧರ್ಮ, ಏಸು ಅವರದು ಕ್ರೈಸ್ತ ಧರ್ಮ, ಪೈಗಂಬರ ಅವರದು ಇಸ್ಲಾಂ ಧರ್ಮ ಮುಂತಾದವು ಬಳಿಕೆಯಲ್ಲಿವೆ. ಇದರಿಂದ ತಮ್ಮ ಧರ್ಮ ಹೆಚ್ಚು, ಇನ್ನೊಬ್ಬರ ಧರ್ಮ ಕಡಿಮೆ ಎಂದು ಹೋರಾಟವೇ ನಡೆದಿದೆ. ಇದರ ನೆವದಿಂದ ರಕ್ತದ ಕಾಲುವೆಗಳೇ ಹರಿದಿವೆ, ಈಗಲೂ ಹರಿಯುತ್ತಿವೆ, ಮುಂದೆ ಹರಿಯುವವು. ಮಹಾವೀರರು ತಮ್ಮದು ಜೈನಧರ್ಮವೆಂದು, ಬುದ್ಧರು ತಮ್ಮದು ಬೌದ್ಧಧರ್ಮವೆಂದು ಹೀಗೆ ಆಯಾ ಮಹಾಪುರುಷರು ತಮ್ಮ ತತ್ತ್ವವಿಚಾರವೇ ಬೇರೆ, ಧರ್ಮವೇ ಬೇರೆ ಎಂದು ಹೇಳಿದರೇ? ಇಲ್ಲ. ಅಜ್ಞ ಜೀವರೇ ಹೀಗೆ ಭೇದತ್ವವನ್ನು ಕಲ್ಪಿಸಿರುವರು. ಮಹಾಪರುಷರು ಹೀಗೆ ಭೇದತ್ವವನ್ನು ಕಲ್ಪಿಸುವದು ಸಾಧ್ಯವಿಲ್ಲ. ಒಂದು ವೇಳೆ ಹಾಗೆ ಕಲ್ಪಿಸಿದರೆ ಅವರು ಮಹಾಪುರುಷರೇ ಅಲ್ಲ. ಮಹಾತ್ಮರು ದೇಹಭಾವವನ್ನು ಮೀರಿ ಆತ್ಮಭಾವದಲ್ಲಿ ಇರುವರು, ಅಂದಮೇಲೆ ಅವರು ದೇಹದ ಅಭಿಮಾನವನ್ನು ಹೇಗೆ ಹಿಡಿಯುತ್ತಾರೆ! ಅವರು ಜೀವಿಗಳಿಗೆ ದೇಹದ ಅಭಿಮಾನವನ್ನು (ದೇಹಭಾವವನ್ನು) ತೆಗೆದುಹಾಕಿ, ಆತ್ಮಭಾವದಲ್ಲಿ ಇರಲು ನಿರಂತರ ಉಪದೇಶಗೈಯುತ್ತಾರೆ. ಎಲ್ಲರ ಆತ್ಮವು ಒಂದೇ, ಎಲ್ಲ ಮಹಾಪುರುಷರ ಆತ್ಮವು ಒಂದೇ, ಅಂದಮೇಲೆ ಮಹಾಪುರುಷರ ಸ್ಥಿತಿಯಲ್ಲಿ ಭೇದವೆಲ್ಲಿ? ಸರ್ವ ಜೀವರ ಅನುಭವವು ಒಂದೇ ಇದೆ, ಸುಖದ ಸಾಧನೆಯ ಕ್ರಮವೂ ಒಂದೇ ಇದೆ. ಅದೆಂದರೆ ನೀತಿ (ವಿಷಯ ವಸ್ತುಗಳನ್ನು ಹಂಚಿಕೊಂಡು ಉಪಭೋಗಿಸುವದು), ವೈರಾಗ್ಯ (ಮನಸ್ಸಿನಲ್ಲಿಯ ವಿಷಯಗಳ ವ್ಯಾಮೋಹವನ್ನು ತೆಗೆದು ಹಾಕುವದು), ಜ್ಞಾನ ('ನಾನು ದೇಹ' ಎಂಬುದು ಹೇಗೆ ದೃಢವಾಗಿದೆಯೋ ಹಾಗೆ 'ನಾನು ಆತ್ಮ' ಎಂಬುದು ದೃಢವಾಗುವದು). ಎಲ್ಲ ಮಹಾಪುರುಷರ ಉಪದೇಶವನ್ನು ಅವಲೋಕಿಸಿ ನೋಡಿದಾಗ ಅವರೆಲ್ಲರ ಉಪದೇಶವು (ತತ್ತ್ವವು) ಒಂದೇ ಎಂಬುದು ನಮಗೆ ತಿಳಿದು ಬರುವದು. ಆದ್ದರಿಂದ ಎಲ್ಲ ಮಹಾತ್ಮರು "ನಮ್ಮ ವ್ಯಕ್ತಿತ್ವದ ಅಭಿಮಾನವನ್ನು ಸಹ ಹಿಡಿಯಬೇಡಿರಿ, ಆದರೆ ಆತ್ಮನ (ತತ್ತ್ವದ) ಅಭಿಮಾನವನ್ನು ಹಿಡಿಯಿರಿ. ಏಕೆಂದರೆ ನಾವು ವ್ಯಕ್ತಿತ್ವದ ಅಭಿಮಾನಕ್ಕೆ ಮೂಲ ಕಾರಣವಾದ ದೇಹವಲ್ಲ, ಆತ್ಮವೇ (ತತ್ತ್ವವೇ) ಇರುವೆವು.

ಆದ್ದರಿಂದ ನೀವು ಆತ್ಮನ (ತತ್ತ್ವದ) ಅಭಿಮಾನವನ್ನು ಹಿಡಿದರೆ ನಮ್ಮ ಅಭಿಮಾನವನ್ನು ಹಿಡಿದಂತೆಯೇ" ಎಂದು ಘಂಟಾಘೋಷವಾಗಿ ಬೋಧಿಸಿದ್ದಾರೆ. ಎಲ್ಲಿಯವರೆಗೆ ಸಮಾಜದಲ್ಲಿ ವ್ಯಕ್ತಿಯ ಅಭಿಮಾನವನ್ನು ಹಿಡಿಯುವದು ನಡೆಯುವದೋ, ಅಲ್ಲಿಯವರೆಗೆ ಬಡಿದಾಡುವದು ತಪ್ಪುವದಿಲ್ಲ. ಆದ್ದರಿಂದ ತತ್ತ್ವದ ಅಭಿಮಾನವನ್ನು ಹಿಡಿದರೆ ಬಡಿದಾಟವೇ ಇಲ್ಲ. ಏಕೆಂದರೆ ಎಲ್ಲರ ತತ್ತ್ವವು ಒಂದೇ ಇದೆ.

ಪೂಜ್ಯ ಶ್ರೀ ಆತ್ಮಾನಂದರು ಯಾವದೇ ಮಹಾತ್ಮರ ಅಭಿಮಾನವನ್ನು ಹಿಡಿಯುತ್ತಿರಲಿಲ್ಲ. ಎಲ್ಲ ಮಹಾಪುರುಷರ ಉಪದೇಶ ಗ್ರಂಥಗಳನ್ನು ಪ್ರವಚನ ಕಾಲಕ್ಕೆ ಓದಿಸುತ್ತಿದ್ದರು. (ಭಗವದ್ಗೀತೆ, ಕುರಾಣ, ಬೈಬಲ್, ವೇದಾಂತ ಗ್ರಂಥಾವಳಿ (ನಿಜಗುಣರು), ದಮ್ಮ ಪದ ಮುಂತಾದವು) ಅವುಗಳಲ್ಲಿಯ ಉಪಯುಕ್ತ ಮಾಹಿತಿಯನ್ನು ವಿವರಿಸಿ ಹೇಳುತ್ತಿದ್ದರು. ಅನುಭವ ಸಮ್ಮತವಲ್ಲದ್ದನ್ನು ಕೈ ಬಿಡುತ್ತಿದ್ದರು, ಅದು ಮಹಾಪುರುಷರ ನಂತರದ ಅಜ್ಞ ಜೀವಿಗಳು ತಮ್ಮ ಸ್ವಾರ್ಥಕ್ಕಾಗಿ ಸೇರಿಸಿದ್ದು ಎಂದು ವಿವರಿಸುತ್ತಿದ್ದರು. ಪ್ರವಚನದ ಕೊನೆಗೆ 'ಸಕಲ ಸಾಧು ಸಂತ ಮಹಾರಾಜಕಿ ಜೈ' ಎಂದು ಅನ್ನಬೇಕೆಂದು ತಿಳಿಸುತ್ತಿದ್ದರು. ಒಬ್ಬೊಬ್ಬ ಮಹಾಪುರುಷರ ಹೆಸರಿನಿಂದ 'ಜೈ' ಅನ್ನುವದನ್ನು ನಿಲ್ಲಿಸಿದ್ದರು. ಲೌಕಿಕವಾಗಿ ಮುಸಲ್ಮಾನರು ಎನ್ನಿಸಿಕೊಳ್ಳುವವರು ಅವರಲ್ಲಿಗೆ ಬಂದಾಗ 'ನಾವೂ ಮುಸಲ್ಮಾನರೇ' ಎಂದು ಅನ್ನುತ್ತಿದ್ದರು. ಅದೇ ರೀತಿ ಲೌಕಿಕವಾಗಿ ಜೈನರು, ಕ್ರಿಶ್ಚಿಯನ್ನರು ಅವರಲ್ಲಿಗೆ ಬಂದಾಗ 'ನಾವೂ ಜೈನರೇ, ಕ್ರಿಶ್ಚಿಯನ್ನರೇ' ಎಂದು ಹೇಳುತ್ತಿದ್ದರು. ಏಕೆಂದರೆ ಅವರಿಗೆ ಧರ್ಮವು ಒಂದೇ ಆಗಿತ್ತು.

ಪ್ರಶ್ನೆ : 'ಓಂ ನಮಃ ಸುಖಾಯ' ಎಂಬ ಮಂತ್ರದ ವೈಶಿಷ್ಟ್ಯತೆ ಏನು?

ಉತ್ತರ : 'ಓಂ ನಮಃ ಸುಖಾಯ' ಎಂದರೆ ಸುಖಕ್ಕೆ ನಮಸ್ಕಾರ ಎಂದರ್ಥ. ಎಲ್ಲ ಜೀವಿಗಳಿಗೆ ಶಾಶ್ವತ ಸುಖವೇ ಬೇಕಾಗಿದೆ, ಆ ಸುಖವು ಅಮೂರ್ತವಿದೆ, ನಿರಾಕಾರವಿದೆ. (ನಿದ್ರೆಯಲ್ಲಿ ಯಾವ ಆಕಾರವೂ ಇಲ್ಲ, ಆದರೆ ಆರಾಮವಿದೆ) ಅಂದರೆ ನಾವು ಸುಖಕ್ಕಾಗಿ ಯಾವ ಆಕಾರವನ್ನೂ ಅವಲಂಬಿಸಬೇಕಾಗಿಲ್ಲ. ಆದರೆ ಅಜ್ಞ ಜೀವಿಗಳು ಸುಖವನ್ನು ಹೊಂದಲು ಆಕಾರಗಳಿಗಾಗಿ ಬಡಿದಾಡುತ್ತಾರೆ. ಈ ಜಗತ್ತಿನಲ್ಲಿ ಕೆಲವು ಮಂತ್ರಗಳು ಬಳಿಕೆಯಲ್ಲಿವೆ. ಉದಾಹರಣೆಗೆ : 'ಶಿವಾಯ ನಮಃ', 'ನಾರಾಯಣಾಯ ನಮಃ' ಮುಂತಾದವು. 'ಶಿವ' ಎಂದರೆ ಸುಖ, ಕಲ್ಯಾಣ, ಮಂಗಳ; ಅದರಂತೆ 'ನಾರಾಯಣ' ಎಂದರೆ ಮಾನವನ ಪರಮ ಧ್ಯೇಯ, ಅಂದರೆ ಸುಖ ಎಂದೇ ಅರ್ಥವಿದೆ. ಆದರೆ ಅಜ್ಞ ಜೀವರು 'ಶಿವ' ಎಂಬುದಕ್ಕೆ ಒಂದು ರೂಪವನ್ನು ಕಲ್ಪಿಸುವರು, ನಾರಾಯಣ ಎಂಬುದಕ್ಕೆ ಇನ್ನೊಂದು ರೂಪವನ್ನು ಕಲ್ಪಿಸುವರು, ಹೀಗೆ ಅನೇಕ ರೂಪಗಳನ್ನು ಕಲ್ಪಿಸಿ, ಒಂದು ರೂಪವು ಹೆಚ್ಚು, ಇನ್ನೊಂದು ರೂಪವು ಕಡಿಮೆ ಎಂದು ಜಗಳಾಡುವರು. ಜೀವಿಗಳ ನಡುವಿನ ಈ ಬಡಿದಾಟ ಹೊಡೆದಾಟಗಳನ್ನು ತೆಗೆದುಹಾಕುವ ಸಲುವಾಗಿ, ಪೂಜ್ಯ ಶ್ರೀ ಆತ್ಮಾನಂದರು ಯಾವ ಶಬ್ದಕ್ಕೆ ಯಾವದೇ ರೂಪವನ್ನು ಕಲ್ಪಿಸಲಿಕ್ಕೆ ಬರುವದಿಲ್ಲವೋ, ಆ ಶಬ್ದವನ್ನು (ಸುಖ) ಉಪಯೋಗಿಸಿ 'ಓಂ ನಮಃ ಸುಖಾಯ'

ಎಂಬ ಮಂತ್ರವನ್ನು ಹೇಳಿರುವರು. 'ಸುಖ' ಎಂಬ ಶಬ್ದಕ್ಕೆ ಯಾವದೇ ರೂಪವನ್ನು ಕಲ್ಪಿಸಲು ಬರುವದಿಲ್ಲ. ಆದ್ದರಿಂದ ಸುಖಕ್ಕೆ ರೂಪವಿಲ್ಲ ಮತ್ತು ಅದು ಎಲ್ಲರಿಗೂ ಬೇಕಾಗಿದೆ. ರೂಪವು ಸುಖವಲ್ಲ, ರೂಪದಲ್ಲಿ ಸುಖವಿಲ್ಲ. ಸುಖವಲ್ಲದ ರೂಪಗಳಿಗಾಗಿ ಸುಖವನ್ನು ಹೊಂದಬೇಕೆನ್ನುವವರು ಬಡಿದಾಡುವದು ನಿರರ್ಥಕ. ಪೂಜ್ಯ ಶ್ರೀ ಆತ್ಮಾನಂದರು 'ಓಂ ನಮಃ ಸುಖಾಯ', ಮಂತ್ರದ ವಾಚಿಕ ಅಥವಾ ಮಾನಸಿಕ ಜಪವನ್ನು ಮಾಡಬೇಕೆಂದು ಹೇಳಿಲ್ಲ. ಅದರಂತೆ 'ಓಂ ನಮಃ ಸುಖಾಯ' ಮಂತ್ರದ ಮೇಲೆ ಮನಸ್ಸನ್ನು ಏಕಾಗ್ರಗೊಳಿಸಲು ಹೇಳಿಲ್ಲ. ಆದರೆ ಅದರ ಅರ್ಥಾನುಸಂಧಾನವೃತ್ತಿಯನ್ನು ಕೈಕೊಳ್ಳಲು ಹೇಳಿದ್ದಾರೆ. 'ಓಂ ನಮಃ ಸುಖಾಯ' ಮಂತ್ರದ ಅರ್ಥಾನುಸಂಧಾನವೃತ್ತಿಯೆಂದರೆ ನಾಮ ರೂಪ ಕ್ರಿಯೆಗಳ ನೆನಪು ಮತ್ತು ಭಾವವನ್ನು ತೆಗೆದುಹಾಕಿ, ಇರುವು ಅರುವು ಆನಂದದ ನೆನಪು ಮತ್ತು ಭಾವವನ್ನು ರೂಢಿಸಿಕೊಳ್ಳುವದು. ಹೀಗೆ ನಾವು 'ಓಂ ನಮಃ ಸುಖಾಯ' ಮಂತ್ರದ ಅರ್ಥಾನುಸಂಧಾನವೃತ್ತಿಯನ್ನು ಕೈಕೊಂಡರೆ ಶಿವ, ನಾರಾಯಣ, ಲಕ್ಷ್ಮಿ ಮುಂತಾದ ಕಲ್ಪಿತ ರೂಪಗಳಿಗಾಗಿ ಬಡಿದಾಡುವದು ತಪ್ಪುತ್ತದೆ. ಸಮಾಜದಲ್ಲಿ ಎಷ್ಟೋ ಶಾಂತಿ, ಸಮಾಧಾನಗಳು ನೆಲೆಸುತ್ತವೆ.

ಒಮ್ಮೆ ಚಾಕಲಬ್ಬಿ ಗ್ರಾಮದಲ್ಲಿ ಒಂದು ವಿಶೇಷ ಪ್ರಸಂಗದಲ್ಲಿ ಒಂದು ಗುಂಪಿನವರು 'ಓಂ ನಮಃ ಶಿವಾಯ' ಎಂದು, ಇನ್ನೊಂದು ಗುಂಪಿನವರು 'ಸಾಂಬ ಸದಾಶಿವ' ಎಂದು ಅನ್ನುತ್ತಿದ್ದರು. ಆಗ ಅಲ್ಲಿದ್ದ ಪೂಜ್ಯ ಶ್ರೀ ಆತ್ಮಾನಂದರು 'ಶಿವ' ಎಂದರೆ ಒಂದು ರೂಪ, 'ಸದಾಶಿವ' ಎಂದರೆ ಇನ್ನೊಂದು ರೂಪ, ಹೀಗೆ ಕಲ್ಪಿಸಿಕೊಂಡು; ಒಂದು ರೂಪವು ಹೆಚ್ಚು, ಇನ್ನೊಂದು ರೂಪವು ಕಡಿಮೆ ಎಂದು ಏಕೆ ಬಡಿದಾಡುತ್ತೀರಿ? ನಿಮಗೆ ಎಲ್ಲರಿಗೂ ಸುಖವು ಬೇಕಾಗಿದೆ, ಸುಖಕ್ಕೆ ರೂಪವಿಲ್ಲ, ಅಂದಮೇಲೆ ಸುಖವಲ್ಲದ ರೂಪಗಳಿಗಾಗಿ ಏಕೆ ಬಡಿದಾಡುವಿರಿ? ಎಲ್ಲರೂ 'ಓಂ ನಮಃ ಸುಖಾಯ' ಎನ್ನಿರಿ, ಹೀಗೆ ಅಂದಾಗ ರೂಪದ ಗದ್ದಲವೇ ಬರುವದಿಲ್ಲ, ರೂಪರಹಿತ ಸುಖದ ಭಾವವೇ ಬರುತ್ತದೆ. ಇದರಿಂದ ರೂಪಗಳಿಗಾಗಿ ನಡೆಯುವ ಬಡಿದಾಟವು ತಪ್ಪುವದು ಎಂದರು. ಆಗ ಅಲ್ಲಿದ್ದ ಎಲ್ಲರೂ 'ಓಂ ನಮಃ ಸುಖಾಯ' ಎಂದು ಎನ್ನಹತ್ತಿದರು.

ಪ್ರಶ್ನೆ : ಪಾಪ ಕರ್ಮಾದಿಗಳಿಂದ ದುಃಖವು ಮತ್ತು ಪುಣ್ಯ ಕರ್ಮಾದಿಗಳಿಂದ ಸುಖವು ಹೇಗೆ ಉಂಟಾಗುವದು?

ಉತ್ತರ : ಉದಾಹರಣೆಗಾಗಿ ಕಳ್ಳನು ಕಳವು ಮಾಡಬೇಕಾದರೆ, ಅವನಿಗೆ ಮೊದಲು ಕಳವು ಮಾಡಬೇಕಾದ ವಿಷಯದ ಆಶೆಯುಂಟಾಗಿ, ಮನಸ್ಸು ಚಂಚಲವಾಗಿ ದುಃಖವಾಗುವದು. ಕಳವು ಮಾಡುವಾಗ ವಸ್ತುವಿನ ಒಡೆಯರು ನೋಡುವರೋ ಎಂಬ ಕಳವಳದಿಂದ ಮನಸ್ಸು ಚಂಚಲವಾಗಿ ದುಃಖವಾಗುವದು.

ಒಡೆಯನಿಗೆ ವಸ್ತು ಕಳವು ಆಯಿತಲ್ಲ ಎಂಬ ವಿಚಾರದಿಂದ ಮನಸ್ಸು ಚಂಚಲವಾಗಿ ದುಃಖವಾಗುವದು. ನಂತರ ಒಡೆಯನು ಕಳ್ಳನಿಗೆ ಹೊಡೆಯುವನು

ಅಥವಾ ಅವನ ಕೊಲೆ ಮಾಡುವನು. ಇದರಿಂದ ಕಳ್ಳನ ಶರೀರಕ್ಕೆ ದುಃಖವಾಗುವದು. ಆಗ ಪೊಲೀಸ್‌ರು ಒಡೆಯನನ್ನು ಪೊಲೀಸ್ ಸ್ಟೇಶನ್ನಿಗೆ ಕರೆದುಕೊಂಡು ಹೋಗಿ, ಅವನಿಗೆ ಹೊಡೆದಾಗ ಅವನ ಶರೀರಕ್ಕೆ ದುಃಖವಾಗುವದು. ಹೀಗೆ ಕಳವು ಎಂಬ ಪಾಪ ಕರ್ಮದಿಂದ ಕಳ್ಳನ ಮತ್ತು ಒಡೆಯನ ಶರೀರಕ್ಕೂ ಮತ್ತು ಮನಸ್ಸಿಗೂ ದುಃಖವಾಗುವದು. ಹೀಗೆ ಪಾಪವೆಂದರೆ ಎಲ್ಲರಿಗೂ ದುಃಖವೇ.

ಒಬ್ಬನು ಕುಡಿಯಲಿಕ್ಕೆ ನೀರಿಲ್ಲದ ಸ್ಥಳದಲ್ಲಿ ಕೊಳವೆ ಬಾವಿಯನ್ನು ತೋಡಿಸಬೇಕೆಂದು ನಿಶ್ಚಯಿಸಿದಾಗ, ಅವನ ಮನಸ್ಸು ನಿಶ್ಚಲವಾಗಿ ಸುಖವು ಅನುಭವಕ್ಕೆ ಬರುವದು. ಈ ಸುದ್ದಿಯನ್ನು ಕೇಳಿ ಅಲ್ಲಿಯ ಜನರಿಗೆ ಸಂತೋಷವಾಗಿ ಸುಖವಾಗುವದು. ಜನರು ಕೊಳವೆ ಬಾವಿಯ ನೀರನ್ನು ಕುಡಿದಾಗ ಅವರ ಶರೀರಕ್ಕೆ ಸುಖವಾಗುವದು, ಆಗ ಜನರು ಆ ಪುಣ್ಯಶಾಲಿಗೆ ಸನ್ಮಾನ ಮಾಡುವರು. ಇದರಿಂದ ಪುಣ್ಯವಂತನಿಗೂ ಸುಖವಾಗುವದು. ಹೀಗೆ ಪುಣ್ಯ ಕರ್ಮದಿಂದ ಎಲ್ಲರಿಗೂ ಸುಖವಾಗುವದು.

ಪ್ರಶ್ನೆ : ನಾವು ಮಾಡಿದ ಕರ್ಮಕ್ಕೆ ತಕ್ಕಂತೆ ಫಲವನ್ನು ಉಣ್ಣಬೇಕಾಗುವದೇ?

ಉತ್ತರ : ನಾವು ಮಾಡಿದ ಕರ್ಮದ ಫಲವನ್ನು ಉಣ್ಣಲೇ ಬೇಕಾಗುವದು. ನಾವು ಪಾಪ ಕರ್ಮವನ್ನು ಮಾಡಿದರೆ ಅದರ ಫಲರೂಪವಾದ ದುಃಖವನ್ನು ಉಣ್ಣಬೇಕಾಗುವದು ಮತ್ತು ಪುಣ್ಯ ಕರ್ಮವನ್ನು ಮಾಡಿದರೆ ಅದರ ಫಲರೂಪವಾದ ಸುಖವನ್ನು ಉಣ್ಣಬೇಕಾಗುವದು. ನಾವು ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮದ ಫಲವನ್ನು ಈಗ ಉಣ್ಣುವದು, ಈಗ ಮಾಡಿದ ಕರ್ಮದ ಫಲವನ್ನು ಮುಂದಿನ ಜನ್ಮಗಳಲ್ಲಿ ಉಣ್ಣುವದು, ಹೀಗೆ ಕರ್ಮದ ನಿಯಮವಿದೆ. "ನಾ ಭುಕ್ತಂ ಕ್ಷೀಯತೆ ಕರ್ಮ ಕಲ್ಪಕೋಟಿ ಶತೈರಪಿ" ವಿಶ್ವವು ಕೋಟಿ ಕೋಟಿ ಸಲ ನಾಶವಾಗಿ ಹೋದರೂ, ನಾವು ಮಾಡಿದ ಕರ್ಮದ ಫಲವನ್ನು ಉಂಡೇ ತೀರಿಸಬೇಕಾಗುವದು.

ಪ್ರಶ್ನೆ : ಕರ್ಮಕ್ಕೆ ಅನುಸಾರವಾಗಿ ಜನ್ಮದ ಗತಿಯು ಹೇಗಿರುವದು?

ಉತ್ತರ : ನಾವು ಎಂಥ ವೃತ್ತಿಯ ಜೀವನವನ್ನು ನಡೆಯಿಸುವೆವೋ ಅಂಥ ವೃತ್ತಿಯ ಜನ್ಮವು ಬರುವದು. ಜೀವಿಗಳ ವೃತ್ತಿಗಳು ಕೆಳಗಿನಂತಿವೆ.

1) ಹೆಸರಿಸಲಿಕ್ಕೆ ಬಾರದ ವೃತ್ತಿ : ತನ್ನದು ಕೆಟ್ಟರೂ ಅಡ್ಡಿಯಿಲ್ಲ, ಇನ್ನೊಬ್ಬರದು ಕೆಡಲಿ ಎನ್ನುವ ಜೀವಿಗಳ ವೃತ್ತಿಯು.

2) ಪಿಶಾಚಿ ವೃತ್ತಿ : ತನ್ನದು ಕೆಡದೆ ಉಳಿದವರದನ್ನು ಕೆಡಿಸುವ ವೃತ್ತಿಯು.

3) ಪಶು ವೃತ್ತಿ : ಬಲವುಳ್ಳ ಜೀವಿಗಳು ದುರ್ಬಲ ಜೀವಿಗಳನ್ನು ಸದೆಬಡಿದು ವಿಷಯಭೋಗದಲ್ಲಿ ತೊಡಗುವ ವೃತ್ತಿಯು.

4) ಮಾನವ ವೃತ್ತಿ : ತಾನೂ ಜೀವಿಸುವದು ಮತ್ತು ಇನ್ನುಳಿದ ಜೀವಿಗಳು ಜೀವಿಸುವಂತೆ ಅವುಗಳಿಗೆ ಅನುವು ಮಾಡಿಕೊಡುವ ವೃತ್ತಿಯು.

5) ದೇವ ವೃತ್ತಿ : ತನ್ನದು ಕೆಟ್ಟರೂ ಅಡ್ಡಿಯಿಲ್ಲ, ಇನ್ನೊಬ್ಬರು ಸುಖಿಯಾಗುವಂತೆ ಪ್ರಯತ್ನಿಸುವ ವೃತ್ತಿಯು.

6) ದೇವಾತೀತ ವೃತ್ತಿ : ಇಹಲೋಕ ಮತ್ತು ಪರಲೋಕ ಭೋಗಗಳಲ್ಲಿ ಅನಾಸಕ್ತಿಯನ್ನು ಹೊಂದಿ, ಮರಳಿ ಜನ್ಮ ಬರಬಾರದಂತೆ ಮಾಡಿಕೊಳ್ಳುವ ವೃತ್ತಿಯು ಅಥವಾ ಸಾಧಕನ ವೃತ್ತಿಯು.

ನಾವು, ಮೇಲೆ ಹೇಳಿದ ಯಾವ ಪ್ರಕಾರದ ವೃತ್ತಿಯ ಜೀವನವನ್ನು ನಡೆಯಿಸುವೆವೋ ಅಂಥ ಜನ್ಮವು ನಮಗೆ ಬರುವದು. ತನ್ನದು ಕೆಟ್ಟರೂ ಅಡ್ಡಿಯಿಲ್ಲ ಇನ್ನೊಬ್ಬರದನ್ನು ಕೆಡಿಸುವ ಜೀವನವನ್ನು ನಡೆಯಿಸಿದರೆ ಅತಿ ಹೀನ ಜನ್ಮವು ಬರುವದು. ನಾವು ಪಿಶಾಚಿ ವೃತ್ತಿಯ ಜೀವನವನ್ನು ನಡೆಯಿಸಿದರೆ ನಮಗೆ ಪಿಶಾಚಿ ಜನ್ಮವು ಬರುವದು. ಪಶು, ಮಾನವ, ದೇವ ವೃತ್ತಿಯ ಜೀವನವನ್ನು ನಡೆಯಿಸಿದರೆ ಪಶು, ಮಾನವ ದೇವತೆಯ ಜನ್ಮವು ಬರುವದು, ದೇವಾತೀತ ವೃತ್ತಿಯ ಜೀವನವನ್ನು ನಡೆಯಿಸಿದರೆ ಸಾಧಕನ ವೃತ್ತಿಯ ಮಾನವ ಜನ್ಮವು ಬರುವದು.

ಪ್ರಶ್ನೆ : ಜೀವಿಗಳಿಗೆ ಅವು ಮಾಡಿದ ಕರ್ಮದ ಫಲವನ್ನು ಕೊಡುವವರು ಯಾರು?

ಉತ್ತರ : ಜೀವಿಗಳ ಅಂತಃಕರಣವೇ ಅವುಗಳಿಗೆ ಕರ್ಮಫಲವನ್ನು ಕೊಡುವದು. ಈ ಕರ್ಮದ ಗತಿಯು ಅತಿ ಗಹನವಾಗಿದೆ. ಸ್ವರೂಪದ ಜ್ಞಾನವನ್ನು ಮಾಡಿಕೊಂಡಾಗ ಮಾತ್ರ ಕರ್ಮದ ಗತಿಯ ತಿಳುವಳಿಕೆಯಾಗುತ್ತದೆ.

ಪ್ರಶ್ನೆ : ನಾವು ಒಂದು ಜನ್ಮದಲ್ಲಿ ಪುಣ್ಯ-ಪಾಪಗಳೆರಡನ್ನೂ ಮಾಡಿರುತ್ತೇವೆ. ಪುಣ್ಯ ಮಾಡಿದಷ್ಟು ಪಾಪವು ವಜಾ ಆಗಿ ಫಲವು ಪ್ರಾಪ್ತವಾಗುವದೋ ಹೇಗೆ?

ಉತ್ತರ : ನಾವು ಒಂದು ಕಾಗದವನ್ನು ಸುರಳಿಯಾಗಿ ಮಾಡಿ ಬಿಟ್ಟರೆ, ಆ ಕಾಗದದ ಸುರಳಿಯು ತನ್ನಿಂದ ತಾನೇ ಹೇಗೆ ಸುರುಳಿಯಾಗಿರುವದೋ, ಹಾಗೆ ಬಿಚ್ಚುತ್ತ ಹೋಗುವದು. ಅದರಂತೆ ಮಾನವನು ಹೇಗೆ ಕರ್ಮಗಳನ್ನು ಮಾಡುತ್ತ ಹೋಗುವನೋ, ಹಾಗೆ ಅವುಗಳ ಫಲಗಳನ್ನು ಉಣ್ಣುತ್ತ ಹೋಗಬೇಕಾಗುವದು. ಒಮ್ಮೆ ಪುಣ್ಯ, ನಂತರ ಪಾಪ ಮಾಡಿದರೆ, ಮೊದಲಿಗೆ ಪುಣ್ಯದ ಫಲವಾದ ಸುಖವು, ನಂತರ ಪಾಪದ ಫಲವಾದ ದುಃಖವು ಬರುವದು. ಪುಣ್ಯ-ಪಾಪಗಳನ್ನು ಒಂದೇ ಸಮಯಕ್ಕೆ ಮಾಡಿದರೆ ಏಕ ಕಾಲಕ್ಕೆ ಪುಣ್ಯ ಪಾಪಗಳ ಫಲವನ್ನು (ಸುಖ ದುಃಖವನ್ನು) ಉಣ್ಣಬೇಕಾಗುವದು.

ಪ್ರಶ್ನೆ : ಪಿತೃ ಋಣ, ದೇವ ಋಣ, ಋಷಿ ಋಣವನ್ನು ತೀರಿಸುವ ರೀತಿಯು ಯಾವದು?

ಉತ್ತರ : ಪಿತೃ ಋಣವು ತೀರಬೇಕಾದರೆ, ನಾವು ಚಿಕ್ಕವರು ಇರುವಾಗ ಯಾವ ರೀತಿಯಾಗಿ ನಮ್ಮ ತಂದೆ ತಾಯಿಗಳು ನಮ್ಮ ಪಾಲನೆ ಪೋಷಣೆಯನ್ನು ಮಾಡಿದರೋ, ಅದೇ ರೀತಿಯಾಗಿ ನಾವು ನಮ್ಮ ತಂದೆ ತಾಯಿಗಳ (ಅವರಿಗೆ

ರೋಗವು ಬಂದಾಗ, ನೋವು ಆದಾಗ, ಮುಪ್ಪು ಬಂದಾಗ) ಸೇವೆ, ಪಾಲನೆ ಪೋಷಣೆ ಮಾಡಿದರೆ ಅವರ ಋಣವು ತೀರುವದು. ದೇವ ಋಣವನ್ನು ತೀರಿಸಬೇಕಾದರೆ ಜೀವಿಗಳನ್ನು ಸಂತೋಷಗೊಳಿಸಬೇಕು. ಋಷಿ ಋಣವನ್ನು ತೀರಿಸಬೇಕಾದರೆ, ನಾವು ಋಷಿಯು ಹೊಂದಿದ ಜ್ಞಾನ ಸಮಾಧಿಯನ್ನು ಹೊಂದಿ, ಅದನ್ನು ಉಳಿದವರಿಗೆ ಬೋಧಿಸಿ, ಅವರು ಜ್ಞಾನ ಸಮಾಧಿಯನ್ನು ಹೊಂದುವಂತೆ ಮಾಡಬೇಕು.

ಪ್ರಶ್ನೆ : ಪಿಶಾಚಿಗಳು ಇವೆಯೇ?

ಉತ್ತರ : ಹೇಗೆ ಇಂದ್ರಿಯಗಮ್ಯವಾದ ಜಡ ಪ್ರಪಂಚವು ವ್ಯಾವಹಾರಿಕವಾಗಿ ಸತ್ಯವಾಗಿ ಇರುವದೋ, ಹಾಗೆ ಸೂಕ್ಷ್ಮ ಶರೀರಗಳ ಸೂಕ್ಷ್ಮ ಲೋಕವು ವ್ಯಾವಹಾರಿಕವಾಗಿ ಸತ್ಯವೇ ಇದೆ. (ಸ್ವರೂಪನಿಷ್ಠರಿಗೆ ಸ್ಥೂಲ ಸೂಕ್ಷ್ಮ ಪ್ರಪಂಚವೆರಡೂ ಮಿಥ್ಯೆ, ಬ್ರಹ್ಮನಿಷ್ಠೆಯ ಸ್ಥಿತಿಯನ್ನು ಹೊಂದುವವರೆಗೆ ಸ್ಥೂಲ ಸೂಕ್ಷ್ಮ ಲೋಕಗಳು ವ್ಯಾವಹಾರಿಕವಾಗಿ ಸತ್ಯವೇ ಇರುತ್ತವೆ.) ಮಾನವರಲ್ಲಿ ಪಾಪಿಗಳು ಪುಣ್ಯವಾನರು ಇರುವಂತೆ, ಸೂಕ್ಷ್ಮ ಶರೀರಗಳಲ್ಲಿಯೂ ಪಾಪಮಯ ಸೂಕ್ಷ್ಮ ಶರೀರಗಳು (ಪಿಶಾಚಿ, ರಾಕ್ಷಸ), ಪುಣ್ಯಮಯ ಸೂಕ್ಷ್ಮ ಶರೀರಗಳು (ದೇವಾನುದೇವತರು) ಇರುವವು. ವಿಷಯ ಸುಖ ಬುದ್ಧಿಯನ್ನು ಕಳೆದುಕೊಂಡು, ದೇಹಭಾವವನ್ನು ಮೀರಿ ತಮ್ಮ ನಿಜ ಸ್ವರೂಪದ ಭಾವದಲ್ಲಿರುವ ಪ್ರಯತ್ನದಲ್ಲಿ ತೊಡಗಿರುವವರಿಗೆ ಸೂಕ್ಷ್ಮ ಶರೀರಗಳು ಗೋಚರವಾಗುವವು. ಅವು ಗೋಚರವಾದರೂ ಅವುಗಳಿಗೆ ಹೆದರದೆ, ತಮ್ಮ ನಿಜ ಸ್ವರೂಪದ ಕಡೆಗೆ ಯಾರು ಲಕ್ಷ್ಯವನ್ನು ಕೊಡುವರೋ, ಪಿಶಾಚಿ ರಾಕ್ಷಸಗಳು ಅವರ ಸೇವೆಯನ್ನು ಮಾಡುವವು. ಬ್ರಹ್ಮ ರಾಕ್ಷಸ, ಬ್ರಹ್ಮ ಪಿಶಾಚಿಗಳು ಬ್ರಹ್ಮನಿಷ್ಠರ ಶರೀರವನ್ನು ಸಂರಕ್ಷಿಸುವವು.

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ತಮ್ಮ ಸ್ವರೂಪದಲ್ಲಿ ನೆಲೆಯಾಗಿ ನಿಂತಿದ್ದರಿಂದ ಅವರಿಗೆ ಎಲ್ಲ ಬಗೆಯ ಸೂಕ್ಷ್ಮ ಶರೀರಗಳು ಕಾಣುತ್ತಿದ್ದವು. ಅವುಗಳು ಅವರ ಸೇವೆಯಲ್ಲಿ ತೊಡಗಿರುವದನ್ನು ನೋಡಿ ಕೆಲವರು ಹೆದರಿದ್ದುಂಟು. ಶ್ರೀ ಗುರುದೇವರು ಮಾನವ, ಪಶು, ಪಕ್ಷಿ ಮುಂತಾದವುಗಳನ್ನು ಸಂತೋಷಗೊಳಿಸುವಂತೆ, ಸೂಕ್ಷ್ಮ ಶರೀರಗಳನ್ನೂ ಸಂತೋಷಪಡಿಸುತ್ತಿದ್ದರು.

ಪ್ರಶ್ನೆ : ಪಿಶಾಚಿಗಳು ಯಾರಿಗೆ ಬಡಿದುಕೊಳ್ಳುತ್ತವೆ? ಜೀವಂತವಿದ್ದಾಗ ಯಾರು ಪೀಡೆಯನ್ನು ಕೊಡುತ್ತಿದ್ದರೋ ಅವರಿಗೆ ಅವು ಏಕೆ ಪೀಡೆಯನ್ನು ಕೊಡುವದಿಲ್ಲ?

ಉತ್ತರ : ಹಿಂದಿನ ಜನ್ಮಗಳಲ್ಲಿ ಯಾರು ಪಾಪಕೃತ್ಯವನ್ನು ಮಾಡಿರುವರೋ ಅವರಿಗೆ ಮಾತ್ರ ಪಿಶಾಚಿಗಳು ಬಡಿದುಕೊಳ್ಳುವವು. ಕರ್ಮದ ಗತಿ ಹೇಗಿದೆಯೆಂದರೆ ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಫಲವನ್ನು ಈಗ ಉಣ್ಣುವದು, ಈಗ ಮಾಡಿದ ಕರ್ಮಗಳ ಫಲವನ್ನು ಮುಂದಿನ ಜನ್ಮಗಳಲ್ಲಿ ಉಣ್ಣುವದು.

ಪ್ರಶ್ನೆ : ಪಿಶಾಚಿಯು ಒಬ್ಬ ವ್ಯಕ್ತಿಯಲ್ಲಿ ಪ್ರವೇಶಿಸಿದಾಗ ಅವನ ಶರೀರದಲ್ಲಿಯ ಸೂಕ್ಷ್ಮ ಶರೀರವು ಏಕೆ ವ್ಯಕ್ತಗೊಳ್ಳುವದಿಲ್ಲ? ಒಬ್ಬನಿಗೆ ಪಿಶಾಚಿಯು

ಬಡಿದುಕೊಂಡಿದೆಯೋ ಅಥವಾ ರೋಗವು ಆಗಿದೆಯೋ ಎಂಬುದನ್ನು ಹೇಗೆ ತಿಳಿದುಕೊಳ್ಳಬೇಕು? ಇದು ಸಾಧಕನಿಗೆ ಸಾಧ್ಯವಿದೆಯೇ?

ಉತ್ತರ : ಯಾವನು ಇಹಲೋಕ ಪರಲೋಕ ಭೋಗದ ಆಶೆಯನ್ನು ಬಿಟ್ಟಿರುವನೋ ಅವನೇ ಸಾಧಕನು. ಅವನಿಗೆ ಸೂಕ್ಷ್ಮ ಶರೀರಗಳು ಗೋಚರವಾಗುತ್ತವೆ. ಪಿಶಾಚಿಯು ಬಡಿದುಕೊಂಡಿರುವವರ ಶರೀರದಲ್ಲಿ ಎರಡು ಅಥವಾ ಹೆಚ್ಚು ಸೂಕ್ಷ್ಮ ಶರೀರಗಳು ಇರುವವು. ಆದರೆ ರೋಗಿಯ ಶರೀರದಲ್ಲಿ ಒಂದೇ ಸೂಕ್ಷ್ಮ ಶರೀರವು ಇರುವದು. ಸಾಧಕನಿಗೆ ತನಗೆ ಅನ್ಯವಾದ ಶರೀರಗಳಲ್ಲಿಯ ಸೂಕ್ಷ್ಮ ಶರೀರವು ಅಷ್ಟೇ ಏಕೆ, ಅವನಿಗೆ ತನ್ನ ಸೂಕ್ಷ್ಮ ಶರೀರವೇ ತನಗೆ ದೃಶ್ಯವಾಗುವದು. ಹೀಗಿಲ್ಲದಿದ್ದರೆ ಅವನು ಸಾಧಕನೇ ಅಲ್ಲ ಎಂದು ತಿಳಿದುಕೊಳ್ಳಬೇಕು. ಪಿಶಾಚಿಯು ಅನ್ಯ ಶರೀರವನ್ನು ಪ್ರವೇಶಿಸಿದಾಗ, ಅದರಲ್ಲಿರುವ ಸೂಕ್ಷ್ಮ ಶರೀರವನ್ನು ಹತ್ತಿಕ್ಕಿ ತಾನು ಪ್ರಕಟಗೊಳ್ಳುತ್ತದೆ. ಆದ್ದರಿಂದ ಪಿಶಾಚಿಯು ಬಡಿದುಕೊಂಡ ವ್ಯಕ್ತಿಯ ಸೂಕ್ಷ್ಮ ಶರೀರವು ವ್ಯಕ್ತವಾಗುವದಿಲ್ಲ.

ಪೂಜ್ಯ ಶ್ರೀ ಗುರುದೇವರು ಒಬ್ಬರಿಗೆ ರೋಗವಾಗಿದೆಯೋ ಅಥವಾ ಪಿಶಾಚಿಯು ಬಡಿದುಕೊಂಡಿರುವದೋ ಎಂಬುದನ್ನು ನಿಶ್ಚಯವಾಗಿ ಹೇಳುತ್ತಿದ್ದರು ಮತ್ತು ಆ ವ್ಯಕ್ತಿಯ ಶರೀರದಲ್ಲಿ ಎಷ್ಟು ಸೂಕ್ಷ್ಮ ಶರೀರಗಳು ಇರುವವು ಎಂಬುದನ್ನು ನಿಶ್ಚಯವಾಗಿ ಹೇಳುತ್ತಿದ್ದರು. ಇಷ್ಟೇ ಅಲ್ಲ, ಯಾವದೇ ವ್ಯಕ್ತಿಯ ಮನಸ್ಸಿನಲ್ಲಿ ಇದ್ದದ್ದನ್ನು ಅವರು ತಿಳಿದುಕೊಳ್ಳಬಲ್ಲವರಾಗಿದ್ದರು.

## ನೀತಿ

ಪ್ರಶ್ನೆ : ಸಮಾಜದಲ್ಲಿಯ ಜೀವಿಗಳ ವ್ಯವಹಾರವು ಸರಳವಾಗಿ ನಡೆಯಬೇಕಾದರೆ ಏನು ಮಾಡಬೇಕು? ಇದಕ್ಕಾಗಿ ಎಷ್ಟು ಮಾರ್ಗಗಳಿವೆ?

ಉತ್ತರ : ಸಮಾಜದಲ್ಲಿಯ ಜೀವಿಗಳ ವ್ಯವಹಾರವು ಸರಳವಾಗಿ ನಡೆಯಬೇಕಾದರೆ ಒಂದೇ ಒಂದು ಮಾರ್ಗವಿದೆ. ಅದೆಂದರೆ ಜೀವಿಗಳು ನೀತಿಯಿಂದ ನಡೆದುಕೊಳ್ಳುವದು. ನೀತಿಯೆಂದರೆ ಜೀವನು ತಾನು ಯಾವ ರೀತಿಯಾಗಿ ಜೀವಿಸಬೇಕು ಭೋಗಿಸಬೇಕು ಎನ್ನುವನೋ, ಅದೇ ರೀತಿ ಉಳಿದ ಜೀವಿಗಳು ಜೀವಿಸುವದಕ್ಕಾಗಿ ಮತ್ತು ಭೋಗಿಸುವದಕ್ಕಾಗಿ ಅನುವು ಮಾಡಿಕೊಡುವದು ಮತ್ತು ಲಭ್ಯವಿದ್ದ ವಸ್ತುಗಳನ್ನು ಹಂಚಿಕೊಂಡು ಉಪಭೋಗಿಸುವದು.

ಜೀವಿಗಳ ಕಲ್ಯಾಣ ದೃಷ್ಟಿಯಿಂದ ನಮ್ಮ ಋಷಿ ಮುನಿಗಳು ಕೆಲವು ನೀತಿಯ ನಿಯಮಗಳನ್ನು ಬಳಿಕೆಗೆ ತಂದರು. (ದೇಹದಿಂದ, ಮಾತಿನಿಂದ, ಮನಸ್ಸಿನಿಂದ ಜೀವಿಗಳಿಗೆ ಪೀಡೆಯನ್ನು ಕೊಡದಿರುವದು) ವ್ಯಭಿಚಾರ, ಕಳವು ಮತ್ತು ಜೀವಿಗಳ ದೇಹಕ್ಕೆ ನೋವನ್ನುಂಟು ಮಾಡುವದು ಮುಂತಾದವು ದೇಹದಿಂದ ಜರುಗುವ ಪಾಪ ಕೃತ್ಯಗಳು. ಈ ಪಾಪ ಕೃತ್ಯಗಳನ್ನು ಮಾಡಬಾರದು, ಮಾಡಿದರೆ

ಹೀನ ಜನ್ಮವು ಬರುವದು. ಇದಕ್ಕೆ ಬದಲಾಗಿ ಪತಿವ್ರತ, ಪತ್ನಿವ್ರತ, ಪ್ರಾಮಾಣಿಕತನ, ಪರೋಪಕಾರ ಮುಂತಾದ ಸದ್ಗುಣಗಳನ್ನು ರೂಢಿಸಿಕೊಳ್ಳಬೇಕು.

ಅದರಂತೆ ಸುಳ್ಳು ಹೇಳುವದು, ನಿಷ್ಠುರವಾಗಿ ಮಾತನಾಡುವದು, ಪರನಿಂದೆ ಮಾಡುವದು, ಚಾಡಿ ಹೇಳುವದು ಮತ್ತು ಚಾಡಿ ಕೇಳುವದು ಮುಂತಾದವು ಮಾತಿನಿಂದ ಜರುಗುವ ಪಾಪಕೃತ್ಯಗಳು. ಮಾತಿನಿಂದ ಈ ಪಾಪಕೃತ್ಯಗಳನ್ನು ಮಾಡಬಾರದು. ಈ ಪಾಪಕೃತ್ಯಗಳನ್ನು ಮಾಡಿದರೆ ಪಶು ಪಕ್ಷಿ , ಮೃಗಗಳ ಜನ್ಮವು ಬರುವದು. ಇದಕ್ಕೆ ಬದಲಾಗಿ ಸತ್ಯ ಮಾತನಾಡುವದು, ವಿನಯದಿಂದ ಮಾತನಾಡುವದು, ಪರನಿಂದೆ ಮಾಡದಿರುವದು, ಚಾಡಿ ಹೇಳದಿರುವದು ಮತ್ತು ಕೇಳದಿರುವದು ಮುಂತಾದ ಗುಣಗಳನ್ನು ರೂಢಿಸಿಕೊಳ್ಳಬೇಕು.

ಅದರಂತೆ ವ್ಯಭಿಚಾರ, ಕಳವು, ಹಿಂಸೆ, ಸುಳ್ಳು ಹೇಳುವದು, ನಿಷ್ಠುರತೆಯಿಂದ ಮಾತನಾಡುವದು, ಪರನಿಂದೆಯನ್ನು ಮಾಡುವದು, ಚಾಡಿ ಹೇಳುವದು ಕೇಳುವದು, ಮುಂತಾದವುಗಳನ್ನು ಮನಸ್ಸಿನಲ್ಲಿ ತಂದುಕೊಳ್ಳುವದು, ಇವು ಮನಸ್ಸಿನಿಂದ ಜರುಗುವ ಪಾಪಕೃತ್ಯಗಳು. ಮನಸ್ಸಿನಿಂದ ಈ ಪಾಪಕೃತ್ಯಗಳನ್ನು ಮಾಡಬಾರದು. ಈ ಪಾಪಕೃತ್ಯಗಳನ್ನು ಮಾಡಿದರೆ ದುರಿತ ಜನ್ಮವು ಬರುವದು. ಇದಕ್ಕೆ ಬದಲಾಗಿ ಪತಿವ್ರತ, ಪತ್ನಿವ್ರತ, ಪ್ರಾಮಾಣಿಕತನ, ಅಹಿಂಸೆ, ಸತ್ಯವನ್ನು ಹೇಳುವದು, ವಿನಯದಿಂದ ಮಾತನಾಡುವದು, ಪರನಿಂದೆಯನ್ನು ಮಾಡದಿರುವದು, ಚಾಡಿಯನ್ನು ಹೇಳದಿರುವದು, ಕೇಳದಿರುವದು ಮುಂತಾದ ಸದ್ಗುಣಗಳನ್ನು ಮನಸ್ಸಿನಲ್ಲಿ ನೆನಪಿಸಿಕೊಂಡು ಅವುಗಳನ್ನು ರೂಢಿಸಿಕೊಳ್ಳಬೇಕು.

ವಿಷಯಗಳ ವ್ಯಾಮೋಹದಿಂದ ಮಾನವನಿಗೆ ವಿಷಯಗಳ ಅತಿ ಆಶೆಯು ಆಗುವದು, ಅವು ಸಿಗದಿದ್ದರೆ ಕೋಪವು ಬರುವದು. ಕೋಪದಿಂದ ಹಿತಾಹಿತ ವಿಚಾರವು ನಾಶವಾಗಿ ಹೋಗುವದು, ಕೋಪದಿಂದಲೇ ಎಲ್ಲ ಪಾಪಕೃತ್ಯಗಳು ಜರುಗುವವು. ಆದ್ದರಿಂದ ಕೋಪವು ಉಂಟಾದಾಗ ಏನನ್ನೂ ಮಾತನಾಡಬಾರದು, ಯಾವುದೇ ಕ್ರಿಯೆಯನ್ನು ಮಾಡಬಾರದು.

ಯಾರಾದರೂ ಅಜ್ಞ ಜೀವಿಗಳು ನಮಗೆ ಪೀಡೆಯನ್ನು ಕೊಟ್ಟರೆ, ಅದನ್ನು ಸುಜ್ಞರಾದ ನಾವು ತಾಳಿಕೊಂಡರೆ ಈರ್ವರಿಗೂ ಸುಖ ಶಾಂತಿಯು ಲಭಿಸುವದು. 'ಮಂದಮತಿ ನಿಂದಿಸಲು ತಾಳಿಕೊಂಡವ ಜಾಣ', 'ಮಾತು ಬಂದಾಗ ಸೋತು ಹೋದವನೇ ಜಾಣ', ಹೀಗೆ ಕೇವಲ ತಾಳಿಕೊಳ್ಳುತ್ತ ಹೋದರೆ ಕೆಲವು ದುಷ್ಟರು ಸಾತ್ವಿಕ ಸಹನಶೀಲ ಜೀವರಿಗೆ ಮಿತಿಮೀರಿ ಪೀಡೆಯನ್ನು ಕೊಡುವರೆಂದು ತಿಳಿದು, ಪೀಡೆಯನ್ನು ಕೊಡುವವರಿಗೆ ಮರಳಿ ಪೀಡೆಯನ್ನು ಕೊಡದೆ, ಅವರಿಗೆ 'ಬುಸ್' ಎನ್ನಬೇಕು, ಇಲ್ಲದಿದ್ದರೆ ಸಾತ್ವಿಕ ಸಹನಶೀಲ ಜೀವಿಗಳ ವ್ಯವಹಾರವು ನಡೆಯುವದು ಅತಿ ಕಷ್ಟ ಎಂದು ಪೂಜ್ಯರು ತಿಳಿಸುತ್ತಿದ್ದರು. ಯಾವದಕ್ಕೂ ಬಗ್ಗದಂಥ ದುಷ್ಟರಿಂದ ದೂರ ಹೋಗಬೇಕು ಎಂದು ಅವರು ತಿಳಿಸುತ್ತಿದ್ದರು.

ಅದರಂತೆ "ಪರರ ದುರ್ಗುಣಗಳನ್ನು ಮರೆವುತ ಆದರಿಪುದೇ ಚೆಂದ" ಎಂದು ಪೂಜ್ಯರು ತಿಳಿಸುತ್ತಿದ್ದರು. ಸಮಾಜದಲ್ಲಿಯ ಜೀವಿಗಳ ವ್ಯವಹಾರವು ಸರಳವಾಗಿ ನಡೆಯಬೇಕಾದರೆ ಪರರ ದುರ್ಗುಣಗಳು ಮತ್ತು ನಮ್ಮ ಸದ್ಗುಣಗಳು ಪರ್ವತದಷ್ಟಿದ್ದರೂ ಮರೆಯಬೇಕು. (ಆಡಿಕೊಳ್ಳಬಾರದು). ಅದರಂತೆ ಪರರ ಸದ್ಗುಣಗಳು ಎಳ್ಳಷ್ಟಾದರೂ ಇದ್ದರೆ ಅವರನ್ನು ಪರ್ವತದಷ್ಟು ಆದರಿಸಬೇಕು ಮತ್ತು ನಮ್ಮ ದುರ್ಗುಣಗಳು ಎಳ್ಳಷ್ಟಾದರೂ ಇದ್ದರೆ ಅವುಗಳನ್ನು ಪರ್ವತದಷ್ಟು ತಿರಸ್ಕರಿಸಬೇಕು.

ನೀತಿಯಿಂದ ನಡೆಯುವದರಿಂದ ಜೀವಿಗಳ ವ್ಯವಹಾರವು ಸರಳವಾಗಿ ನಡೆಯುವದು. ಇದರಿಂದ ಮನಸ್ಸು ಶಾಂತವಿರುವದು. ಇದು ಅಧ್ಯಾತ್ಮ ಸಾಧನೆಯಲ್ಲಿ ತೊಡಗಲು ಅನುಕೂಲವಾಗುವದು.

ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ಯಾರಿಗೂ ದೇಹ, ಮಾತು, ಮನಸ್ಸುಗಳಿಂದ ಪೀಡೆಯನ್ನು ಕೊಡುತ್ತಿದ್ದಿಲ್ಲ. ಇದಕ್ಕೆ ಬದಲಾಗಿ ಅವರಿಗೆ ದೇಹ, ಮಾತು, ಮನಸ್ಸುಗಳಿಂದ ಉಪಕಾರವನ್ನು ಮಾಡುತ್ತಿದ್ದರು. ಅವರು ದುಃಖಿತರಲ್ಲಿ ದಯೆ ಉಳ್ಳವರು ಆಗಿದ್ದರು. ಪಾಪಿಗಳಲ್ಲಿ ಉದಾಸೀನರಾಗಿದ್ದರು. ಅವರು ಯಾರಲ್ಲಿಯೂ ತಪ್ಪನ್ನು ಗ್ರಹಿಸುತ್ತಿರಲಿಲ್ಲ, ಅವರಲ್ಲಿಯ ಒಳ್ಳೆಯ ಗುಣಗಳನ್ನು ಮಾತ್ರ ಪ್ರಶಂಶಿಸುತ್ತಿದ್ದರು. ಕೆಲವು ಅಜ್ಞ ಜೀವರು ಅವರನ್ನು ಊರು ಬಿಡಿಸಬೇಕೆಂದು ಅವರಿಗೆ ಅತಿ ಪೀಡೆಯನ್ನು ಕೊಟ್ಟರೂ, ಅವರು ಅದನ್ನೆಲ್ಲ ಸಹಿಸಿಕೊಂಡರು ಮತ್ತು ಅವರ ಮಕ್ಕಳಿಗೆ ಲೌಕಿಕ ಮತ್ತು ಪಾರಮಾರ್ಥಿಕ ಜ್ಞಾನವನ್ನು ದಾನ ಮಾಡಿದರು. ಬರಗಾಲದ ಕಾಲದಲ್ಲಿ ಸ್ವತಃ ಕೆರೆಯನ್ನು ಅಗಿದರು. ಆ ಕೆರೆಯ ನೀರನ್ನು ಈಗಲೂ ಕೂಡ ಜನರು ಉಪಯೋಗಿಸುತ್ತಿದ್ದಾರೆ. ಇದಲ್ಲದೆ ಪೂಜ್ಯರು ಬರಗಾಲದ ಕಾಲಕ್ಕೆ ಕುಸುಬಿ ಎಣ್ಣೆ, ಧನ ಧಾನ್ಯ, ಅರಿವೆಗಳನ್ನು ಜನರಿಗೆ ಹಂಚಿದರು.

ಪ್ರಶ್ನೆ : ಪೂಜೆ ಎಂದರೇನು? ಅದನ್ನು ಹೇಗೆ ಮಾಡಬೇಕು?

ಉತ್ತರ : ದೇಹವನ್ನು ಧಾರಣೆ ಮಾಡಿದಂಥ ಜೀವಿಗಳನ್ನು ಸಂತೋಷಗೊಳಿಸುವದೇ ಈಶ್ವರ ಪೂಜೆ. ("ಯೇನಕೇನ ಪ್ರಕಾರೇನ ಯಸ್ಯ ಕಸ್ಯಾಪಿ ದೇಹಿನಃ ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರ ಪೂಜನಂ"). ಎಲ್ಲ ಜೀವಿಗಳ ಅಂತಃಕರಣದಲ್ಲಿ ದೇವನು ಸಚ್ಚಿದಾನಂದ ಸ್ವರೂಪದಿಂದ ಬೆಳಗುತ್ತಿದ್ದಾನೆ. ಅಂತಃಕರಣವಿದ್ದಲ್ಲಿ ಸೇವೆಯನ್ನು ಸಲ್ಲಿಸಿದರೆ ಅದು ಸಫಲವಾಗುವದು. ಅಂತಃಕರಣವಿಲ್ಲದಲ್ಲಿ ಸೇವೆಯನ್ನು ಸಲ್ಲಿಸಿದರೆ ಅದೆಲ್ಲವೂ ನಿರರ್ಥಕವಾಗುವದು. ಉದಾ : ಅಂತಃಕರಣವಿಲ್ಲದ ಕಲ್ಲು, ಕಟ್ಟಿಗೆ, ಲೋಹದ ಗೊಂಬೆಗಳಿಗೆ ಅಥವಾ ಕಾಗದದ ಮೇಲಿನ ಚಿತ್ರಗಳಿಗೆ ನಡೆದುಕೊಂಡರೆ ಪ್ರಯೋಜನವೇನು? ಅದರಂತೆ ಅಂತಃಕರಣವು ಪೂರ್ಣ ವಿಕಾಸ ಹೊಂದದೆ ಇರುವಂಥ ಗಿಡ ಮರಾದಿಗಳಿಗೆ ನಡೆದುಕೊಂಡರೆ ಪ್ರಯೋಜನವೇನು? ಹೀಗೆ ಮಾಡುವ ಪೂಜೆಯು ನಿರರ್ಥಕವಾಗುವದಲ್ಲದೆ ಅದರಿಂದ ಪಾಪವು ಘಟಿಸುವದು. ಹೇಗೆಂದರೆ ಅಂತಃಕರಣವಿದ್ದ ಜೀವಿಗಳು ಉಪಯೋಗಿಸಬೇಕಾಗಿದ್ದ ಅನ್ನ, ನೀರು ಮುಂತಾದವು ವ್ಯರ್ಥವಾಗಿ ಜೀವಿಗಳಿಗೆ ದುಃಖವಾಗುವದು. ಹೀಗೆ ಮಾಡಿದ ಶುಷ್ಕ ಪೂಜೆಯಿಂದ ಜೀವಿಗಳಿಗೆ ದುಃಖವಾಗಿ ಅದರ ಫಲವನ್ನು

ಉಣ್ಣಬೇಕಾಗುವದು. ನಾವು ಜೀವಿಗಳಿಗೆ ಮಾಡಿದ ಪಾಪ ಪುಣ್ಯಗಳ ಫಲವನ್ನು ಉಣ್ಣಲೇ ಬೇಕಾಗುವದು. ಆದ್ದರಿಂದ ಕಾಯಾ, ವಾಚಾ, ಮನಸಾ ಜೀವಿಗಳನ್ನು ಸಂತೋಷಗೊಳಿಸುವದೇ ಈಶ್ವರ ಪೂಜೆಯೆನಿಸಿಕೊಳ್ಳುವದು.

ಜೀವಿಗಳಿಗೆ ಕುಡಿಯಲಿಕ್ಕೆ ನೀರು ಇರುವದಿಲ್ಲ. ಅವುಗಳಿಗೆ ಕುಡಿಯಲಿಕ್ಕೆ ನೀರನ್ನು ಪೂರೈಸುವದಕ್ಕಾಗಿ ಬಾವಿ, ಕೆರೆಗಳನ್ನು ಕಡಿದು ಕಟ್ಟಿಸಬೇಕು. ಅದರಂತೆ ನದಿಯ ನೀರನ್ನು ಕಟ್ಟಿ, ಆ ನೀರನ್ನು ಕುಡಿಯುವದಕ್ಕಾಗಿ ಉಪಯೋಗಿಸಲು ಬರುವದು, ಇದೇ ನೀರನ್ನು ನೀರಾವರಿಗಾಗಿಯೂ ಉಪಯೋಗಿಸಬಹುದು.

ಬಡವರಿಗೆ, ಕುರುಡರಿಗೆ, ಕುಂಟರಿಗೆ, ರೋಗಿಗಳಿಗೆ, ವೃದ್ಧರಿಗೆ ಅನಾಥರಿಗೆ, ಯಾವಾಗಲೂ ಅಧ್ಯಾತ್ಮ ಸಾಧನೆಯಲ್ಲಿ (ಆತ್ಮಧ್ಯಾನದಲ್ಲಿ) ತೊಡಗಿದ ಸಾಧಕರಿಗೆ ಅನ್ನದಾನವನ್ನು ಮಾಡಬೇಕು. ಇದಕ್ಕಾಗಿ ಅನ್ನ ಛತ್ರಾದಿಗಳನ್ನು ತೆರೆಯಬೇಕು.

ರೋಗಿಗಳ ಆರೈಕೆಗಾಗಿ ಊರಲ್ಲಿ ದವಾಖಾನೆಯನ್ನು ತೆರೆಯಬೇಕು. ರೋಗಿಗಳೇ ದೇವರು ಎಂದು ತಿಳಿದುಕೊಂಡು, ರೋಗಿಗಳ ಸೇವೆಯೇ ತನ್ನ ಗುರಿಯನ್ನಾಗಿ ಮಾಡಿಕೊಂಡ ವೈದ್ಯನನ್ನು ಆ ದವಾಖಾನೆಯಲ್ಲಿ ತಂದು ಇಡಬೇಕು. ಜೀವಿಗಳಿಗೆ ಚಳಿಯು ಹತ್ತುವದು, ಅದಕ್ಕಾಗಿ ಅವರಿಗೆ ಹಾಸಿಕೊಳ್ಳಲಿಕ್ಕೆ, ಹೊದ್ದುಕೊಳ್ಳಲಿಕ್ಕೆ ಮತ್ತು ತೊಟ್ಟುಕೊಳ್ಳಲಿಕ್ಕೆ ಬಟ್ಟೆ ಬರೆಗಳನ್ನು ದಾನ ಮಾಡಬೇಕು. ಜೀವಿಗಳಿಗೆ ಬಿಸಿಲಿನ ತಾಪವಾದಾಗ ಅವರಿಗೆ ಛತ್ರಿಯನ್ನು ಹಿಡಿಯಬೇಕು, ಜೀವಿಗಳು ಶೆಕೆಯಿಂದ ಕಷ್ಟಪಡುತ್ತಿರುವಾಗ ಅವರಿಗೆ ಫ್ಯಾನು ಹಾಕಬೇಕು.

ಇದರಂತೆ ಜೀವಿಗಳಿಗೆ ಅಪಮಾನ, ಭಯ, ವಿಷಯಾಸಕ್ತಿ (ವಿಷಯಾಸಕ್ತಿಯ ಮುಖಾಂತರ ಪಾಪ ಕೃತ್ಯಗಳನ್ನೆಸಗಿ ಪಾಪದ ಫಲವಾದ ದುಃಖವನ್ನು ಅನುಭವಿಸುವದು) ಇವುಗಳಿಂದ ದುಃಖವಾಗುವದು. ಮಾನವನಿಗೆ ಅಪಮಾನದಿಂದ ದುಃಖವಾಗುವದು, ಆದರೆ ವಿಚಾರ ಮಾಡಿ ನೋಡಿದರೆ ದೇಹವೇ ತಾನಲ್ಲ. ತಾನು ದೇಹವನ್ನು ತಿಳಿಯುವ ಅರಿವು ಇದ್ದಾನೆ. ಅರಿವು ಯಾರಿಗೂ ಕಾಣಿಸುವದಿಲ್ಲ, ಅಂದ ಮೇಲೆ ತನ್ನನ್ನು ಅಪಮಾನಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಜನರು ದೇಹವನ್ನು ನೋಡಿ ಬೈಯುವರು, ಆದರೆ ತನ್ನನ್ನು(ಅರಿವನ್ನು) ನೋಡಿ ಬೈಯಲು ಬರುವದಿಲ್ಲ. ಹೀಗೆ ವಿಚಾರ ಮಾಡಿದಾಗ ಅಪಮಾನದಿಂದ ಆಗುವ ದುಃಖವನ್ನು ಕಳೆದುಕೊಳ್ಳಲು ಬರುವದು. ಮಾನವರಿಗೆ ಭಯ ಉಂಟಾಗುವದು, ಏಕೆಂದರೆ ಅವರು ದೇಹವೇ ತಾವೆಂದು ತಿಳಿದುಕೊಂಡಿರುವರು, ದೇಹವು ಸಾಯುವದು ಆದರೆ ತಾನು (ಅರಿವು) ಸಾಯುವದಿಲ್ಲ. ತನ್ನನ್ನು ಖಡ್ಗವು ಕತ್ತರಿಸಲಾರದು, ಬೆಂಕಿಯು ಸುಡಲಾರದು, ನೀರು ತೋಯಿಸಲಾರದು, ಬಿಸಿಲು ಒಣಗಿಸಲಾರದು, ಗಾಳಿಯು ಹಾರಿಸಲಾರದು, ಅಂದ ಮೇಲೆ ತನಗೆಲ್ಲಿಯ ಭಯ.

ಯಾವುದೇ ಉಪಾಧಿಯು ಇದ್ದರೂ ಮನಸ್ಸು ನಿಶ್ಚಲವಿದ್ದಾಗ, ತನ್ನ ಸ್ವರೂಪದ ಆನಂದವೇ ಪ್ರತಿಫಲಿಸಿ ಅನುಭವಕ್ಕೆ ಬರುವದು, ಅಂದರೆ ತಾನೇ

ಸುಖ ಸ್ವರೂಪನು ಎಂದರ್ಥ. ಹೀಗಿದ್ದಾಗ ವಿಷಯಗಳ ಆಸಕ್ತಿಯು ಏಕೆ ಬೇಕು? ಈ ವಿಚಾರದಿಂದ ವಿಷಯಗಳ ಆಸಕ್ತಿಯು ಹೋಗುವದು. ಸ್ವರೂಪದ ಅಜ್ಞಾನದಿಂದಲೇ ಜನ್ಮಾಂತರ. ಇವುಗಳಿಂದ ಉಂಟಾಗುವ ದುಃಖವನ್ನು ಕಳೆದುಕೊಳ್ಳಬೇಕಾದರೆ ಸುಖ ದುಃಖದ ವಿಚಾರವು, ಆತ್ಮ ವಿಚಾರವು ಬೇಕು. ಆದ್ದರಿಂದ ಸುಖ ದುಃಖದ ವಿಚಾರ ಮತ್ತು ಆತ್ಮ ವಿಚಾರವನ್ನು ನಡೆಯಿಸುವದಕ್ಕಾಗಿ ಅಧ್ಯಾತ್ಮ ಮಂದಿರವನ್ನು ಕಟ್ಟಿಸಬೇಕು. ಅಧ್ಯಾತ್ಮ ಪುಸ್ತಕಗಳನ್ನು ಪ್ರಕಟಿಸಬೇಕು. ಸುಖ ದುಃಖದ ವಿಚಾರ ಮತ್ತು ಆತ್ಮ ವಿಚಾರವನ್ನು ಹೇಳುವದಕ್ಕಾಗಿ ನೀತಿ, ವೈರಾಗ್ಯ, ಜ್ಞಾನನಿಷ್ಠರನ್ನು ಕರೆದುಕೊಂಡು ಬಂದು, ಅವರ ಸೇವೆಯನ್ನು ಮಾಡಬೇಕು. ಅವರಿಂದ ನೀತಿ, ವೈರಾಗ್ಯ, ಜ್ಞಾನಗಳ ಬಗ್ಗೆ ವಿಚಾರವನ್ನು ಕೇಳಿ, ಅದರ ಮನನ ನಿದಿಧ್ಯಾಸನಗಳನ್ನು ಮಾಡಬೇಕು.

ಪೂಜ್ಯ ಶ್ರೀ ಗುರುದೇವರು ಅನೇಕ ಕಡೆಗಳಲ್ಲಿ ಅಧ್ಯಾತ್ಮ ಆಶ್ರಮಗಳನ್ನು ಸ್ಥಾಪಿಸಿ, ಐವತ್ತು ವರ್ಷಗಳವರೆಗೆ ನಿರಂತರ ಅಧ್ಯಾತ್ಮ ಬೋಧೆಯನ್ನು ದಿನಾಲು ಎರಡು, ಮೂರು ಸಲ ಮಾಡಿದರು. ಅವರಲ್ಲಿಗೆ ಬಂದ ಬಡವರಿಗೆ ಧನ ಧಾನ್ಯಗಳ ದಾನ ಮಾಡಿದರು. ಕೆರೆ ಬಾವಿಗಳನ್ನು ಕಡಿಸಿ ಕಟ್ಟಿಸಿದರು. ಅಮರಗೋಳದ ಕ್ಯಾನ್ಸರ್ ಆಸ್ಪತ್ರೆಗೆ ರೋಗಿಗಳ ಊಟಕ್ಕಾಗಿ ಹದಿನೈದು ಸಾವಿರ ರೂಪಾಯಿಗಳನ್ನು ದಾನ ಮಾಡಿದರು. ಇಡೀ ವಿಶ್ವದ ದರ್ಶನಗಳ ಸಾರರೂಪವಾದ (ತಮ್ಮ ಅನುಭವವನ್ನು) ತತ್ತ್ವವಿಚಾರವನ್ನು ತಮ್ಮ ಶಿಷ್ಯರ ಮೂಲಕ, ಅನೇಕ (ಇಪ್ಪತ್ತೈದು) ಪುಸ್ತಕಗಳ ಮೂಲಕ ಪ್ರಕಟಿಸಿದರು. ಪಿಶಾಚಿಗಳಿಂದ ಪೀಡಿತರಾದವರ ಬಾಧೆಯನ್ನು ಬಿಡಿಸಿದರು, ರೋಗಪೀಡಿತರಾದವರನ್ನು ಗುಣಪಡಿಸಿದರು. ಇವರ ಆಶೀರ್ವಾದದಿಂದ ಅನೇಕ ಬಡವರು ಶ್ರೀಮಂತರಾದರು. ಅವರ ಸಲಹೆ ಸೂಚನೆಗಳಿಂದ ಕೊಲೆ ಸುಲಿಗೆ ಮುಂತಾದ ಪಾಪ ಕೃತ್ಯಗಳು ಇಲ್ಲದಂತಾದವು. ಅನೇಕ ಪಾಪಿಗಳು ಇವರ ತತ್ತ್ವದ ಬೋಧದಿಂದ ತಮ್ಮ ಪಾಪ ಮಾರ್ಗವನ್ನು ಬಿಟ್ಟು, ಸನ್ಮಾರ್ಗವನ್ನು ಹಿಡಿದರು. ಇದಕ್ಕೆಲ್ಲ ಅವರ ಭಕ್ತ ಕೋಟಿಯು ಚಿರಋಣಿಯು.

ಪ್ರಶ್ನೆ : ಸಮಾಜದಲ್ಲಿ ಸುಖ ಶಾಂತಿಗಳು ನೆಲೆಸಬೇಕಾದರೆ ಯಾವ ಆಧಾರದ ಮೇಲೆ ಸಮಾಜವು ಪುನರುತ್ಥಾನವಾಗಬೇಕು?

ಉತ್ತರ : "ಶೈಶವೇ ಅಭ್ಯಸ್ಥ ವಿದ್ಯಾನಾಂ, ಯೌವನೇ ವಿಷಯೇಷಿನಾಂ

ವೃದ್ಧಾಪ್ಯೇ ಮುನಿವೃತ್ತಿನಾಂ ಯೋಗಿನಾಂ ತೆ ತನುತ್ಯಜ್ಯಾಂ"

ಸಮಾಜದಲ್ಲಿ ಸುಖ ಶಾಂತಿಗಳು ನೆಲೆಸಬೇಕಾದರೆ ಸಮಾಜವು ಆಶ್ರಮ ಪದ್ಧತಿಯ ಆಧಾರದ ಮೇಲೆ (ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ, ಸನ್ಯಾಸಾಶ್ರಮ) ಪುನರುತ್ಥಾನವಾಗಬೇಕು. ಬ್ರಹ್ಮಚರ್ಯಾಶ್ರಮದಲ್ಲಿ ಬ್ರಹ್ಮ ವಿದ್ಯೆಯ ಅಭ್ಯಾಸ (ಸುಖ ದುಃಖ ವಿವೇಕ, ಆತ್ಮಾನಾತ್ಮ ವಿವೇಕದ ಮಾಹಿತಿಯ ಅಭ್ಯಾಸ) ಗೃಹಸ್ಥಾಶ್ರಮದಲ್ಲಿ ವಿಷಯಭೋಗದ ವ್ಯವಹಾರವು ನಡೆದಾಗಲೆಲ್ಲ ಅದರಲ್ಲಿ ಸುಖವಿದೆಯೋ ಅಥವಾ ಆತ್ಮನಲ್ಲಿ ಸುಖವಿದೆಯೋ ಎಂಬುದನ್ನು ವಿಚಾರ

ಮಾಡುವದು, ವಾನಪ್ರಸ್ಥಾಶ್ರಮದಲ್ಲಿ ಮನೆತನದ ವ್ಯವಹಾರವನ್ನು ಕೈ ಬಿಟ್ಟು, ಆತ್ಮ ವಿಚಾರದಲ್ಲಿ ತೊಡಗುವದು. ಸನ್ಯಾಸಾಶ್ರಮದಲ್ಲಿ ಸ್ವರೂಪಜ್ಞಾನವನ್ನು ಹೊಂದಿ ಶರೀರವನ್ನು ಬಿಡುವದು. ಇಂದಿನ ಪೀಳಿಗೆಗೆ ಬ್ರಹ್ಮಜ್ಞಾನವೆಂಬುದು ಒಂದು ಇದೆಯೆಂಬುದರ ತಿಳುವಳಿಕೆಯೇ ಇಲ್ಲ. ಅವರು ಬ್ರಹ್ಮವಿದ್ಯೆಯೆಂಬ ಶಬ್ದವನ್ನು ಕೇಳಿ, ಅದನ್ನು ಮನಸ್ಸಿಗೆ ಬಂದಂತೆ ಟೀಕಿಸುವರು. ಇದು ಹೀಗೇಕೆ ಆಗಿದೆಯೆಂದರೆ, ನಾವು ಅವರಿಗೆ ಬ್ರಹ್ಮವಿದ್ಯೆಯ ಅಭ್ಯಾಸವನ್ನೇ ಮಾಡಿಸಿಲ್ಲ. ಅವರಿಗೆ ಬ್ರಹ್ಮವಿದ್ಯೆಯ ಮಾಹಿತಿಯೇ ಇಲ್ಲವೆಂದಮೇಲೆ ಅವರು ಗೃಹಸ್ಥಾಶ್ರಮದಲ್ಲಿ ಇರುವಾಗ, ವಿಷಯಭೋಗದ ವ್ಯವಹಾರವು ನಡೆದಾಗಲೆಲ್ಲ ಅದು ಸುಖದಾಯಕವೋ, ಅಥವಾ ಆತ್ಮವು ಸುಖದಾಯಕವೋ ಎಂಬ ವಿಚಾರದಲ್ಲಿ ತೊಡಗುವದು ಅಸಾಧ್ಯ. ಹೀಗೆ ಅವರ ವಿಷಯಾಸಕ್ತಿಯು ಹೋಗದೆ ಇರುವದರಿಂದ ಅವರು ವಾನಪ್ರಸ್ಥಾಶ್ರಮಕ್ಕೆ ಬಂದು ಆತ್ಮವಿಚಾರದಲ್ಲಿ ತೊಡಗುವದು ಸಾಧ್ಯವಿಲ್ಲ, ಸನ್ಯಾಸ ಆಶ್ರಮವಂತೂ ದೂರವೇ ಉಳಿಯಿತು. ಇಂದಿನ ಮಾನವರು ವಿಷಯ ವ್ಯಾಮೋಹವನ್ನೇ ಪ್ರಚೋದನೆ ಮಾಡುವಂಥ ಪರಿಸರದಲ್ಲಿ ಬೆಳೆಯುತ್ತಿರುವದರಿಂದ, ವಿಷಯ ವ್ಯಾಮೋಹವು ಗಾಢವಾಗಿದ್ದರಿಂದ, ಅವರು ನೀತಿಯ ನಿಯಮಗಳನ್ನು ಪಾಲಿಸಲಾರದೆ; ಪಶು, ರಾಕ್ಷಸ, ಪಿಶಾಚಿಯ ಜೀವನವನ್ನು ನಡೆಯಿಸಿ, ಅನೇಕ ಪಾಪ ಕೃತ್ಯಗಳನ್ನೆಸಗಿ, ಅವುಗಳ ಫಲರೂಪವಾದ ದುಃಖವನ್ನು ಅನುಭವಿಸುವರು. ಅಲ್ಲದೆ ಪಾಪ ಕೃತ್ಯಗಳನ್ನು ಎಸಗುವದರ ಮೂಲಕ ಇನ್ನೊಬ್ಬರಿಗೆ ಅತಿ ದುಃಖವನ್ನು ಕೊಡುವರು. ಕ್ರಮೇಣ ವಿಷಯಾಸಕ್ತಿಯು ಕಡಿಮೆಯಾಗದ ಹೊರತಾಗಿ ಸಮಾಜದಲ್ಲಿಯ ಜೀವಿಗಳ ವ್ಯವಹಾರವು ಸರಳವಾಗಿ ನಡೆಯುವದು ಸಾಧ್ಯವಿಲ್ಲ. ಆತ್ಮಜ್ಞಾನದ ಮುಖಾಂತರ (ಜನನ ಮರಣವಿಲ್ಲದ) ಶಾಶ್ವತ ಸುಖವನ್ನು ಹೊಂದುವದಂತೂ ದೂರವೇ ಉಳಿಯಿತು.

ಪೂಜ್ಯ ಗುರುದೇವರು ಅನೇಕ ಅಧ್ಯಾತ್ಮ ಆಶ್ರಮಗಳನ್ನು ಸ್ಥಾಪಿಸಿ, ಅಲ್ಲಿ ಐವತ್ತು ವರ್ಷಗಳವರೆಗೆ ದಿನಾಲು ಎರಡು ಸಲ ತಪ್ಪದೇ, ತಾವು ಶರೀರತ್ಯಾಗ ಮಾಡುವವರೆಗೆ ಬ್ರಹ್ಮವಿದ್ಯೆಯ ಬೋಧ ಮಾಡಿದರು. ತಾವು ಸ್ಥಾಪಿಸಿದ ಆಶ್ರಮಗಳಲ್ಲಿ ಬ್ರಹ್ಮವಿದ್ಯೆಯ ಬೋಧವು ನಿರಂತರ ನಡೆಯಬೇಕು ಮತ್ತು ಅಧ್ಯಾತ್ಮ ಸಾಧಕರ (ನೈಷ್ಠಿಕ ಬ್ರಹ್ಮಚಾರಿಗಳು ಮತ್ತು ಗೃಹಸ್ಥರು) ಆತ್ಮಧ್ಯಾನದಲ್ಲಿ ತೊಡಗಬೇಕು ಎಂದು ತಿಳಿಸಿದರು. ಆಶ್ರಮಗಳಿಗೆ ಬರುವ ಸಾಧಕರಿಗೆ ಊರ ಜನರು ಊಟದ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸಿದರು. ಹೀಗೆ ಅವರ ಎಲ್ಲ ಆಶ್ರಮಗಳಲ್ಲಿ ಅವರು ಹೇಳಿದಂತೆ **'ಹೊಟ್ಟೆಗೆ ಬಾನ, ನೆತ್ತಿಗೆ ಜ್ಞಾನ'** ಎಂಬುದು ಈಗಲೂ ಚಾಚೂ ತಪ್ಪದೆ ಮುಂದುವರೆದಿದೆ.

ಪ್ರಶ್ನೆ : ಮಾನಸಿಕ ಶಾಂತಿಯನ್ನು ಹೊಂದುವ ಕ್ರಮ ಯಾವುದು?

ಉತ್ತರ : ಈಗ ಮಾನಸಿಕ ಶಾಂತಿಯನ್ನು ಹೊಂದುವ ಅಪೇಕ್ಷೆ ಏಕೆ ಆಗಿದೆಯೆಂದರೆ, ಮನಸ್ಸಿಗೆ ಶಾಂತಿ ಇಲ್ಲ ಎಂದರ್ಥ. ಮನಸ್ಸಿನಲ್ಲಿ ಶಾಂತಿಯು ಏಕೆ ಇಲ್ಲ ಎಂದರೆ ಮನಸ್ಸಿನಲ್ಲಿ ಅಸಂಖ್ಯ ವಿಷಯ ಭೋಗದ ಆಶೆಗಳಿವೆ. ಈ ಆಶೆಗಳು ಏಕೆ ಇವೆ ಎಂದರೆ, ವಿಷಯಗಳ ಭೋಗವೇ ಸುಖದಾಯಕ ಎಂಬುದು ದೃಢವಾಗಿದೆ. ವಿಷಯಗಳ ಭೋಗವು ಸುಖದಾಯಕವು ಎಂಬ ದೃಢ ಬುದ್ಧಿಯು ಎಲ್ಲಿಯವರೆಗೆ

ಹೋಗುವದಿಲ್ಲವೋ ಅಲ್ಲಿಯವರೆಗೆ ಅವುಗಳ ಆಶೆಯು ಹೋಗುವದಿಲ್ಲ, ಎಲ್ಲಿಯವರೆಗೆ ಅವುಗಳ ಆಶೆಯು ಹೋಗುವದಿಲ್ಲವೋ ಅಲ್ಲಿಯವರೆಗೆ ಮನಸ್ಸು ಅಶಾಂತವಾಗುವದು ತಪ್ಪುವದಿಲ್ಲ. ಆದ್ದರಿಂದ ಮೋಹವನ್ನು ಬಿಡುವದರಿಂದ ಮಾನಸಿಕ ಶಾಂತಿ ಎಂಬುದು ಸುನಿಶ್ಚಿತವು.

ವಿಷಯಭೋಗದ ಆಶೆಯು ಹೋಗಬೇಕಾದರೆ ವಿಷಯಗಳಲ್ಲಿ ಸುಖವಿಲ್ಲ ಎಂಬುದು ದೃಢವಾಗಬೇಕು. ವಿಷಯಗಳಲ್ಲಿ ಸುಖವಿಲ್ಲ ಎಂಬುದು ದೃಢವಾಗಬೇಕಾದರೆ ಅವುಗಳಲ್ಲಿ ಸುಖವಿದೆಯೋ ಇಲ್ಲವೋ ಎಂಬುದನ್ನು ವಿಚಾರ ಮಾಡಬೇಕು. ಯಾವಾಗ ವಿಷಯಗಳ ನೆನಪು ಉಂಟಾಗುವದೋ ಆಗ ಅವುಗಳ ಸಂಗದ ಇಚ್ಛೆಯುಂಟಾಗುವದು. ಈ ಇಚ್ಛೆಯಿಂದ ಮನಸ್ಸು ಚಂಚಲವಾಗಿ ದುಃಖ ಉಂಟಾಗುವದು. ಒಮ್ಮೆ ವಿಷಯದ ಸಂಗವು ಉಂಟಾದರೆ ಆಗ ಮನಸ್ಸಿನಲ್ಲಿ ಆ ವಿಷಯದ ಇಚ್ಛೆಯು ಇಲ್ಲವಾಗಿ, ಮನಸ್ಸು ಶಾಂತವಾಗಿ, ಆನಂದವು ಅನುಭವಕ್ಕೆ ಬರುವದು. ಇದು ಅತಿ ಕ್ಷಣಿಕವಿರುವದರಿಂದ ಮಾನವನು ತನಗಾದ ಆನಂದವು ವಿಷಯದಿಂದಲೇ ಸಿಕ್ಕಿತೆಂದು ಭ್ರಮೆಗೊಳ್ಳುವನು. ಹೀಗೆ ಎಷ್ಟು ಸಲ ಮಾನವನು ವಿಷಯಭೋಗ ಮಾಡುವನೋ, ಪ್ರತಿಸಲ ಸುಖವು ವಿಷಯಭೋಗದಿಂದ ದೊರೆಯಿತು ಎಂದು ತಿಳಿದುಕೊಳ್ಳುತ್ತ, ಆ ವಿಷಯಗಳ ಭೋಗದಿಂದಲೇ ಸುಖ ಎಂಬುದನ್ನು ದೃಢಪಡಿಸಿಕೊಳ್ಳುವನು. ಹೀಗೆ ಮಾನವನು ವಿಷಯಗಳ ಭೋಗದ ಆಶೆಯನ್ನು ದೃಢಪಡಿಸಿಕೊಳ್ಳುತ್ತಾನೆ, ಹೀಗೆ ವಿಷಯಗಳ ಕಾಮವು (ಇಚ್ಛೆಯು) ದೃಢವಾಗುತ್ತದೆ. ಭೋಗದ ವಿಷಯಗಳನ್ನು ಗಳಿಸುವಾಗ ಯಾರಾದರೂ ಅದಕ್ಕೆ ವಿಘ್ನವಾದರೆ ಕ್ರೋಧವು (ದ್ವೇಷವು) ಉಂಟಾಗುವದು. ದ್ವೇಷದಿಂದ ಮನಸ್ಸು ಚಂಚಲವಾಗುವದು, ದುಃಖವಾಗುವದು, ಕ್ರೋಧವು ಉಂಟಾದಾಗ ಹಿತಾಹಿತ, ಪುಣ್ಯ ಪಾಪ, ನ್ಯಾಯ ಅನ್ಯಾಯ, ಧರ್ಮ ಅಧರ್ಮ ಎಂಬ ವಿವೇಕ ಶಕ್ತಿಯು ನಾಶವಾಗಿ, ಕೊಲೆ ಸುಲಿಗೆ ಮುಂತಾದ ಪಾಪ ಕೃತ್ಯಗಳು ಜರುಗಿ, ಅದರ ಫಲರೂಪವಾದ ದುಃಖವನ್ನು ಅನುಭವಿಸಬೇಕಾಗುವದು. ವಿಷಯಗಳ ಭೋಗವು ಮುಂದುವರೆದಂತೆ ಅವುಗಳ ಮೋಹವು ದೃಢವಾಗಿ, ತನ್ಮೂಲಕ ಕಡು ಲೋಭ ಉಂಟಾಗುವದು. ಮೋಹ ಲೋಭಗಳಿಂದ ಅನೇಕ ಪಾಪ ಕೃತ್ಯಗಳು ಜರುಗಿ, ಅವುಗಳ ಫಲರೂಪವಾದ ದುಃಖವನ್ನು ಅನುಭವಿಸಬೇಕಾಗುವದು. ಮಾನವನಿಗೆ ಪ್ರಾರಬ್ಧವಶಾತ್ ಹೆಚ್ಚಿನ ಸಂಖ್ಯೆಯಲ್ಲಿ ವಿಷಯಭೋಗ ಸಾಮಗ್ರಿಗಳಿದ್ದರೆ, ಅವುಗಳ ಬಗ್ಗೆ ಇವನಲ್ಲಿ ಗರ್ವವು (ಮದ) ಉದಯಿಸುವದು. ಇನ್ನೊಬ್ಬ ಮಾನವನು ಅವನಿಗಿಂತ ಹೆಚ್ಚು ವಿಷಯಭೋಗ ಸಾಮಗ್ರಿಗಳನ್ನು ಹೊಂದಿದ್ದರೆ, ಅವನ ಬಗ್ಗೆ ಮತ್ಸರ ಬುದ್ಧಿಯುಂಟಾಗುವದು. ಹೀಗೆ ವಿಷಯಗಳ ಸಲುವಾಗಿಯೇ ಕಾಮ, ಕ್ರೋಧ, ಮೋಹ, ಲೋಭ, ಮದ ಮತ್ಸರಗಳೆಂಬ ಆರು ವೈರಿಗಳು, ವಿಷಯ ಸುಖಬುದ್ಧಿಯ ಮೂಲಕವೇ ಇವೆ. ಸಾಮಾನ್ಯವಾಗಿ ನಾವು, ಅವರು ನಮ್ಮ ವೈರಿಗಳು, ಇವರು ನಮ್ಮ ವೈರಿಗಳು ಎಂದು ತಿಳಿದುಕೊಳ್ಳುತ್ತೇವೆ. ಆದರೆ ನಿಜವಾಗಿ ನಮ್ಮ ಮನಸ್ಸಿನಲ್ಲಿರುವ ವಿಷಯಗಳ ವ್ಯಾಮೋಹವೇ ನಮ್ಮ ವೈರಿ. ಈ ವೈರಿಯ ಮುಖಾಂತರ ಆರು ವೈರಿಗಳು, ಅವುಗಳ ಮುಖಾಂತರ ವ್ಯಕ್ತಿಗಳು ವೈರಿಗಳಾಗುವರು.

ವಿಷಯಗಳನ್ನು ಗಳಿಸಬೇಕಾದರೆ ಶರೀರಕ್ಕೆ ದಣಿವು ದುಃಖ ಉಂಟಾಗುವದು, ಮನಸ್ಸಿಗೆ ಚಿಂತೆ ಉಂಟಾಗುವದು, ನಂತರ ವಿಷಯಗಳ ಪಾಲನೆ ಪೋಷಣೆ, ಜೋಪಾನ ಮಾಡುವದೂ ದುಃಖದಾಯಕವೇ ಇರುವದು. ಅದರಂತೆ ವಿಷಯಭೋಗವು ಶರೀರಕ್ಕೆ ದಣಿವು, ಮನಸ್ಸಿಗೆ ಬೇಸರವಾಗುವದು. ವಿಷಯ ಭೋಗದಿಂದ ಶರೀರದಲ್ಲಿ ರೋಗಗಳು ಉಂಟಾಗುವವು ಮತ್ತು ಮನಸ್ಸಿನಲ್ಲಿ ವಿಷಯಗಳ ಆಶೆಯು ಗಟ್ಟಿಯಾಗುತ್ತ ಹೋಗುವದು. ವಿಷಯಭೋಗವೆಂದರೆ ನರದ ತುರಿಕೆಯೇ. ವಿಷಯಭೋಗವನ್ನು ಹೊಂದಿ ಸುಖವನ್ನು ಹೊಂದಬೇಕು ಎನ್ನುವದರೊಳಗೆ ಶರೀರದಲ್ಲಿ ರೋಗವು ಉದ್ಭವಿಸುವದು, ಶರೀರವು ನಾಶವಾಗುವದು, ವಿಷಯಗಳು ಜೀರ್ಣವಾಗುವವು, ನಾಶವಾಗುವವು. "ಸುಖತಃ ಕ್ರಿಯತೆ ಕಾಮಾ ಭೋಗಃ ಪಶ್ಚಾದ್ಯಂತೆ ಶರೀರೆ ರೋಗಃ", "ಆಶಾ ನ ಜೀರ್ಣಾ ವಯಮೇವ ಜೀರ್ಣಾ, ಭೋಗಾ ನ ಭೋಕ್ತಾ ವಯಮೇವ ಭೋಕ್ತಾ" ಶರೀರವೇ ಜೀರ್ಣವಾಗುವದೇ ವಿನಃ ಆಶೆಯು ಜೀರ್ಣವಾಗುವದಿಲ್ಲ, ಭೋಗವೇ ಇವನನ್ನು ಉಂಡು ತೀರಿಸುವದೇ ವಿನಃ ಇವನೇನು ಭೋಗಾದಿಗಳನ್ನು ಉಂಡು ತೀರಿಸುವದಿಲ್ಲ. "ಹವಿಷಾ ಕೃಷ್ಣ ವರ್ತಮಾ ವರ್ಧತೆ ಏವ ನ ತು ಕ್ಷೀಯತೆ" ವಿಷಯಗಳನ್ನು ಭೋಗಿಸಿದಂತೆ ಭೋಗಾಸಕ್ತಿಯು ಹೆಚ್ಚಾಗುತ್ತದೆ ವಿನಃ ಕಡಿಮೆಯಾಗುವದಿಲ್ಲ. ವಿಷಯಗಳ ಸಂರಕ್ಷಣೆಯು ದುಃಖಕರವೇ, ವಿಷಯಗಳು ಕಳೆದು ಹೋದರೆ, ನಾಶವಾಗಿ ಹೋದರೆ ಅತಿ ದುಃಖವು.

ವಿಷಯ ವ್ಯಾಮೋಹದಿಂದ ರಾಕ್ಷಸಿ ಪೈಶಾಚಿಕ ಕೃತ್ಯಗಳನ್ನೆಸಗಿ, ರಾಕ್ಷಸ ಪಿಶಾಚಿ ಜನ್ಮಗಳನ್ನು ಪಡೆಯಬೇಕಾಗುವದು. ವಿಷಯ ವ್ಯಾಮೋಹವನ್ನು ಇಟ್ಟುಕೊಂಡು, ಶರೀರವನ್ನು ಬಿಟ್ಟು, ಪಿಶಾಚಿಯಾಗಿ ಇನ್ನೊಬ್ಬರಿಗೆ ಪೀಡೆ ಕೊಟ್ಟು, ಆ ವ್ಯಾಮೋಹದ ವಿಷಯಗಳನ್ನು ಪಡೆದುಕೊಳ್ಳಬೇಕಾಗುವದು. ವಿಷಯ ವ್ಯಾಮೋಹದಿಂದ ಮನಸ್ಸು ಯಾವಾಗಲೂ ಚಂಚಲವಾಗಿ ಆನಂದಾನುಭವಕ್ಕೆ ವಿಘ್ನವಾಗುವದು ಮತ್ತು ಸ್ವರೂಪಜ್ಞಾನವನ್ನು ಹೊಂದುವದಕ್ಕೂ ವಿಘ್ನವಾಗುವದು. ಹೀಗೆ ಮೋಹವನ್ನು ಬಿಡುವದರಿಂದ ಮಾನಸಿಕ ಶಾಂತಿಯು ದೊರೆಯುವದು.

ಪೂಜ್ಯ ಗುರುದೇವರಿಗೆ ವಿಷಯ ವ್ಯಾಮೋಹವು ಎಳ್ಳಷ್ಟೂ ಇರಲಿಲ್ಲ. ಭಕ್ತಾದಿಗಳು ಕಾಣಿಕೆಯೆಂದು ಅವರಿಗೆ ಧನವನ್ನು ಸಲ್ಲಿಸಿದರೆ, ಅದನ್ನು ಸ್ವೀಕರಿಸದೆ ಅವರಿಗೇ ಮರಳಿ ಕೊಡುತ್ತಿದ್ದರು. ಅದರಂತೆ ಹಣ್ಣುಗಳನ್ನು ಸಲ್ಲಿಸಿದರೆ, ಅವೆಲ್ಲವುಗಳನ್ನು ಭಕ್ತಾದಿಗಳಿಗೇ ಹಂಚುತ್ತಿದ್ದರು. ಯಾರಾದರೂ ಧೋತರ, ರುಮಾಲು, ಕೋಟು ಮುಂತಾದವುಗಳನ್ನು ಕೊಟ್ಟರೆ, ಅವುಗಳನ್ನು ಬಡವರಿಗೆ ಕೊಡುತ್ತಿದ್ದರು. ಭಕ್ತರು ಅವರಿಗೆ ಮಠದ ಒಡೆತನವನ್ನು ವಹಿಸಿಕೊಳ್ಳಲು ಕೇಳಿದಾಗ, ಅವರು ಅದನ್ನು ಧಿಕ್ಕಾರ ಮಾಡಿದರು. ಅದರಂತೆ ಪಲ್ಲಕ್ಕಿ ತೇರುಗಳಲ್ಲಿ ಮೆರೆಯುವ ಆಶೆಯು ಅವರಿಗಿರಲಿಲ್ಲ, ಜನರು ತಮಗೆ ನಮಸ್ಕರಿಸಬೇಕೆಂಬುದೂ ಅವರಿಗಿರಲಿಲ್ಲ. ಯಾರಾದರೂ ಪೂಜ್ಯರಿಗೆ ನಮಸ್ಕರಿಸಿದರೆ, ತಾವು ಅವರಿಗೆ ನಮಸ್ಕರಿಸುತ್ತಿದ್ದರು. ಅವರು ಸ್ವತಃ ಸಂಸ್ಕೃತ ಪಂಡಿತರಿದ್ದರೂ, ಸಂಸ್ಕೃತವನ್ನು ಬಳಸದೇ ಕನ್ನಡ ಭಾಷೆಯಲ್ಲಿ

ಕೇವಲ ಅನುಭವವನ್ನೇ ವಿವರಿಸುತ್ತಿದ್ದರು. ಅವರ ಟ್ರಂಕಿನಲ್ಲಿರುವ ವಸ್ತುಗಳೆಂದರೆ ಹಲ್ಲು ತಿಕ್ಕುವ ಉತ್ತರಣಿ ಬೇರಿನ ತುಂಡುಗಳು, ಕಡಾವುಗಳು, ಅವುಗಳ ಪಟ್ಟಿಗಳು ಮತ್ತು ಮೊಳೆ ಮುಂತಾದವುಗಳು. ಅವರಿಗೆ ಎಪ್ಪತ್ತು ಎಕರೆ ಜಮೀನು ಇದ್ದರೂ ಅವರು ಒಕ್ಕಲುತನವನ್ನೇ ಮಾಡಲಿಲ್ಲ. ತಾವು ಬನಾರಸ ಹಿಂದೂ ವಿಶ್ವವಿದ್ಯಾಲಯದ (1932) ಎಂ.ಎ ಪದವೀಧರರಿದ್ದರೂ ಯಾವುದೇ ನೌಕರಿಯನ್ನು ಮಾಡಲಿಲ್ಲ.

ಪ್ರಶ್ನೆ : ದೇಹಭಾವವು ದುಃಖಮಯ ಹೇಗೆ?

ಉತ್ತರ : ತಾಯಿಯ ಗರ್ಭದಲ್ಲಿರುವಾಗ ಅತಿ ಹೇಯವಾದ ವಸ್ತುಗಳ ಮಧ್ಯದಲ್ಲಿದ್ದು ಜೀವಿಸಬೇಕಾಗುವದು, ಸಿಡಿಲಿಗೆ ಸಮಾನವಾದ ಸೂತ ವಾಯುವಿನ ಹೊಡೆತವನ್ನು ಅನುಭವಿಸಬೇಕಾಗುವದು. ಇನ್ನು ಜನನ (ಹುಟ್ಟುವಿಕೆ) ಎಂದರೆ ದುಃಖವೆಂಬ ಸಮುದ್ರದ ಮಧ್ಯದಲ್ಲಿದ್ದಂತೆ. ಜನನವಾಗುವಾಗ ಕೂಸು ಸಾಯಬಹುದು ಅಥವಾ ತಾಯಿಯು ಸಾಯಬಹುದು ಅಥವಾ ಇಬ್ಬರೂ ಸಾಯಬಹುದು. ನಂತರ ಬಾಲರೋಗ ಮುಂತಾದವುಗಳ ಬಾಧೆ, ಅವುಗಳ ಬಾಧೆಯಿಂದ ಶರೀರವೇ ಹೋಗಬಹುದು. ಬಾಲ್ಯಾವಸ್ಥೆಯೆಂದರೆ ನರಕದ ಓಕುಳಿಯಂತೆ ಇರುವದು, ಅಂದರೆ ಮಲಮೂತ್ರಗಳಲ್ಲಿಯೇ ಬಿದ್ದು ಉರುಳಾಡಬೇಕಾಗುವದು. ಆಗ ಏನೂ ತಿಳುವಳಿಕೆ ಇಲ್ಲದಿರುವದರಿಂದ ನೀರಿನಲ್ಲಿ ಬಿದ್ದು, ಬೆಂಕಿಯಲ್ಲಿ ಬಿದ್ದು ಅಥವಾ ಎತ್ತರದ ಸ್ಥಾನದಿಂದ ಕೆಳಗೆ ಬಿದ್ದು ಸಾವಿಗೆ ಈಡಾಗಬೇಕಾಗುವದು, ನಂತರ ಯೌವನವು ಬರುವದು, ಆಗ ಶರೀರದಲ್ಲಿ ಬಲವಿರುವದು, ಆಗ ಸಾಮಾನ್ಯವಾಗಿ ಮಾನವನು ವ್ಯಭಿಚಾರ ಮಾಡುವದು, ಕಳವು ಮಾಡುವದು, ಇನ್ನೊಬ್ಬರಿಗೆ ಪೀಡೆಯನ್ನು ಕೊಡುವದು ಮುಂತಾದ ಪಾಪ ಕೃತ್ಯಗಳಲ್ಲಿ ತೊಡಗಿ, ಇನ್ನುಳಿದ ಜೀವಿಗಳಿಂದ ಹೊಡೆತ ತಿನ್ನುವನು ಮತ್ತು ದುಃಖವನ್ನು ಹೊಂದುವನು. ಸಿಕ್ಕ ಸಿಕ್ಕದ್ದನ್ನು (ಶೆರೆ, ಶಿಂದಿಯನ್ನು) ಕುಡಿಯುವನು, ಸಿಕ್ಕ ಸಿಕ್ಕದ್ದನ್ನು (ಮಾಂಸವನ್ನು) ತಿನ್ನುವನು. ಹೀಗೆ ಅತಿಭೋಗದಿಂದ ಶರೀರದಲ್ಲಿಯ ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಂಡು ರೋಗಗಳಿಗೆ ತುತ್ತಾಗುವನು. ನಂತರ ಮುಪ್ಪಿನಾವಸ್ಥೆ ಬರುವದು. ಮುಪ್ಪಿನಾವಸ್ಥೆಯೆಂದರೆ ನಾಚಿಕೆಗೇಡಿತನದ ಸ್ಥಿತಿಯು. ಅಂದರೆ ಎಲ್ಲ ತಿಳಿವಳಿಕೆಯು ಇರುವದು, ಆದರೂ ಮಲಮೂತ್ರದಲ್ಲಿ ಬಿದ್ದು ಉರುಳಾಡಬೇಕಾಗುವದು (ಆದರೆ ಕೂಸಿಗೆ ಈ ತಿಳಿವಳಿಕೆಯು ಇರುವದಿಲ್ಲ, ಅದು ಮಲಮೂತ್ರದಲ್ಲಿ ಬಿದ್ದು ಉರುಳಾಡಬೇಕಾಗುವದು), ಕಡೆಗೆ ಮರಣದ ಬಾಧೆಯಂತೂ ಅತಿ ಭಯಂಕರವಿರುವದು. ಆಗ ಶರೀರದ ಎಚ್ಚರವೇ ತಪ್ಪುವದು, ಆಗ ಯಮನದೂತರು ಶರೀರದಲ್ಲಿರುವ ಸೂಕ್ಷ್ಮ ಶರೀರವನ್ನು ಹೊರಗೆಳೆದು ಒಯ್ಯುವರು. ಪಾಪ ಕರ್ಮವಿದ್ದರೆ ಆ ಸೂಕ್ಷ್ಮ ಶರೀರವನ್ನು ಮುಳ್ಳಿನಲ್ಲಿ ಒಗೆಯುವದು, ಬಾಯಿಯಲ್ಲಿ ಮಲಮೂತ್ರಾದಿಗಳನ್ನು ಹಾಕುವದು ಮುಂತಾದ ಯಾತನೆಗೆ ಗುರಿಪಡಿಸುವರು, ನಂತರ ಮತ್ತೆ ಜನ್ಮವು ಬರುವದು. ಹೀಗೆ ಜನನ ಮರಣಗಳ ಚಕ್ರವು ತಿರುಗುತ್ತಲೇ ಇರುವದು.

ಶರೀರದ ಭಾವವಿದ್ದಾಗ ಹಸಿವೆ ನೀರಡಿಕೆಯ ಬಾಧೆಯಂತೂ ಯಾವಾಗಲೂ ಇರುವದೇ. ದೇಹದ ನೋವಿನಿಂದ ದುಃಖವಾಗುವದು. ವಿಷಯ ಸುಖಬುದ್ಧಿಯ ಮೂಲಕ ಅವುಗಳ ಆಶಾರೂಪಿ ಬಾಧೆಯು ಯಾವಾಗಲೂ ಪೀಡಿಸುತ್ತಿರುವದು. ಅಪಮಾನವೆಂಬುದು ಕೂಡ ಭಯಂಕರ ದುಃಖವೇ. ಕೆಲವರು ಅಪಮಾನದ ಪ್ರಸಂಗಗಳನ್ನು ಸಹಿಸಲಾರದೆ ವಿಷವನ್ನು ಕುಡಿದು, ನೇಣು ಹಾಕಿಕೊಂಡು ಮುಂತಾದ ರೀತಿಗಳಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುವರು. ಇದರಿಂದ ಮುಂದೆ ಪಿಶಾಚಿ ಜನ್ಮವು ಬರುವದು. ಅಲ್ಲಿ ಯಮದೂತರ ಬಾಧೆಯನ್ನು ಅನುಭವಿಸಬೇಕಾಗುವದು. ದೇಹಭಾವನೆಯು ಇರುವವರೆಗೆ ಭಯವು ತಪ್ಪಿದ್ದಲ್ಲ. ದೇಹಭಾವನೆಯು ಇಲ್ಲದ ಗಾಢನಿದ್ರೆಯಲ್ಲಿ ದೇಹದ ಮೇಲೆ ಹಾವು ಹಾಯ್ದು ಹೋದರೂ ಭಯವಿಲ್ಲ.

'ದೇಹವೇ ನಾನು' ಎಂಬ ಭಾವನೆಯು ಎಲ್ಲಿಯವರೆಗೆ ಇರುವದೋ, ಅಲ್ಲಿಯವರೆಗೆ ತಾನು ಕರ್ಮವನ್ನು ಮಾಡುವವನಾದನು. ಕರ್ಮವನ್ನು ಮಾಡುವವನಾದ ಮೇಲೆ ನಂತರ ಕರ್ಮದ ಫಲವನ್ನು ಉಣ್ಣಬೇಕಾಗುವದು. ಕರ್ಮದ ಫಲವನ್ನು ಉಣ್ಣುವದಕ್ಕಾಗಿ ಜನನ ಮರಣರೂಪಿ ಕರ್ಮದ ಚಕ್ರದಲ್ಲಿ ಸಿಕ್ಕು ಬಳಲಬೇಕಾಗುವದು. ಹೀಗೆ ದೇಹಭಾವದಿಂದ ದುಃಖವೇ ಆಗುವದು. ದೇಹಭಾವನೆಯು ಸುಖವೆಂದು ತಿಳಿದುಕೊಂಡವನು ದೇಹ(ಜನ್ಮ)ವನ್ನು ಪಡೆಯುವನು. ನಾವು ಜೀವಂತ ಇರುವಾಗ ಮಾತನಾಡುವೆವು, ಆದರೆ ಸತ್ತಾಗ ಮಾತನಾಡುವದಿಲ್ಲ, ಏಕೆಂದರೆ ಸತ್ತಾಗ ಮಾತನಾಡುವವನು ದೇಹವನ್ನು ಬಿಟ್ಟು ಹೊರಗೆ ಹೋಗಿರುವನು. ಇದರ ಅರ್ಥ ನಾವು ಮಾತನಾಡುವವರು, ತಿಳಿಯುವವರು, ಅಥವಾ ಆತ್ಮ ಎಂದು ಅರ್ಥವಾಗುವದು. ಆದ್ದರಿಂದ ನಾವು ದೇಹವಲ್ಲ.

ಪ್ರಶ್ನೆ : ಮಾನವ ಜನ್ಮದ ಗುರಿ ಏನು?

ಉತ್ತರ : ಮಾನವ ಜನ್ಮದ ಗುರಿ ಸ್ವರೂಪಜ್ಞಾನವನ್ನು ಹೊಂದುವದು. ಜೀವಿಗಳು ಎಂಬತ್ನಾಲ್ಕು ಲಕ್ಷ ಪ್ರಕಾರದವುಗಳು ಇವೆ. ಅವುಗಳಲ್ಲಿ ಮಾನವ ಜನ್ಮದಿಂದ ಮಾತ್ರ ಸ್ವರೂಪಜ್ಞಾನವನ್ನು ಮಾಡಿಕೊಳ್ಳಲು ಬರುವದು, ಉಳಿದ ಯಾವದೇ ಜನ್ಮದಿಂದ, ದೇವತರ ಜನ್ಮದಿಂದಲೂ ಸಹ ಸ್ವರೂಪಜ್ಞಾನವನ್ನು ಮಾಡಿಕೊಳ್ಳಲು ಬರುವದಿಲ್ಲ. ಮಾನವನಿಗೆ ಮಾತ್ರ ಸುಖವಾವುದು, ದುಃಖವಾವುದು? ತನ್ನ ನಿಜಸ್ವರೂಪವಾವುದು? ಅದಕ್ಕೆ ಅನ್ಯವಾದದ್ದು ಯಾವುದು? ಎಂಬುದನ್ನು ವಿಚಾರಿಸಕ್ಕ ವಿವೇಕವಿದೆ. ಈ ವಿವೇಕವು ಉಳಿದ ಯಾವ ಜನ್ಮಕ್ಕೂ ಇಲ್ಲ. ಆದ್ದರಿಂದ ಎಂಭತ್ನಾಲ್ಕು ಲಕ್ಷ ಪ್ರಕಾರದ ಜನ್ಮಗಳಲ್ಲಿ ಮಾನವ ಜನ್ಮವು ಶ್ರೇಷ್ಠವು. ಮಾನವ ಶರೀರವೆಂಬ ಡೋಣಿಯು ಒಡೆದು ಹೋಗುವದರೊಳಗೆ, ಸ್ವರೂಪ ಜ್ಞಾನವನ್ನು ಹೊಂದಿದರೆ ಮಾನವ ಜನ್ಮವನ್ನು ಪಡೆದದ್ದು ಸಾರ್ಥಕವಾಯಿತು, ಇಲ್ಲದಿದ್ದರೆ ಮಾನವ ಜನ್ಮವನ್ನು ಪಡೆದದ್ದು ನಿರರ್ಥಕವಾಯಿತು. ಮಾನವನಿಗೆ ಮೂರು ಅವಸ್ಥೆಗಳು ಇರುವವು. ಜಾಗ್ರಾವಸ್ಥೆಯಿಂದ ಅದು ದುಃಖವೆಂದು ತಿಳಿಯಲು ಬರುವದು, ಕನಸಿನಿಂದ

ಜಾಗ್ರಾವಸ್ಥೆಯು ಕನಸಿನಂತೆ ಸುಳ್ಳು ಎಂದು ತಿಳಿದುಕೊಳ್ಳಲು ಬರುವದು, ಗಾಢ ನಿದ್ರೆಯಿಂದ ಆತ್ಮನಲ್ಲಿಯೇ ಸುಖವಿದೆ ಎಂದು ತಿಳಿದುಕೊಳ್ಳಲು ಬರುವದು. ಏಕೆಂದರೆ ಗಾಢ ನಿದ್ರೆಯಲ್ಲಿ ಯಾವ ವಿಷಯ ವಸ್ತುಗಳೂ ಇರುವದಿಲ್ಲ, ಆದರೆ ತಾನು ಮಾತ್ರ ಅಲ್ಲಿ; ಯಾರೂ ಇರಲಿಲ್ಲ, ಏನೂ ತಿಳಿಯಲಿಲ್ಲ, ಆರಾಮವಿತ್ತು ಎಂಬುದನ್ನು ತಿಳಿಯುತ್ತ ಇರುವನು. ಆದ್ದರಿಂದ ತಾನೇ ಸುಖ ಸ್ವರೂಪನು ಎಂಬುದನ್ನು ತಿಳಿಯಲು ಬರುವದು.

ಪ್ರಶ್ನೆ : ಗುರು ಯಾರು?

ಉತ್ತರ : ಯಾರು ಸ್ವರೂಪದ ಅಜ್ಞಾನವನ್ನು, ಸ್ವರೂಪದ ಜ್ಞಾನದಿಂದ ನಾಶಮಾಡಿಕೊಂಡಿರುವರೋ ಅವರೇ ಗುರುಗಳು. ಅವರು ಮಾತ್ರ ಅಜ್ಞಾನಿ ಜೀವಿಗಳು ತಮ್ಮ ಸ್ವರೂಪದ ಅಜ್ಞಾನವನ್ನು ನಾಶಮಾಡಿಕೊಳ್ಳುವ ನಿಜವಾದ ಮಾಹಿತಿಯನ್ನು ಒದಗಿಸುವರು. ("ಶಾಸ್ತ್ರಂ ಜ್ಞಾಪಕಂ ನ ತು ಕಾರಕಂ"). ಆದರೆ ಆ ಮಾಹಿತಿಯನ್ನು ಉಪಯೋಗ ಮಾಡಿಕೊಳ್ಳುವವರು ನಾವೇ. ಅಂದರೆ ನಮ್ಮಲ್ಲಿ ವಿವೇಕವು ಉದಯವಾಗಿ, ಅದರ ಮೂಲಕ ಸ್ವರೂಪದ ಅಜ್ಞಾನವನ್ನು ಕಳೆದುಕೊಳ್ಳಲು ಸಾಧ್ಯವಾಗುವದು. ಇದರರ್ಥ ನಮ್ಮ ಅರಿವೇ ನಮ್ಮ ಗುರುವಾಯಿತು, ಆದ್ದರಿಂದ ತನ್ನ ಅರಿವೇ ತನ್ನ ಗುರು.

ಪೂಜ್ಯ ಗುರುದೇವರು ಸ್ವರೂಪ ಜ್ಞಾನಿಗಳಾಗಿದ್ದರು. ಅವರು ಜೀವಿಗಳಿಗೆ ಸುಖವನ್ನು ಹೊಂದುವ ನಿವ್ವಳ ಮಾಹಿತಿಯನ್ನು ತಿಳಿಸಿದರು. ಅದೆಂದರೆ ನೀತಿಯಿಂದ ನಡೆದುಕೊಳ್ಳುವದು, ಮನಸ್ಸಿನಲ್ಲಿಯ ವಿಷಯ ವ್ಯಾಮೋಹವನ್ನು ತೆಗೆಯುವದು, ಆತ್ಮಧ್ಯಾನದ ಮುಖಾಂತರ ತುರ್ಯಸ್ಥಿತಿಯನ್ನು ಹೊಂದುವದು. ಅವರು ಜಡ ಪೂಜೆಯನ್ನು ಅಲ್ಲಗಳೆದರು. ಜಡ ಪೂಜೆಯೆಂದರೆ ಮೂರ್ತಿಪೂಜೆ, ಲಿಂಗಪೂಜೆ, ಗಿಡಮರಗಳ (ತುಳಸಿ, ಪತ್ರಿ, ಬನ್ನಿ, ಆಲದ) ಪೂಜೆ, ಕಲ್ಪಿತ ದೇವಿ ಪೂಜೆ, ಗದ್ದಿಗೆಯ ಪೂಜೆ (ಅಭಿಷೇಕ). ಅವರು ಶುಷ್ಕ ಜಪವನ್ನು ಅಲ್ಲಗಳೆದರು. ಶುಷ್ಕ ಜಪವೆಂದರೆ ಯಾವದಾದರೂ ಒಂದು ಮಂತ್ರವನ್ನು ಬಾಯಿಂದ ಅನ್ನುವದು ಅಥವಾ ಮನಸ್ಸಿನಿಂದ ನೆನಪಿಸುವದು. ಅವರು ಜಪವೆಂದರೆ ಅದರ ಅರ್ಥದ ಭಾವನೆಯೆಂದು ತಿಳಿಸಿ, ಆ ಮಂತ್ರದ ಅರ್ಥಾನುಸಂಧಾನ ವೃತ್ತಿಯೆಂದರೆ, (ಶಿವಾಯ ನಮಃ, ನಾರಾಯಣಾಯ ನಮಃ) 'ಶಿವ' ಎಂದರೆ ಸುಖ, 'ನಾರಾಯಣ' ಎಂದರೆ ನರನ ಪರಮ ಧ್ಯೇಯ ಅಂದರೆ ಸುಖ. ಮನಸ್ಸಿನಲ್ಲಿ ಸುಖದ ಭಾವವೃತ್ತಿಯನ್ನು ಅಭ್ಯಸಿಸಿ, ಅದರಲ್ಲಿ ನೆಲೆಯಾಗಿ ನಿಲ್ಲುವದು.

ಪ್ರಶ್ನೆ : ಮನಸ್ಸು ಹೇಗೆ ನಿಗ್ರಹವಾಗುವದು?

ಉತ್ತರ : ಮನಸ್ಸು ಈಗ ವಿಷಯಗಳ ಕಡೆಗೆ ಹರಿಯುತ್ತಿರುವದು. ಮನಸ್ಸು ವಿಷಯಗಳ ಕಡೆಗೆ ಏಕೆ ಹರಿಯುತ್ತಿರುವದು ಎಂದರೆ ಮನಸ್ಸು ವಿಷಯಗಳಲ್ಲಿ ಸುಖವಿದೆ ಎಂದು ಗಟ್ಟಿಯಾಗಿ ತಿಳಿದುಕೊಂಡಿರುವದು. ಮನಸ್ಸು ವಿಷಯಭೋಗವೇ ಸುಖವೆಂದು ಹೇಗೆ ಗಟ್ಟಿಯಾಗಿ ತಿಳಿದುಕೊಂಡಿತು? ಬಾಲ್ಯಾವಸ್ಥೆಯಲ್ಲಿ ಯಾವ

ಚಟಗಳೂ ಇರಲಿಲ್ಲ. ಮೊದಲಿಗೆ ಆಯಾ ವಿಷಯ ವಸ್ತುಗಳ ಸಂಪರ್ಕವಾಯಿತು, ಏನೋ ಮಜಾ ಎನಿಸಿತು, ಮನಸ್ಸು ಅದನ್ನೇ ಸುಖವೆಂದು ತಿಳಿದುಕೊಂಡಿತು. ನಂತರ ಆಯಾ ವಿಷಯಗಳ ಚಟ ಮಾಡಿದಾಗ, ಪ್ರತಿಸಲ ಅವುಗಳ ಭೋಗವೇ ಸುಖ, ಎಂದು ಮೇಲಿಂದ ಮೇಲೆ ತಿಳಿದುಕೊಂಡು, ವಿಷಯಭೋಗವು ಸುಖ ಎಂಬುದನ್ನು ಗಟ್ಟಿ ಮಾಡಿಕೊಂಡಿತು. ವಿಷಯ ಸುಖ ಬುದ್ಧಿಯು ಹೋದಾಗ ಮಾತ್ರ ಮನಸ್ಸು ನಿಗ್ರಹವಾಗುವದು. ವಿಷಯ ಸುಖಬುದ್ಧಿಯು ಹೋಗಬೇಕಾದರೆ, ವಿಷಯಭೋಗವು ಸುಖದಾಯಕವೋ ಅಥವಾ ದುಃಖದಾಯಕವೋ ಎಂಬುದನ್ನು ವಿಚಾರಿಸಬೇಕು. ವಿಷಯಭೋಗವೆಂದರೆ ಶಾರೀರಿಕ ದಣಿವು, ಮಾನಸಿಕ ಬೇಸರ, ನರದ ತುರಿಕೆಯು ಮತ್ತು ರೋಗೋತ್ಪತ್ತಿಗೆ ಕಾರಣವು. ವಿಷಯಗಳನ್ನು ಗಳಿಸುವದು, ಜೋಪಾನ ಮಾಡುವದು, ಸಂರಕ್ಷಿಸುವದು ದುಃಖದಾಯಕವು. ವಿಷಯಭೋಗದಿಂದ ದೇಹವು ಜೀರ್ಣವಾಗಿ ಸಾಯುವದು, ವಿಷಯಗಳೂ ಜೀರ್ಣವಾಗಿ ನಾಶವಾಗುವವು, ವಿಷಯಗಳ ಆಶೆಯು ಮಾತ್ರ ಉಳಿಯುವದು. ಆಶೆಯಿಂದ ಮನಸ್ಸಿಗೆ ದುಃಖವಾಗುವದು. ವಿಷಯ ಭೋಗಗಳಲ್ಲಿಯೇ ತೊಡಗಿ ಮಾನವ ಜನ್ಮವು ವ್ಯರ್ಥವಾಗಿ ಕಳೆದು ಹೋಗುವದು. ವಿಷಯಾಸಕ್ತಿಯಿಂದ ಪಾಪಕೃತ್ಯವು ಜರುಗುವದು, ಅದರ ಫಲವನ್ನು ಈ ಲೋಕದಲ್ಲಿ ಶಿಕ್ಷೆಯ ರೂಪದಿಂದ ಅನುಭವಿಸಬೇಕಾಗುವದು. ಈಗ ಮಾಡಿದ ಪಾಪ ಕರ್ಮದ ಫಲವನ್ನು (ದುಃಖವನ್ನು) ಕರ್ಮ ನಿಯಮದ ಪ್ರಕಾರ ಮುಂದಿನ ಜನ್ಮಗಳಲ್ಲಿ ಉಣ್ಣಬೇಕಾಗುವದು. ಹೀಗೆ ವಿಚಾರ ಮಾಡಿದಾಗ ವಿಷಯಭೋಗವು ದುಃಖಮಯ ಎಂಬುದು ತಿಳಿಯುವದು. ವಿಷಯಭೋಗವು ನಡೆದಾಗಲೆಲ್ಲ ಅದು ಸುಖದಾಯಕವೋ ಅಥವಾ ದುಃಖದಾಯಕವೋ ಎಂದು ವಿಚಾರಮಾಡಿ, ಅದು ದುಃಖದಾಯಕವೆಂಬ ದೃಢವಾದ ತಿಳಿವಳಿಕೆಯು ಬರಬೇಕು. ವಿಷಯಭೋಗವು ನಡೆದಾಗ ಅದು ದುಃಖದಾಯಕ ಎಂಬ ತಿಳಿವಳಿಕೆಯು ಬರದಿದ್ದರೆ, ನಂತರ ವಿಶೇಷವಾಗಿ ವಿಚಾರಕ್ಕೆ ಕುಳಿತು, ವಿಷಯಭೋಗವು ದುಃಖದಾಯಕ ಎಂಬುದನ್ನು ಗಟ್ಟಿಮಾಡಿಕೊಳ್ಳಬೇಕು. ಹೀಗೆ ಸುಖ ದುಃಖದ ವಿಚಾರದಲ್ಲಿ ತೊಡಗಿದಂತೆ, ವಿಷಯ ವ್ಯಾಮೋಹವು ಕಡಿಮೆಯಾಗುತ್ತ ಹೋಗಿ, ಮನಸ್ಸು ನಿಗ್ರಹವಾಗುತ್ತ ಹೋಗುವದು. ಸುಖ ದುಃಖದ ನಿರಂತರ ವಿಚಾರದ ಅಭ್ಯಾಸದಲ್ಲಿ, ದೀರ್ಘಕಾಲದವರೆಗೆ ಅಥವಾ ಅನೇಕ ಜನ್ಮಗಳವರೆಗೆ ತೊಡಗಿದಾಗ ವಿಷಯ ವ್ಯಾಮೋಹವು ಪೂರ್ಣವಾಗಿ ಹೋಗಿ, ಮನಸ್ಸು ಪೂರ್ಣ ನಿಗ್ರಹವಾಗುವದು.

ಪ್ರಶ್ನೆ : ಸುಖವು ಯಾವಾಗ ಅನುಭವಕ್ಕೆ ಬರುವದು? ಅದು ವಿಷಯಗಳದೋ, ಆತ್ಮನದೋ?

ಉತ್ತರ :ಮನಸ್ಸಿನ ನಿಶ್ಚಲ ಸ್ಥಿತಿಯಲ್ಲಿ ಮಾತ್ರ ಸುಖವು ಅನುಭವಕ್ಕೆ ಬರುವದು. ಹೀಗೆ ಅನುಭವಕ್ಕೆ ಬಂದ ಸುಖವು ಆತ್ಮನದೇ ಇರುವದು. ಸಾಮಾನ್ಯವಾಗಿ ಮಾನವನು ಕೆಲವು ವಿಷಯಗಳು ಸುಖ ಕೊಡುವವು ಎಂದು ಕಲ್ಪನೆ ಮಾಡಿಕೊಂಡಿದ್ದಾನೆ, ಇವೇ ರಾಗದ ವಿಷಯಗಳು. ಈ ರಾಗದ ವಿಷಯಗಳಿಲ್ಲದಾಗ

ಮನಸ್ಸಿನಲ್ಲಿ ಆ ವಿಷಯಗಳ ಆಶೆಯು ಉತ್ಪನ್ನವಾಗಿ, ಮನಸ್ಸು ಚಂಚಲವಾಗಿ ದುಃಖವಾಗುವದು. ಬಯಸಿದ ವಿಷಯವಸ್ತುವು ಪ್ರಾಪ್ತವಾದ ಕೂಡಲೇ ಆ ವಿಷಯದ ಆಶೆಯು ಇಲ್ಲದಂತಾಗಿ ಮನಸ್ಸು ನಿಶ್ಚಲವಾಗಿ ಆನಂದದ ಅನುಭವವಾಗುವದು. ಮನಸ್ಸು ನಿಶ್ಚಲವಾದಾಗ, ಅಂತಃಕರಣದ ಅಂತರ್ಮುಖ ವೃತ್ತಿಯಾಗಿ ಆತ್ಮನ (ಸ್ವರೂಪ) ಆನಂದವೇ ಪ್ರತಿಫಲಿಸಿ ಅನುಭವಕ್ಕೆ ಬರುವದು. ನಂತರ ವಿಷಯದ ಭೋಗವು ನಡೆದು ಅದು ಬೇಸರವಾಗುವದು, ಮನಸ್ಸು ಮತ್ತೆ ಬೇರೆ ವಿಷಯಗಳ ಕಡೆಗೆ ಹರಿಯುವದು. ಒಮ್ಮೊಮ್ಮೆ ರಾಗದ ವಿಷಯ ಪ್ರಾಪ್ತವಾದರೂ, ಯಾರಾದರೂ ಸಂಬಂಧಿಕರು ಮರಣವಾದ ಸುದ್ದಿಯನ್ನು ಕೇಳಿದಾಗ, ಮನಸ್ಸು ಚಂಚಲವಾಗಿ ದುಃಖವಾಗುವದು, ವಿಷಯವಸ್ತು ಅಲ್ಲಿಯೇ ಇರುವದು. ಆದರೆ ಗಾಢವಾದ ನಿದ್ರೆಯಲ್ಲಿ ಯಾವದೇ ವಿಷಯಗಳಿಲ್ಲ, ಅವುಗಳ ಆಸೆಯೂ ಇಲ್ಲ, ಆಗ ಮನಸ್ಸು ನಿಶ್ಚಲವಾಗಿ ಆನಂದವು ಅನುಭವಕ್ಕೆ ಬರುವದು. ಹೀಗೆ ಮನಸ್ಸು ನಿಶ್ಚಲವಾದಾಗ ಅಂತಃಕರಣದ ಅಂತರ್ಮುಖ ವೃತ್ತಿಯಾಗಿ, ಆತ್ಮನ (ಸ್ವರೂಪ) ಆನಂದವೇ ಪ್ರತಿಫಲಿಸಿ ಅನುಭವಕ್ಕೆ ಬರುವದು. ಆದ್ದರಿಂದ ಸುಖವು ವಿಷಯಗಳ ಇರುವಿಕೆಯನ್ನಾಗಲಿ ಅಥವಾ ಇಲ್ಲದಿರುವಿಕೆಯನ್ನಾಗಲಿ ಅವಲಂಬಿಸಿಲ್ಲ. ಮನಸ್ಸು ನಿಶ್ಚಲವಾಗಿ ಅಂತಃಕರಣದ ಅಂತರ್ಮುಖ ವೃತ್ತಿಯಾದಾಗ ಮಾತ್ರ ಆನಂದವು ಅನುಭವಕ್ಕೆ ಬರುವದು. ಆದ್ದರಿಂದ ಯಾವುದೇ ಉಪಾಧಿಯ ಮುಖಾಂತರ ಆನಂದಾನುಭವವಾದರೂ ಅದು ಆತ್ಮನ (ಸ್ವರೂಪದ) ಆನಂದವೇ ಎಂಬುದು ನಿಶ್ಚಿತವು.

ಪ್ರಶ್ನೆ : ಸ್ವರೂಪ ಸಾಧನೆಯ ಅಭ್ಯಾಸದಲ್ಲಿ ತೊಡಗಬೇಕಾದರೆ ನಾವು ಎಂಥ ಜೀವನವನ್ನು ನಡೆಸಬೇಕು?

ಉತ್ತರ : ಸ್ವರೂಪ ಸಾಧನೆಯ ಅಭ್ಯಾಸದಲ್ಲಿ ತೊಡಗಬೇಕಾದರೆ ನಾವು ಅತಿ ಸರಳವಾದ ಸಾದಾ ಜೀವನವನ್ನು ನಡೆಯಿಸಬೇಕು. ಅತಿ ಸಾದಾ ಸರಳ ಜೀವನ ಮತ್ತು ಉದಾತ್ತ ವಿಚಾರ, ಇದು ಭಾರತೀಯರ ಆಸ್ತಿಯು. 'ಅಂಬಲಿ ಕಂಬಳಿ ರಾಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ' ಎಂದರೆ ಹಸಿವೆಯನ್ನು ಹಿಂಗಿಸುವದಕ್ಕೋಸ್ಕರ ಮಾತ್ರ ಶರೀರಕ್ಕೆ ಆರೋಗ್ಯವಾಗುವಂಥ ಆಹಾರವನ್ನು ಮಿತಿಯಾದ ರೀತಿಯಲ್ಲಿ ತೆಗೆದುಕೊಳ್ಳುವದು, ರುಚಿಗಾಗಿ ಮಿತಿಮೀರಿ ಅನಾರೋಗ್ಯಕರವಾದ ಆಹಾರವನ್ನು ತೆಗೆದುಕೊಂಡು ಆರೋಗ್ಯವನ್ನು ಕೆಡಿಸಿಕೊಳ್ಳುವದಲ್ಲ. ಅದರಂತೆ ಚಳಿ, ಮಳೆ, ಗಾಳಿ, ಬಿಸಿಲುಗಳಿಂದ ಶರೀರವನ್ನು ರಕ್ಷಿಸುವದಕ್ಕಾಗಿ ಆರೋಗ್ಯಕರವಾದ ಬಿಳಿಯ ಹತ್ತಿಯ ಬಟ್ಟೆಯನ್ನು ಧರಿಸುವದು. ಆದರೆ ಇದರ ಬದಲಾಗಿ ಭಿನ್ನ ಭಿನ್ನ ಬಣ್ಣದ ಟೆರಿಕಾಟ್, ನೈಲಾನ್, ಪಾಲಿಸ್ಟರ್ ಬಟ್ಟೆಗಳನ್ನು ಧರಿಸಿ ಅನೇಕ ಚರ್ಮರೋಗಗಳಿಗೆ ಗುರಿಯಾಗುವದಲ್ಲ. ರುಚಿಕರವಾದ ಪದಾರ್ಥಗಳನ್ನು ಮತ್ತು ಚೆಂದವಾದ ಬಟ್ಟೆಗಳನ್ನು ಗಳಿಸುವದಕ್ಕಾಗಿ ನಮ್ಮ ಜೀವನದ ಕಾಲವೆಲ್ಲವೂ ವ್ಯರ್ಥವಾಗಿ ಕಳೆದು ಹೋಗುವದು, ಅಧ್ಯಾತ್ಮ ವಿಚಾರದಲ್ಲಿ ತೊಡಗುವದಕ್ಕಾಗಿ ವೇಳೆಯೇ ಸಿಗುವದಿಲ್ಲ. ಇದಲ್ಲದೆ ಚೈನಿಯ ಜೀವನದಿಂದ ಶರೀರದಲ್ಲಿ ರೋಗವು ಉದ್ಭವಿಸಿ, ಸ್ವರೂಪದ ವಿಚಾರವನ್ನು

ಮಾಡಗೊಡುವದಿಲ್ಲ. ಆದ್ದರಿಂದ ಹೊಟ್ಟೆಗೆ ಬಾಣ, ನೆತ್ತಿಗೆ ಜ್ಞಾನ ಎಂಬುದು ಸುಪ್ರಸಿದ್ಧವಿದೆ. ಸಾದಾ ಜೀವನವನ್ನು ನಡೆಯಿಸುವದರಿಂದ ಅಧ್ಯಾತ್ಮಿಕ ಸಾಧನೆಯಲ್ಲಿ ಹೆಚ್ಚು ಕಾಲ ತೊಡಗಲು ಬರುವದು.

ಪೂಜ್ಯರು ಅತಿ ಸಾದಾ ಸರಳ ಜೀವನವನ್ನು ನಡೆಯಿಸುತ್ತಿದ್ದರು. ಅವರು ಹತ್ತಿಯ ಬಟ್ಟೆಯ ಬಿಳಿಯ ಧೋತರ ಮತ್ತು ಅಂಗಿಯನ್ನು ಧರಿಸುತ್ತಿದ್ದರು. ತಲೆಗೆ ಖಾದಿ ವಸ್ತ್ರವನ್ನು ಸುತ್ತುತ್ತಿದ್ದರು. ಅವರ ಆಹಾರವೆಂದರೆ ಜೋಳದ ರೊಟ್ಟಿ, ತೊಪ್ಪಲು ಪಲ್ಲೆ, ಕಾಯಿಪಲ್ಲೆ, ಗೋದಿಯ ಪಾಯಸ, ತುಪ್ಪ, ಹಣ್ಣು, ಹಾಲು. ಅವರದು ದಿನಕ್ಕೆ ಒಂದೇ ಊಟ. ಅದೂ ಮಧ್ಯಾಹ್ನ ಒಂದು ಗಂಟೆಗೆ. ಅವರು ಅರ್ಧ ಹೊಟ್ಟೆ ಮಾತ್ರ ಊಟ ಮಾಡುತ್ತಿದ್ದರು. ಸಾಯಂಕಾಲ ಸ್ವಲ್ಪ ಹಣ್ಣು ಹಾಲು ತೆಗೆದುಕೊಳ್ಳುತ್ತಿದ್ದರು. ಅವರದು ಅತಿ ಸಪ್ಪಾದ ಆಹಾರವಾಗಿತ್ತು. ಹುರಿದ ಕರೆದ ಪದಾರ್ಥಗಳನ್ನು, ಉಪ್ಪಿನಕಾಯಿಯನ್ನು ತಿನ್ನುತ್ತಿರಲಿಲ್ಲ. ಎಣ್ಣೆಯನ್ನು ಉಪಯೋಗಿಸುತ್ತಲೇ ಇರಲಿಲ್ಲ, ಒಗ್ಗರಣೆಗೆ ಜವಾರಿ ಆಕಳ ತುಪ್ಪವನ್ನು ಮಾತ್ರ ಉಪಯೋಗಿಸುತ್ತಿದ್ದರು, ಜೋಳದ ರೊಟ್ಟಿಯನ್ನು ಮಾಡಲು ಬೀಸುವ ಕಲ್ಲಿನಲ್ಲಿ ಬೀಸಿದ ಹಿಟ್ಟನ್ನು ಮಾತ್ರ ಉಪಯೋಗಿಸುತ್ತಿದ್ದರು. ಶರೀರವು ಆರೋಗ್ಯದಿಂದ ಇರಲು 'ಒಂದು ಮುಟ್ಟಿಗೆ ಹಿಟ್ಟು, ಒಂದು ಉಪ್ಪಿನ ಹರಳು ಸಾಕು' ಎಂದು ಅವರು ಬೋಧಿಸುತ್ತಿದ್ದರು.

ಪ್ರಶ್ನೆ : ಅಧ್ಯಾತ್ಮ ಸಾಧನೆಯನ್ನು ಹೇಗೆ ಮಾಡಬೇಕು?

ಉತ್ತರ : ಬ್ರಹ್ಮನಿಷ್ಠ ಗುರುಗಳು ಹೇಳಿದ ಸುಖದ ಯುಕ್ತಿಗಳನ್ನು ಅನುಭವಕ್ಕೆ ಹೊಂದಿಕೆಯಾಗುವಂತೆ ಎಂದೂ ಮರೆಯದಂತೆ ಚೆನ್ನಾಗಿ ಕೇಳಬೇಕು, ನಂತರ ಅದನ್ನು ಸಾಧಕ ಬಾಧಕ ಯುಕ್ತಿಗಳಿಂದ ದೃಢ ಮಾಡುತ್ತ ಹೋಗಬೇಕು. ಹೀಗೆ ದೀರ್ಘ ಕಾಲದವರೆಗೆ ಅಭ್ಯಾಸದಲ್ಲಿ ತೊಡಗಿದರೆ ಸುಖದ ಅನುಭವವೇ ನಮ್ಮದಾಗುವದು. ನಾವು ಸುಖದಲ್ಲಿ ನೆಲೆಯಾಗಿ ನಿಲ್ಲುವೆವು.

ಪ್ರಶ್ನೆ : ರಂಜನಾತ್ಮಕ ಕ್ರಿಯೆಗಳು ಅಧ್ಯಾತ್ಮ ಸಾಧನೆಗೆ ವಿಘ್ನವಾಗುವದಿಲ್ಲವೇ?

ಉತ್ತರ : ರಂಜನಾತ್ಮಕ ಕ್ರಿಯೆಗಳು ನಿಶ್ಚಿತವಾಗಿ ಅಧ್ಯಾತ್ಮ ಸಾಧನೆಗೆ ವಿಘ್ನವಾಗುವವು. ಸಾಮಾನ್ಯವಾಗಿ ರಂಜನಾತ್ಮಕ ಕ್ರಿಯೆಗಳೆಂದರೆ ಚೆಂದದ ವಸ್ತುಗಳನ್ನು ನೋಡುವದು, ರುಚಿಕರವಾದ ಪದಾರ್ಥಗಳನ್ನು ತಿನ್ನುವದು, ಹಾಡುವದು, ಕುಣಿಯುವದು, ಬಾರಿಸುವದು ಮುಂತಾದವುಗಳು. ನಾವು ಇವುಗಳನ್ನು ಹಬ್ಬ ಹರಿದಿನಗಳಂದು ಮಾಡುವೆವು. ಜಾತ್ರೆಯ ದಿನ ಸ್ತ್ರೀ ಪುರುಷರು ಹೊಸ ಹೊಸ ಚೆಂದದ ಬಟ್ಟೆಗಳನ್ನು ಧರಿಸಿ, ಅಲಂಕಾರಿತರಾಗಿ ಜಾತ್ರೆಗೆ ಹೋಗಿ ಪರಸ್ಪರ ಮೋಹಿತರಾಗುವರು. ನಂತರ ವ್ಯಾಮೋಹದಿಂದ ವ್ಯಭಿಚಾರ, ಕೊಲೆ, ಸುಲಿಗೆ ಮುಂತಾದ ಪಾಪ ಕೃತ್ಯಗಳನ್ನು ಎಸಗುವರು. ಅದರಂತೆ ಭಜಿ, ಕಡಬು, ವಡಿ ಮುಂತಾದ ಅನಾರೋಗ್ಯಕರವಾದ ಪದಾರ್ಥಗಳನ್ನು ತಿಂದು, ನಂತರ ಈ ಚಟಗಳನ್ನು ದೃಢಗೊಳಿಸಿ, ರೋಗಕ್ಕೆ ತುತ್ತಾಗುವರು. ಅದರಂತೆ ಸಿನೇಮಾ, ನಾಟಕ, ಬಯಲಾಟಗಳನ್ನು ನೋಡಿ,

ಅಲ್ಲಿಯ ಹಾಗೆಯೇ ರಂಜನಾತ್ಮಕ ಜೀವನವನ್ನು ನಡೆಯಿಸಲು ಪ್ರಯತ್ನಿಸುವರು. ಹೀಗೆ ರಂಜನಾತ್ಮಕ ಕ್ರಿಯೆಗಳಲ್ಲಿ ತೊಡಗಿದರೆ, ವಿಷಯ ವ್ಯಾಮೋಹವು ಹೆಚ್ಚಾಗಿ ನೀತಿಯುತ ಜೀವನವನ್ನು ನಡೆಯಿಸುವದು ಸಾಧ್ಯವಾಗುವದಿಲ್ಲ. ವಿಷಯಗಳಿಗಾಗಿ ಹೊಡೆದಾಟ, ಬಡಿದಾಟ, ಕೊಲೆ, ಸುಲಿಗೆಗಳು ನಡೆಯುವವು. ಹೀಗೆ ರಂಜನಾತ್ಮಕ ವ್ಯವಹಾರಗಳಲ್ಲಿ ತೊಡಗಿದರೆ ಸಮಾಜವು ಅಲ್ಲೋಲ ಕಲ್ಲೋಲವಾಗುವದು. ಹೀಗೆ ಜೀವಿಗಳ ಚರಿತ್ರೆಯ ವ್ಯವಹಾರವೇ ಸರಳವಾಗಿ ನಡೆಯುವದಿಲ್ಲ, ಇದರಿಂದ ಮನಸ್ಸು ಅಶಾಂತವಾಗುವದು. ಮನಸ್ಸು ಶಾಂತ ಇರದಿದ್ದರೆ ಅಧ್ಯಾತ್ಮ ಸಾಧನೆಯಲ್ಲಿ ತೊಡಗುವದಂತೂ ದೂರವೇ ಉಳಿಯಿತು.

ಪೂಜ್ಯರು ಜೀವಿಗಳಿಗೆ ಎಳ್ಳಷ್ಟೂ ರಂಜನೆಯ ವ್ಯವಹಾರದಲ್ಲಿ ತೊಡಗಬಾರದೆಂದು ಎಚ್ಚರಿಸುತ್ತಿದ್ದರು. ಜಾತ್ರೆ, ಪಲ್ಲಕ್ಕಿ ಉತ್ಸವ ಮುಂತಾದವುಗಳನ್ನು ಆಚರಿಸಿದರೆ ಆ ಸ್ಥಾನವು ವ್ಯಭಿಚಾರಿಗಳ ಬೀಡಾಗುವದು ಎಂದು ತಿಳಿಸುತ್ತಿದ್ದರು. ದಿನ ನಿತ್ಯದ ಅಧ್ಯಾತ್ಮ ಪ್ರವಚನ ಮುಗಿದ ನಂತರ ಮಂಗಳಾರತಿಯನ್ನು ಅನ್ನಲು ಕೂಡ ಆಸ್ಪದ ಕೊಡುತ್ತಿರಲಿಲ್ಲ. ಯಾರಾದರೂ ರಾಗ ತಾಳದಿಂದ ಮಂಗಳಾರತಿಯನ್ನು ಅನ್ನಲು ಪ್ರಯತ್ನಿಸಿದರೆ **"ನಿಮಗೇನು ಕತ್ತೆ ಬೆನ್ನು ಹತ್ತಿರುವದೇನು?"** ಅನ್ನುತ್ತಿದ್ದರು.

ಪ್ರಶ್ನೆ : ವಿಷಯ ವ್ಯಾಮೋಹವನ್ನು ಕಳೆದುಕೊಂಡರೆ ಮತ್ತೆ ಜನ್ಮ ಬರುವದು ತಪ್ಪುವದೇ?

ಉತ್ತರ : ಕೇವಲ ವಿಷಯ ವ್ಯಾಮೋಹವನ್ನು ಕಳೆದುಕೊಂಡರೆ ಪುನರ್ಜನ್ಮ ಬರುವದು ತಪ್ಪುವದಿಲ್ಲ. ಏಕೆಂದರೆ ದೇಹಭಾವ ಸುಖ ಎನ್ನುವವನು ದೇಹವನ್ನು ಪಡೆಯುವನು. **'ಕರ್ತೃತ್ವ', 'ಭೋಕ್ತೃತ್ವ'** (ನಾನು ಮಾಡುವವ, ನಾನು ಉಣ್ಣುವವ ಎಂಬ ಭಾವ) ಭಾವವೇ ಪುನರ್ಜನ್ಮವನ್ನು ಹೊಂದುವದಕ್ಕೆ ಕಾರಣ, ಈ ಭಾವವು ಎಲ್ಲಿಯವರೆಗೆ ಇರುವದೋ ಅಲ್ಲಿಯವರೆಗೆ ಪುನರ್ಜನ್ಮವು ತಪ್ಪಿದ್ದಲ್ಲ, ಈ ಕರ್ತೃತ್ವ ಭೋಕ್ತೃತ್ವ ಭಾವನೆಯು ಸ್ವರೂಪದ ಅಜ್ಞಾನದಿಂದಲೇ ಬಂದದ್ದಾಗಿದೆ. ತನ್ನ ನಿಜಸ್ವರೂಪದ ಜ್ಞಾನವಾದಾಗ ಮಾತ್ರ ಕರ್ತೃತ್ವ ಭೋಕ್ತೃತ್ವ ಭಾವನೆಯು ನಾಶವಾಗುವದು, ಆಗ ಮಾತ್ರ ಪುನರ್ಜನ್ಮವಿಲ್ಲ. ಆದ್ದರಿಂದ ಆತ್ಮಜ್ಞಾನದಿಂದ ಪುನರ್ಜನ್ಮವು ತಪ್ಪಿ, ಶಾಶ್ವತ ಶಾಂತಿಯು ಲಭಿಸುವದು. ತನ್ನ ನಿಜಸ್ವರೂಪದ ಜ್ಞಾನವೆಂದರೆ ತುರ್ಯಸ್ಥಿತಿ (ಜ್ಞಾನ ಸಮಾಧಿ). ಈ ಸ್ಥಿತಿಯಲ್ಲಿ ಮರವೆಯ ಗಾಢನಿದ್ರೆಯಿಲ್ಲ, ವಾಸನಾರೂಪಿ ಜಾಗ್ರ ಕನಸುಗಳಿಲ್ಲ, ತನ್ನ ನಿಜದ ಎಚ್ಚರವು ಮಾತ್ರ ಇರುವದು. ತುರ್ಯವು ಗಾಢವಾದಾಗ ಆ ಶರೀರವನ್ನು ಕತ್ತರಿಸಿ ಹಾಕಿದರೂ, ಸುಟ್ಟು ಹಾಕಿದರೂ ಅದರ ಬಾಧೆಯು ಅವನಿಗೆ ಇಲ್ಲ.

ಪೂಜ್ಯರು ಗಾಢ ತುರ್ಯವನ್ನು ಹೊಂದಿದ್ದನ್ನು ನಾವು ಐದಾರು ಸಲ ನೋಡಿದ್ದಾಗಿದೆ. ಒಮ್ಮೆ ಪೂಜ್ಯರು ಗಾಢ ತುರ್ಯಾವಸ್ಥೆಯನ್ನು ಹೊಂದಿದಾಗ ಅವರು ದೇಹತ್ಯಾಗವನ್ನೇ ಮಾಡಿದರು ಎಂದು ಕೆಲವರು ಅಳುತ್ತಿದ್ದರು. ಒಮ್ಮೆ ಪ್ರವಚನ ಪ್ರಾರಂಭವಾದ ಕೂಡಲೇ ಪೂಜ್ಯರು ಗಾಢ ತುರ್ಯಾವಸ್ಥೆಯನ್ನು ಹೊಂದಿದರು. ಅದು ಎರಡು ತಾಸುಗಳ ಕಾಲ ಇತ್ತು. ಆ ದಿನ ಪ್ರವಚನವೇ ನಡೆಯಲಿಲ್ಲ.

ಪ್ರಶ್ನೆ : ಆಸನ, ಪ್ರಾಣಾಯಾಮಗಳ ಪ್ರಯೋಜನ ಏನು?

ಉತ್ತರ : ಆಸನಗಳನ್ನು ಹಾಕುವದರಿಂದ ಶರೀರವು ಆರೋಗ್ಯದಿಂದ ಇರುವದು. ಅದರಂತೆ ಪ್ರಾಣಾಯಾಮದಿಂದ ನಾಡಿ ಶುದ್ಧಿಯಾಗಿ ಶರೀರವು ಆರೋಗ್ಯದಿಂದಿರಲು ಸಹಾಯಕವಾಗುವದು. ಆಸನ ಪ್ರಾಣಾಯಾಮಗಳ ಅಭ್ಯಾಸದಿಂದ ಅನೇಕ ರೋಗಗಳು ಗುಣವಾಗುವವು. ಆದರೆ ಅವುಗಳ ಅಭ್ಯಾಸವು ವಿಷಯಗಳ ಮೇಲಿನ ಮೋಹವನ್ನು ಕಳೆದುಕೊಳ್ಳುವದಕ್ಕಾಗಲಿ ಅಥವಾ ಸ್ವರೂಪ ಸಾಕ್ಷಾತ್ಕಾರವನ್ನು ಹೊಂದುವದಕ್ಕಾಗಲಿ ಸಹಾಯಕವಾಗುವದಿಲ್ಲ.

ಪ್ರಶ್ನೆ : ಸಾಮಾನ್ಯವಾಗಿ ಯೋಗವೆಂದರೆ ಚಿತ್ತ ನಿರೋಧವೆಂದು ಹೇಳುತ್ತಾರೆ. ತಮ್ಮ ಅಭಿಪ್ರಾಯವೇನು?

ಉತ್ತರ : ಯೋಗವೆಂದರೆ ಕೂಡುವಿಕೆ. ಜೀವನು ತನ್ನ ನಿಜಸ್ವರೂಪದೊಡನೆ ಕೂಡುವಿಕೆ. ಚಿತ್ತವೃತ್ತಿ ನಿರೋಧದ ಮುಖಾಂತರ ಜೀವನು ತನ್ನ ನಿಜಸ್ವರೂಪದೊಡನೆ ಒಂದಾಗಲಾರನು. ಏಕೆಂದರೆ ಪ್ರಾಣಾಯಾಮಾದಿ ಕ್ರಿಯೆಗಳಿಂದ ಪ್ರಾಣ ನಿರೋಧವಾಗುವದು, ಆಗ ಮನಸ್ಸು ತಾತ್ಪೂರ್ತಿಕವಾಗಿ ತಡೆ ಹಿಡಿಯಲ್ಪಟ್ಟಿರುವದು, ಆದರೆ ಅದರಲ್ಲಿರುವ ವಿಷಯ ವಾಸನೆಗಳು ನಾಶವಾಗಿರುವದಿಲ್ಲ. ಪ್ರಾಣ ನಿರೋಧವು ಮುಗಿದಾಗ ಮತ್ತೆ ಮನಸ್ಸು ವಿಷಯ ವಾಸನೆಗಳಿಂದ ಚಂಚಲವಾಗಿ ದುಃಖವಾಗುವದು. ವಿಷಯ ವಾಸನೆಗಳು ನಾಶವಾಗದ ಹೊರತಾಗಿ ಜೀವನು ತನ್ನ ನಿಜ ಸ್ವರೂಪದ ಧ್ಯಾನದಲ್ಲಿ ತೊಡಗಿ, ಅದರೊಡನೆ ಯೋಗವನ್ನು ಹೊಂದಲಾರನು. ಆದ್ದರಿಂದ ಮೊದಲಿಗೆ ವಿಷಯ ವಾಸನೆಗಳು ನಾಶವಾಗಬೇಕು. ಆದ್ದರಿಂದ ಚಿತ್ತವೃತ್ತಿ ನಿರೋಧವು ಯೋಗವಲ್ಲ, ವಿಷಯ ವಾಸನಾ ನಾಶವೇ ಯೋಗ ಎನ್ನಿಸಿಕೊಳ್ಳುವದು.

ಪ್ರಶ್ನೆ : ಸಮಾಧಿ ಎಂದರೇನು? ಜಡ ಸಮಾಧಿಗೂ ಮತ್ತು ಜ್ಞಾನ ಸಮಾಧಿಗೂ ಇರುವ ಭೇದವೇನು? ಯಾವ ಸಮಾಧಿಯು ಮುಕ್ತಿಗೆ ಕಾರಣೀಭೂತವಾಗಿರುವದು?

ಉತ್ತರ : ಬುದ್ಧಿಯು ಸಮವಾಗುವದೇ ಸಮಾಧಿಯು. ಬುದ್ಧಿಯು ಸಮವಾದ ಇರುವಿನ ಕಡೆಗೆ ನಡೆದರೆ ಸಮ ಇರುವದು. ಯಾವಾಗ ಬುದ್ಧಿಯು (ಸಚ್ಚಿದಾನಂದ) ಆತ್ಮಾಕಾರ ವೃತ್ತಿಯನ್ನು ಹೊಂದುವದೋ ಅದೇ ಜ್ಞಾನ ಸಮಾಧಿಯು, ತುರ್ಯ ಸ್ಥಿತಿಯು; ಆಗ ಕಳಸವು ಬಿದ್ದಿರುವದಿಲ್ಲ. ಜಡ ಸಮಾಧಿಯನ್ನು ಹೊಂದುವದರಿಂದ ವಿಷಯಗಳ ಮೇಲಿನ ವ್ಯಾಮೋಹವು ಹೋಗುವದಿಲ್ಲ, ಸ್ವರೂಪದ ಜ್ಞಾನವು ಆಗುವದಿಲ್ಲ. ಜಡ ಸಮಾಧಿಯು ಇರುವವರೆಗೆ ವಾಯು ನಿರೋಧದ ಮೂಲಕ ಮನಸ್ಸು ತಾತ್ಪೂರ್ತಿಕವಾಗಿ ನಿಂತಿರುವದು, ಜಡ ಸಮಾಧಿಯು ಮುಗಿದ ಕೂಡಲೆ ಮತ್ತೆ ಮನಸ್ಸು ವಿಷಯ ವ್ಯಾಮೋಹದಿಂದ ಚಂಚಲವಾಗಿ ದುಃಖವಾಗುವದು. ಆದ್ದರಿಂದ ಜಡ ಸಮಾಧಿಯಿಂದ ಶಾಶ್ವತ ಶಾಂತಿ ಅಥವಾ ಸ್ವರೂಪ ಸಾಕ್ಷಾತ್ಕಾರವು ಆಗುವದಿಲ್ಲ. ಆದರೆ ಜ್ಞಾನ ಸಮಾಧಿಯನ್ನು ಹೊಂದಬೇಕಾದರೆ ಮೊದಲಿಗೆ ವಿವೇಕದಿಂದ ಇಹಲೋಕ ಪರಲೋಕ ಭೋಗದ ಆಸಕ್ತಿಯನ್ನು ಕಳೆದುಕೊಂಡು,

ನಂತರ ಸ್ವರೂಪಾಕಾರವೃತ್ತಿ (ಸಚ್ಚಿದಾನಂದಾಕಾರವೃತ್ತಿ) ಯನ್ನು ಸಾಧಿಸುತ್ತ, ಜ್ಞಾನ ಸಮಾಧಿಯನ್ನು ಹೊಂದಬೇಕಾಗುವದು. ತುರ್ಯಸ್ಥಿತಿಗೆ ಏರುವಾಗ ಅಥವಾ ಅದರಿಂದ ಇಳಿಯುವಾಗ ಪರರು ಅವನನ್ನು ಎಚ್ಚರಿಸಬಹುದು, ಅಥವಾ ತಾನೇ ಎಚ್ಚರವಾಗಬಹುದು. ಆದರೆ ತುರ್ಯವು ಗಾಢವಾದಾಗ ಅವನ ಶರೀರವನ್ನು ಕತ್ತರಿಸಿ ಹಾಕಿದರೂ, ಸುಟ್ಟು ಹಾಕಿದರೂ ಅವನು ಎಚ್ಚರಗೊಳ್ಳುವದಿಲ್ಲ. ತುರ್ಯಸ್ಥಿತಿಯನ್ನು ಹೊಂದಿ ವ್ಯಾವಹಾರಿಕ ಎಚ್ಚರಿಕೆಗೆ ಬಂದವನು, ತನ್ನ ಪೂರ್ಣ ಶಾಂತಿಯ ಸ್ಥಿತಿಯಿಂದ ಬಾಧೆಯನ್ನು ಹೊಂದುವದಿಲ್ಲ. ಆದರೆ ಜಡ ಸಮಾಧಿಯಿಂದ ವ್ಯಾವಹಾರಿಕ ಎಚ್ಚರಿಕೆಗೆ ಬಂದವನು ಮೊದಲಿನಂತೆಯೇ ದುಃಖದಿಂದಲೇ ಬಳಲುತ್ತಿರುವನು.

ಪ್ರಶ್ನೆ : ಸಿದ್ಧಿಗಳಿಗೂ, ಆತ್ಮಜ್ಞಾನಕ್ಕೂ ಸಂಬಂಧವೇನು?

ಉತ್ತರ : ಸಿದ್ಧಿಗಳೆಂದರೆ ನಿಸರ್ಗದ ನಿಯಮಗಳನ್ನು ಮೀರಿ ನಡೆಯುವ ಘಟನೆಗಳು, ಇವು ವಿಷಯಗಳಿಗೇ ಸಂಬಂಧಿಸಿವೆ. ವಿಷಯಗಳಂತೂ ಸುಖವಲ್ಲ, ಆದ್ದರಿಂದ ವಿಷಯಗಳ ಸಿದ್ಧಿ ಸುಖವಲ್ಲ, ಅದು ದುಃಖದ ಸಿದ್ಧಿಯೇ. ಅನೇಕ ವ್ರತಗಳರೂಪಿ ಜಡ ತಪಸ್ಸಿನಿಂದ ಮತ್ತು ಹಟಯೋಗ ಸಮಾಧಿಯನ್ನು ಸಾಧಿಸುವದರ ಮೂಲಕ (ಕೇವಲ ಕುಂಭಕ) ಅನೇಕ ಸಿದ್ಧಿಗಳು ಪ್ರಾಪ್ತವಾಗುವವು. ಇವುಗಳನ್ನು ಸಾಧಿಸುವದರಿಂದ ದುಃಖಕ್ಕೆ ಮೂಲ ಕಾರಣವಾದ ವಿಷಯ ಸುಖಬುದ್ಧಿ ಮತ್ತು ದೇಹಾತ್ಮ ಬುದ್ಧಿಯು ಹೋಗಲಾರದು, ಆದ್ದರಿಂದ ಸಿದ್ಧಿಗಳ ಪ್ರಾಪ್ತಿಯಿಂದ ನಮಗೆ ಸುಖವಾಗುವದು ಸಾಧ್ಯವಿಲ್ಲ. ನಾವು ಸಿದ್ಧಿಗಳ ಕಡೆಗೆ ಲಕ್ಷ್ಯವನ್ನು ಕೊಟ್ಟರೆ ಆತ್ಮಜ್ಞಾನವನ್ನು ಸಾಧಿಸುವ (ಶಾಶ್ವತ ಸುಖವನ್ನು ಹೊಂದುವ) ಅಭ್ಯಾಸವು ನಡೆಯಲಾರದು. ಆದ್ದರಿಂದ ಸಿದ್ಧಿಗಳೆಂದರೆ ಕಃ ಪದಾರ್ಥಗಳು, ಹೀಗೆ ಸಿದ್ಧಿಗಳ ಫಲವು ದುಃಖವು. ಸಿದ್ಧಿಗಳನ್ನು ಉಪಯೋಗಿಸಿಕೊಂಡಂತೆ ಅವು ವ್ಯಯವಾಗಿ, ಮತ್ತೆ ಮತ್ತೆ ಪ್ರಯತ್ನ ಮಾಡಿ ಅವುಗಳನ್ನು ಪಡೆಯಬೇಕಾಗುವದು, ಆದ್ದರಿಂದ ಅವು ಅನಿತ್ಯ ಫಲವನ್ನು ಕೊಡುವಂತಹವುಗಳಾಗಿವೆ. ಯಾವನು ಸಿದ್ಧಿಗಳನ್ನು ಅಪೇಕ್ಷಿಸುವನೋ ಅವನು ವಿಷಯಗಳನ್ನು (ದುಃಖವನ್ನು) ಅವಲಂಬಿಸಿದಂತೆಯೇ ಸರಿ. ಸಿದ್ಧಿಗಳನ್ನು ಪಡೆಯಲು ಪ್ರಯತ್ನಿಸುವವನು ಆತ್ಮಜ್ಞಾನವನ್ನು ಹೊಂದುವದಕ್ಕಾಗಿ ಎಂದೂ ಅಧಿಕಾರಿ ಆಗಲಾರನು.

ಆತ್ಮಜ್ಞಾನದ ಸಾಧನೆಯೇ ಬೇರೆ ಇರುವದು. ಇದನ್ನು ಸಾಧಿಸಲು ಅಧಿಕಾರಿಯಾಗಬೇಕಾದರೆ, ಮೊದಲಿಗೆ ಇಹಲೋಕ ಪರಲೋಕದ ಭೋಗದ ಬಗ್ಗೆ ಸುಖ ದುಃಖ ವಿವೇಕದ ಮೂಲಕ ಪೂರ್ಣ ವೈರಾಗ್ಯವನ್ನು ಹೊಂದಬೇಕಾಗುವದು, ನಂತರ ಆತ್ಮಾನಾತ್ಮ ವಿಚಾರದ ಮೂಲಕ ಸಚ್ಚಿದಾನಂದ ಆತ್ಮನಲ್ಲಿ ನೆಲೆಯಾಗಿ ನಿಲ್ಲುವದರಿಂದ ಶಾಶ್ವತ ಸುಖವು (ಆತ್ಮಜ್ಞಾನ, ಮೋಕ್ಷ) ಪ್ರಾಪ್ತವಾಗುವದು.

ಪ್ರಶ್ನೆ : ಮನುಷ್ಯನಿಗೆ ಯಾವುದಕ್ಕೆ ಸ್ವಾತಂತ್ರ್ಯವುಂಟು?

ಉತ್ತರ : ಮನುಷ್ಯನಿಗೆ ತನ್ನ ನಿಜಸ್ವರೂಪವನ್ನು ನೆನಪಿಸಿಕೊಂಡು, ಅದನ್ನು ಅನುಭವಿಸುವ ಸ್ವಾತಂತ್ರ್ಯವಿದೆ, ಉಳಿದ ಯಾವುದಕ್ಕೂ ಅವನಿಗೆ ಸ್ವಾತಂತ್ರ್ಯವಿಲ್ಲ.

ಅನಾತ್ಮ ಸಮೂಹವನ್ನು (ವಿಷಯ ವಸ್ತುಗಳು, ಮಾನ ಮರ್ಯಾದೆ, ಅಧಿಕಾರ) ಗಳಿಸುವದೆಂದರೆ ಪರಾವಲಂಬನವೇ, ಪಾರತಂತ್ರ್ಯವೇ. ಆದ್ದರಿಂದ ತನ್ನ ನಿಜಸ್ವರೂಪದ ಅನುಸಂಧಾನವೇ ಸ್ವಾತಂತ್ರ್ಯ, ಅದೇ ಮಾನವನ ಜನ್ಮಸಿದ್ಧ ಹಕ್ಕು. ಮಾನವನ ನಿಜಸ್ವರೂಪವೇ ಅವನ ಸ್ವರಾಜ್ಯ. ಸಾಮಾನ್ಯವಾಗಿ ರಾಜ್ಯ, ದೇಶ, ಜಗತ್ತಿನ ಅಧಿಕಾರವೇ ಸ್ವರಾಜ್ಯವೆಂದು, ಅದಕ್ಕಾಗಿ ರಕ್ತದ ಕಾಲುವೆಗಳನ್ನು ಹರಿಸುತ್ತಾರೆ. ಆದರೆ ಅವರಿಗೆ ತಮ್ಮ ನಿಜವಾದ ಸ್ವರೂಪ ಸಾಮ್ರಾಜ್ಯವೇ ತಿಳಿಯದು. ಸ್ವರೂಪ ಸಾಮ್ರಾಜ್ಯವನ್ನು ಆಳಲು ಯಾರೊಡನೆಯೂ ಹೋರಾಡಬೇಕಾಗಿಲ್ಲ, ಅದೆಲ್ಲವನ್ನು ಬಿಟ್ಟು ಸ್ವರೂಪದೊಡನೆ ಒಂದಾಗುವದೇ ಕೆಲಸ.

ಪ್ರಶ್ನೆ ; ಸಂಧ್ಯಾ ಎಂದರೇನು? ಅದರ ಅನುಸಂಧಾನವನ್ನು ಹೇಗೆ ಮಾಡಬೇಕು?

ಉತ್ತರ : ಸಂಧ್ಯಾ ಎಂದರೆ ಕಲ್ಪನಾರಹಿತ, ಅರಿವುಸಹಿತ, ಆನಂದಾನುಭೂತಿಯ ನಿಶ್ಚಲ ಸ್ಥಿತಿ. ಕಲ್ಪನೆ ಎಂದರೆ ನೆನಪು. ಸಾಮಾನ್ಯವಾಗಿ ನಮ್ಮ ಮನಸ್ಸು ಅನೇಕ ವಿಷಯ ವಸ್ತುಗಳ ನೆನಪಿನಿಂದ ಕೂಡಿದೆ. ಈ ವಿಷಯ ವಸ್ತುಗಳ ನೆನಪೇ ಕಲ್ಪನೆಗಳೆಂದು ಎನ್ನಿಸಿಕೊಳ್ಳುವವು, ಅಂದರೆ ನಮ್ಮ ಮನಸ್ಸು ಅನೇಕ ವಿಷಯಗಳ ಕಲ್ಪನೆಗಳಿಂದ ಕೂಡಿದೆ. ಮನಸ್ಸಿನಲ್ಲಿ ವಿಷಯ ವಸ್ತುಗಳ ಕಲ್ಪನೆಗಳು ಏಕಿವೆ ಎಂದು ವಿಚಾರಿಸಿದಾಗ, ವಿಷಯ ವಸ್ತುಗಳು ಸುಖ ಕೊಡುತ್ತವೆ ಎಂಬ ತಪ್ಪು ತಿಳುವಳಿಕೆಯ ಮುಖಾಂತರ ಅವುಗಳ ಕಲ್ಪನೆಗಳು ನಮ್ಮ ಮನಸ್ಸಿನಲ್ಲಿ ಇವೆ ಎಂಬುದು ತಿಳಿಯುವದು. ಯಾವುದು ಸುಖವನ್ನು ಕೊಡುವದೋ ಅದನ್ನು ನಾವು ನೆನಪಿಟ್ಟುಕೊಳ್ಳುತ್ತೇವೆ. ಅಂದರೆ ವಿಷಯ ವಸ್ತುಗಳು ಸುಖವನ್ನು ಕೊಡುವದಿಲ್ಲ ಎಂಬುದು ನಿಶ್ಚಿತವಾಗುವವರೆಗೆ ಅವುಗಳ ಕಲ್ಪನೆಗಳು ಮನಸ್ಸಿನಲ್ಲಿ ಇರುವವೇ, ವಿಷಯ ಸುಖಬುದ್ಧಿಯು ಇರುವವರೆಗೆ ಮನಸ್ಸು ಕಲ್ಪನಾರಹಿತ ಆಗುವದು ಸಾಧ್ಯವಿಲ್ಲ, ಕ್ರಮೇಣ ಸುಖ ದುಃಖ ವಿವೇಕದಿಂದ ವಿಷಯ ಸುಖಬುದ್ಧಿಯು ಕಡಿಮೆಯಾದಂತೆ, ಮನಸ್ಸಿನಲ್ಲಿರುವ ಕಲ್ಪನೆಗಳು ಕಡಿಮೆಯಾಗುವವು. ವಿಷಯ ಸುಖ ಬುದ್ಧಿಯು ಪೂರ್ಣ ನಾಶವಾದಾಗ ಮನಸ್ಸು ಪೂರ್ಣ ಕಲ್ಪನಾರಹಿತವಾಗುವದು. ವಿಚಾರ ಮಾಡಿ ನೋಡಿದರೆ ಕಲ್ಪನಾರಹಿತ ಸ್ಥಿತಿಯು ಆನಂದವೆಂಬುದು ಮನವರಿಕೆ ಆಗುವದು. ಗಾಢನಿದ್ರೆಯಲ್ಲಿ ಕಲ್ಪನೆಗಳು ಅಡಗಿರುವವು, ಆರಾಮವಿರುವದು. ಅದರಂತೆ ಒಂದು ಕಲ್ಪನೆಯು ಅಡಗಿ ಮತ್ತೊಂದು ಕಲ್ಪನೆಯು ಉದಯವಾಗುವ ಪೂರ್ವದಲ್ಲಿರುವ ಕಲ್ಪನಾರಹಿತ ಸ್ಥಿತಿಯು ಆನಂದವೇ ಇರುವದು. ಆದರೆ ಅದು ಅತಿ ಕ್ಷಣಿಕ ಇರುವದರಿಂದ ಮಾನವನ ತಿಳಿವಳಿಕೆಗೆ ನಿಲುಕುವದಿಲ್ಲ, ಆದರೆ ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದರೆ ಈ ಕಲ್ಪನಾರಹಿತ ಸ್ಥಿತಿಯು ಆನಂದದಾಯಕವೆಂಬುದು ತಿಳಿಯುವದು. ಕಲ್ಪನಾರಹಿತ ಸ್ಥಿತಿಯೆಂದರೆ ಕಲ್ಪನಾರಹಿತ ಗಾಢನಿದ್ರೆಯಲ್ಲ, ಕಲ್ಪನೆಯು ಇರಬಾರದು, ಆನಂದಾನುಭವವು ಆಗುತ್ತಿರಬೇಕು, ಆನಂದಾನುಭವವು ಆಗುವಾಗ ಆನಂದಾನುಭವವು ಆಗುತ್ತಿದೆ ಎಂಬ ತಿಳಿವಳಿಕೆಯು ಇರಬೇಕು ಮತ್ತು ಅದು ನಿರಂತರ ಇರಬೇಕು, ಅದು ಎಂದೆಂದೂ ಕೆಡಬಾರದು. ಇಂಥ ಸ್ಥಿತಿಯೇ ಕಲ್ಪನಾರಹಿತ, ಅರಿವುಸಹಿತ, ಆನಂದಾನುಭೂತಿಯ ನಿಶ್ಚಲ

ಸ್ಥಿತಿ. ಇದೇ ಸಂಧ್ಯಾಸೂತ್ರ, ಬ್ರಹ್ಮಸೂತ್ರ, ಆನಂದಸೂತ್ರ, ಮಂಗಳಸೂತ್ರ, ಶಿವಸೂತ್ರ, ತೂಷ್ಣಿಂ ಸ್ಥಿತಿ. ವಿಷಯಗಳ ಕಲ್ಪನೆ ಇರಬಾರದು, ಗಾಢನಿದ್ರೆಯ ಮರೆವು ಇರಬಾರದು, ತನ್ನ ನಿಜಸ್ವರೂಪದ ಅರಿವು ಇರಬೇಕು, ಅದು ಬಾಧೆ ಹೊಂದಬಾರದು. ಇದೇ ಸಂಧ್ಯಾಸ್ಥಿತಿ, ಪರಮಾನಂದದ ಸ್ಥಿತಿ. ಆದ್ದರಿಂದ ಸಂಧ್ಯಾನುಸಂಧಾನ ಅಂದರೆ ಮೊದಲಿಗೆ ಮನಸ್ಸನ್ನು ಕಲ್ಪನಾರಹಿತ ಮಾಡುವದು. ಮನಸ್ಸನ್ನು ಕಲ್ಪನಾರಹಿತ ಮಾಡಲು ಸುಖ ದುಃಖ ವಿಚಾರದ ಮುಖಾಂತರ ವಿಷಯ ಸುಖಬುದ್ಧಿಯನ್ನು ನಾಶ ಮಾಡಬೇಕು. ಎಲ್ಲ ಜಡ ವಸ್ತುಗಳನ್ನು ತಿಳಿಯುವ ಅರಿವೇ ನಾನೆಂಬ ತಿಳಿವಳಿಕೆಯನ್ನು ವಿಚಾರದ ಮುಖಾಂತರ ದೃಢಪಡಿಸಬೇಕು. ತನ್ನ ನಿಜಸ್ವರೂಪದ ನಿರಂತರ ತಿಳಿವಳಿಕೆಯಲ್ಲಿದ್ದರೆ ಗಾಢನಿದ್ರೆ ಎಂಬುದು ಬರುವದೇ ಇಲ್ಲ. ದೀರ್ಘ ಕಾಲದವರೆಗೆ ಈ ಸ್ಥಿತಿಯಲ್ಲಿರುವ ಅಭ್ಯಾಸದಲ್ಲಿ ತೊಡಗಿದರೆ ಸಂಧ್ಯಾಸ್ಥಿತಿಯು ನಿಶ್ಚಲವಾಗುವದು. (ನಷ್ಟೇ ಪೂರ್ವ ವಿಕಲ್ಪೇತು ಯಾವತ್ ನ ಅನ್ಯಸ್ಯ ಉದಯಃ ನಿರ್ವಿಕಲ್ಪಕ ಚೈತನ್ಯಂ ಸ್ಪಷ್ಟಂ ತಾವದ್ವಿಭಾಸತೇ) – ಶಂಕರಾಚಾರ್ಯರು.

ಪ್ರಶ್ನೆ : ಪ್ರಥಮಾನುಭೂತಿ ಎಂದರೇನು? ಅದನ್ನು ನೆನಪಿಸಿಕೊಳ್ಳುವದು ಹೇಗೆ?

ಉತ್ತರ : ಪ್ರಥಮಾನುಭೂತಿ ಎಂದರೆ ಜೀವನ ಪ್ರಪ್ರಥಮ ಅನುಭವ. ಮೊಟ್ಟಮೊದಲಿಗೆ ಆನಂದದ ಅರಿವಿನ ಘಟ್ಟಿಯೇ ಇತ್ತು, ಅದಕ್ಕೆ ತಾನು ಅರಿವು ಆನಂದವೆಂಬ ತಿಳಿವಳಿಕೆಯು ಇರಲಿಲ್ಲ. ಇದಕ್ಕೆ ಭಾವರಹಿತ ಪರಮಾತ್ಮನ ಸ್ಥಿತಿ ಎನ್ನುವರು. ಈ ಭಾವರಹಿತ ಪರಮಾತ್ಮನಲ್ಲಿ 'ನಾನು ಪರಮಾತ್ಮ' (ಆನಂದ) ಎಂಬ ಭಾವವು ಉದಯವಾಯಿತು. ಈ 'ನಾನು ಆನಂದ' ಎಂಬ ಅನುಭವವೇ ಪ್ರಥಮಾನುಭವ, ಇದೇ ಪ್ರಥಮಾನುಭೂತಿ. ಈ ಪ್ರಥಮಾನುಭೂತಿಯಿಂದಲೇ ಜೀವಿಗಳಿಗೆ ಆನಂದದ ಗುರುತಾಗಿದೆ. ಈ ಪ್ರಥಮಾನುಭೂತಿಯ ಆಧಾರದ ಮೇಲೆಯೇ ಎಲ್ಲ ಜೀವಿಗಳು ಆನಂದವನ್ನು ಬಯಸುತ್ತವೆ. ಪ್ರಥಮಾನುಭೂತಿಯಲ್ಲಿ ಅರಿವಿಗೆ ಅನ್ಯವಾಗಿ ಏನೂ ಇರಲಿಲ್ಲ. ಅಲ್ಲಿ ಸುಖವನ್ನು ಗುರುತು ಮಾಡಿಕೊಡಲು, ಸುಖವನ್ನು ಕಲಿಸಲು, ತನಗನ್ಯವಾಗಿ ಯಾರೂ ಇರಲಿಲ್ಲ. ಅಲ್ಲಿ ಜಗತ್ತು, ದೇಹ, ಇಂದ್ರಿಯ, ಪ್ರಾಣ, ಮನ, ಬುದ್ಧಿ, ಅಹಂಕಾರ, ಚಿತ್ತ, ಸ್ವರೂಪದ ಅಜ್ಞಾನ ಮುಂತಾದ ಅನಾತ್ಮ ಸಮೂಹವೂ ಮತ್ತು ಅವುಗಳ ಭಾವವೂ ಇರಲಿಲ್ಲ, ಯಾವದೇ ತಾರ್ಕಿಕ ಕ್ರಿಯೆಗಳು ಇರಲಿಲ್ಲ. ಅಂದರೆ ಜೀವನು ಪ್ರಥಮಾನುಭೂತಿಯಲ್ಲಿ ಸುಖದ ಗುರ್ತನ್ನು ಸುಖದ ಭಾವವನ್ನು (ನಾನು ಆನಂದ ಎಂಬ ಭಾವ) ಹೊಂದುವದರ ಮೂಲಕ ತಾನೇ ಮಾಡಿಕೊಂಡಿದ್ದಾನೆ. ಸುಖವನ್ನು ತಾನೇ ಕಲಿತುಕೊಂಡಿದ್ದಾನೆ. ಹೀಗೆ ಜೀವನಿಗೆ ಸುಖದ ಗುರ್ತು ಸ್ವಯಂ ಸಿದ್ಧವಿದೆ. ತರ್ಕ ವಿತರ್ಕದಲ್ಲಿ ತೊಡಗಿ ಜೀವನು ಪ್ರಥಮಾನುಭೂತಿಯನ್ನು ಹೊಂದಿಲ್ಲ, ಆದ್ದರಿಂದ ಜೀವನು ಪ್ರಥಮಾನುಭೂತಿಯಲ್ಲಿ ಇರಬೇಕಾದರೆ, ವಿಷಯಗಳ ಮೇಲಿನ ಆಸಕ್ತಿಯನ್ನು ಕಳೆದುಕೊಂಡು, ಜಗತ್ತು ದೇಹ ಇಂದ್ರಿಯಾದಿಗಳ ಭಾವವನ್ನು ತೆಗೆದುಹಾಕಿ, ತರ್ಕವನ್ನು ಅವಲಂಬಿಸದೆ 'ನಾನು ಆನಂದ' ಎಂಬ ಭಾವವನ್ನು ನೆಲೆಗೊಳಿಸಿದರೆ ಮುಗಿಯಿತು. ಆದರೆ ಜೀವನು ಈ ಪ್ರಥಮಾನುಭೂತಿಯನ್ನು ಮರೆತಂತಾಗಿ ಆನಂದಾನುಭೂತಿಯಿಂದ ಜಾರಿದ್ದಾನೆ, ಇದೇ ಜೀವನ ಮಹಾ ಅಪರಾಧ, ಇದೇ

ಅವನ ಸರ್ವ ದುಃಖಕ್ಕೆ ಮೂಲ ಕಾರಣವಾಗಿದೆ. ನಂತರ ಜೀವನು ತನ್ನ ಸ್ವರೂಪದ (ಪ್ರಥಮಾನುಭೂತಿಯ) ಅಜ್ಞಾನದ ಮೂಲಕ ಇನ್ನೂ ಅನೇಕ ಅಪರಾಧಗಳನ್ನು ಮಾಡಿ ದುಃಖಕ್ಕೀಡಾಗಿದ್ದಾನೆ. ಜೀವನು ಪ್ರಥಮಾನುಭೂತಿಯ ಮರವೆಯಲ್ಲಿ ಜಗತ್ತು ದೇಹ ಮುಂತಾದವುಗಳನ್ನು ಸೃಷ್ಟಿಸಿಕೊಂಡನು. ಅದರಲ್ಲಿಯ ದೇಹವೇ ತಾನೆಂದು ಭಾವ ಮಾಡಿಕೊಂಡನು, ವಿಶ್ವದ ವಿಷಯ ವಸ್ತುಗಳ ಭೋಗದಿಂದ ಸುಖವು ಸಿಗುವದೆಂದು ಕಲ್ಪಿಸಿದನು. ಅವುಗಳ ನೆನಪನ್ನೇ ಮಾಡುತ್ತ, ಅವುಗಳನ್ನು ಗಳಿಸುತ್ತ, ಭೋಗಿಸುತ್ತ ಶಾಶ್ವತ ಸುಖವನ್ನು ಹೊಂದಲು ಪ್ರಯತ್ನಿಸುತ್ತಿದ್ದಾನೆ. ಹೀಗೆ ಜೀವನ ಯಾತ್ರೆಯು ಭಾವರಹಿತ ಪರಮಾತ್ಮನಿಂದ ಪ್ರಾರಂಭವಾಗಿ, ಪ್ರಥಮಾನುಭೂತಿಯನ್ನು ಅನುಭವಿಸಿ, ಅದನ್ನು ಮರೆತು, ವಿಶ್ವ ಮತ್ತು ದೇಹಾದಿಗಳನ್ನು ಕಲ್ಪಿಸುವದು ನಡೆಯಿತು, ಅಂದರೆ ಜನ್ಮಾಂತರವು (ಜನನ ಮರಣಗಳ ಚಕ್ರವು) ಮುಂದುವರೆಯಿತು. ಅಂದರೆ ಪ್ರಥಮಾನುಭೂತಿಯ ಸ್ಥಿತಿಯು ಜನ್ಮಾಂತರದ ಪೂರ್ವದಲ್ಲಿ, ಸ್ವರೂಪದ ಅಜ್ಞಾನದ ಪೂರ್ವದಲ್ಲಿ, ಅನುಭವಕ್ಕೆ ಬಂದದ್ದಾಗಿದೆ. ಪ್ರತಿಯೊಂದು ಜನ್ಮದಲ್ಲಿಯ ದೇಹವೇ ತಾನು, ಅದರಲ್ಲಿಯ ವಿಷಯ ವಸ್ತುಗಳ ಭೋಗದಿಂದ ಸುಖ ಸಿಗುವದೆಂಬ ಭಾವದ ಮೂಲಕ, ಅವುಗಳ ಭೋಗದ ಮುಖಾಂತರ ಸುಖವನ್ನು ಹೊಂದಲು ಪ್ರಯತ್ನಿಸುತ್ತಿದ್ದೇವೆ. ಹೀಗೆ ಜೀವನ ಯಾತ್ರೆಯು ಮುಂದುವರಿಯಿತು. ವಿಷಯ ಸುಖಬುದ್ಧಿಯಿಂದ ವಿಷಯಗಳಿಗಾಗಿ ಬಡಿದಾಡುವದು, ಕೊಲೆ ಸುಲಿಗೆ ಮುಂತಾದ ಪಾಪ ಕೃತ್ಯಗಳನ್ನು ಮಾಡುವದು ನಡೆಯಿತು. ಹೀಗೆ ಜೀವನು ತನ್ನ ನಿಜಧಾಮದಿಂದ (ನಿಜವಾದ ಮನೆಯಿಂದ) ಬಹುದೂರ ಬಂದಿದ್ದಾನೆ. ಅವನು ತನ್ನ ಜೀವನ ಯಾತ್ರೆಯನ್ನು ಮುಗಿಸಬೇಕಾದರೆ, ತಾನು ಹೇಗೆ ಹೇಗೆ ಯಾತ್ರೆಯನ್ನು ಮಾಡುತ್ತ ಬಂದಿರುವನೋ, ಹಾಗೆ ಹಾಗೆ ಹಿಂತಿರುಗುತ್ತ ಹೋಗಬೇಕು. ಈಗ ವಿಷಯ ಸುಖಬುದ್ಧಿಯ ಮೂಲಕ ವಿಷಯಗಳಿಗಾಗಿ ಬಡಿದಾಡುತ್ತಲಿದ್ದಾನೆ. ಸುಖ ದುಃಖದ ವಿಚಾರದಲ್ಲಿ ತೊಡಗಿ, ವಿಷಯ ಭೋಗವು ದುಃಖವೆಂದರಿತು ವಿಷಯ ವೈರಾಗ್ಯವನ್ನು ಹೊಂದಿ, ವಿಷಯಗಳಿಗಾಗಿ ಬಡಿದಾಡುವದನ್ನು ಬಿಡಬೇಕು. ಇದರಿಂದ ಮಾನವನ ಶರೀರದ ಚರಿತ್ರೆಯ ವ್ಯವಹಾರವು ಸರಳವಾಗಿ ನಡೆಯುವದು, ಮನಸ್ಸು ಶಾಂತ ಇರುವದು, ನಿಶ್ಚಲ ಇರುವದು. ನಂತರ ದೇಹಭಾವವನ್ನು ನಾಶಮಾಡಬೇಕು. ದೇಹಭಾವವನ್ನು ನಾಶಮಾಡಬೇಕಾದರೆ ನಿಜವಾಗಿ ತಾನಾರು (ಆತ್ಮಾನಾತ್ಮ ವಿಚಾರ) ಎಂಬ ನಿರಂತರ ವಿಚಾರದ ಮೂಲಕ ತಾನು ಜಡವಾದ ದೇಹ, ಇಂದ್ರಿಯ, ಪ್ರಾಣ, ಮನ, ಬುದ್ಧಿ, ಅಹಂಕಾರ, ಚಿತ್ತ, ಅಜ್ಞಾನಗಳಲ್ಲ; ಆದರೆ ಅವೆಲ್ಲವುಗಳನ್ನು, ಮೂರು ಅವಸ್ಥೆಗಳನ್ನು, ಎಲ್ಲ ಜನ್ಮಗಳನ್ನು ತಿಳಿಯುವ ಬೆಳಗುವ ಸಾಕ್ಷೀ ಸ್ವರೂಪನೇ ತಾನು ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಹೀಗೆ ದೇಹಭಾವವನ್ನು ನಾಶಮಾಡಿ, ಸ್ವರೂಪದ ಅಜ್ಞಾನವನ್ನು ಕಳೆದುಕೊಂಡು, ಸ್ವರೂಪದ ಜ್ಞಾನದಲ್ಲಿ ಅಂದರೆ ಪ್ರಥಮಾನುಭೂತಿಯಲ್ಲಿ ನೆಲೆಯಾಗಿ ನಿಲ್ಲಬೇಕು. ಇದು ದೀರ್ಘ ಕಾಲದ ಅನೇಕ ಜನ್ಮಗಳ ಅಭ್ಯಾಸದಿಂದ ಸಾಧ್ಯವಾಗುವದು. ಪ್ರಥಮಾನುಭೂತಿಯಲ್ಲಿ ನೆಲೆಯಾಗಿ ನಿಂತಾಗ ಮಾತ್ರ ಜೀವನ ಯಾತ್ರೆಯು ಮುಗಿಯುವದು. ಇನ್ನೇನಾದರೂ ಮಾಡಿದರೆ ಜನನ ಮರಣರೂಪಿ ಕರ್ಮದ ಚಕ್ರದಲ್ಲಿಯೇ ತಿರುಗಬೇಕಾಗುವದು.

ಪ್ರಶ್ನೆ : 'ಓಂ ನಮೋ ನಾನವೆ' ಈ ಮಂತ್ರದ ವೈಶಿಷ್ಟ್ಯವೇನು?

ಉತ್ತರ : 'ಓಂ ನಮೋ ನಾನವೆ' ಎಂದರೆ ನನಗೇ ನಮಸ್ಕಾರ, ನನ್ನ ನಿಜಸ್ವರೂಪಕ್ಕೇ ನಮಸ್ಕಾರ ಎಂದರ್ಥ. 'ಓಂ ನಮಃ ಸುಖಾಯ' ಮಂತ್ರವು ಸುಖಕ್ಕೆ ರೂಪವಿಲ್ಲ, ಆಕಾರವಿಲ್ಲ ಎಂಬುದನ್ನು ತಿಳಿಸುತ್ತದೆ. ಆದರೆ ಅಜ್ಞ ಜೀವಿಗಳು ಆ ರೂಪರಹಿತ ಸುಖವು ತಮಗೆ ಅನ್ಯವಾಗಿ ಹೊರಗೆ ಇದೆ ಎಂದು ತಿಳಿದು, ರೂಪ ರಹಿತ ವಸ್ತುಗಳಲ್ಲಿ (ಆಕಾಶ, ಧ್ವನಿ) ಸುಖವಿದೆ ಎಂದು ಅದನ್ನು ಹೊರಗೆ ಹುಡುಕುತ್ತ ಬಳಲಬಾರದೆಂದು, ಮಾನವನಿಗೆ ಬೇಕಾದ ಶಾಶ್ವತ ಸುಖವು ತನ್ನೊಳಗೇ ಇದೆ, ತನ್ನ ನಿಜಸ್ವರೂಪದಲ್ಲಿಯೇ ಇದೆ ಎಂದು ತಿಳಿಸುವ ಏಕಮೇವ ಉದ್ದೇಶದಿಂದ ಪೂಜ್ಯರು ಸೂತ್ರರೂಪವಾಗಿ ಈ ಮಂತ್ರವನ್ನು ಹೇಳಿರುವರು. ತನಗೆ ಬೇಕಾದ ಸುಖವು ತನ್ನೊಳಗೇ ಇದೆ ಎಂಬ ತಿಳಿವಳಿಕೆಯುಂಟಾದಾಗ, ಸುಖಕ್ಕಾಗಿ ಅದನ್ನು ಹೊರಗೆ ಹುಡುಕಾಡಿ ದುಃಖವನ್ನು ಹೊಂದುವಂಥ ಸ್ಥಿತಿಯು ಹೋಗಿ ಬಿಡುವದು, ವ್ಯರ್ಥ ಕಾಲಹರಣವು ತಪ್ಪುವದು. ತನಗೆ ಬೇಕಾದ ಶಾಶ್ವತ ಸುಖವು ತನ್ನೊಳಗೇ ಇದೆ ಎಂದಾಗ ಮನಸ್ಸಿಗೆ ಎಷ್ಟೋ ನೆಮ್ಮದಿ. ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ಈ ಮಂತ್ರದ ವಾಚಿಕ ಅಥವಾ ಮಾನಸಿಕ ಜಪವನ್ನೇನೂ ಹೇಳಿಲ್ಲ. ಅದರಂತೆ ಅದರ ಮೇಲೆ ಮನಸ್ಸನ್ನು ಏಕಾಗ್ರಗೊಳಿಸಬೇಕು ಎಂದೂ ಹೇಳಿಲ್ಲ, ಆದರೆ ಆ ಮಂತ್ರದ ಅರ್ಥಾನುಸಂಧಾನವೃತ್ತಿಯನ್ನು ಕೈಕೊಳ್ಳಬೇಕೆಂದು ತಿಳಿಸಿದ್ದಾರೆ. 'ಓಂ ನಮೋ ನಾನವೆ' ಮಂತ್ರದ ಅರ್ಥಾನುಸಂಧಾನವೃತ್ತಿಯೆಂದರೆ ದೇಹ ಮತ್ತು ಜಗತ್ತಿನ ನೆನಪು ಭಾವವನ್ನು ತೆಗೆದುಹಾಕಿ, ತನ್ನ ನಿಜಸ್ವರೂಪದ ನೆನಪು ಮತ್ತು ಭಾವದಲ್ಲಿ ಇರುವದು. ಈ ಸ್ಥಿತಿಯು ಅಭ್ಯಾಸದಿಂದ ನೆಲೆಗೊಂಡು ನಿಂತಾಗ, ಶಾಶ್ವತ ಸುಖದ ಪ್ರಾಪ್ತಿಯಾಗುವದು. ಇದೇ ಆತ್ಮಜ್ಞಾನದ ಸ್ಥಿತಿ, ಸ್ಥಿತಪ್ರಜ್ಞನ ಸ್ಥಿತಿ.

ಪ್ರಶ್ನೆ : ತನ್ನ ನಿಜವನ್ನು ತಿಳಿದುಕೊಳ್ಳಬೇಕಾದರೆ ವೇದ, ದೈವ, ಗುರುಗಳನ್ನು ತಿಳಿದುಕೊಳ್ಳಬೇಕಾಗುವದೇನು?

ಉತ್ತರ : ವೇದ, ದೈವ, ಗುರುಗಳ ಸಮೂಹವೆಲ್ಲವೂ ನಮ್ಮ ನಿಜಸ್ವರೂಪದ ಬಗ್ಗೆ ವಿವರಿಸುವವು. ಆದ್ದರಿಂದ ನಮ್ಮ ನಿಜಸ್ವರೂಪವನ್ನು ತಿಳಿದುಕೊಂಡರೆ ವೇದ, ದೈವ, ಗುರುಗಳ ಸಮೂಹವನ್ನೆಲ್ಲ ತಿಳಿದುಕೊಂಡಂತೆ ಆಯಿತು. ಆದ್ದರಿಂದ ಮೊದಲಿಗೆ ತನ್ನ ನಿಜಸ್ವರೂಪವನ್ನು ತಿಳಿದು ಅನುಭವಿಸಬೇಕು. ಆದ್ದರಿಂದ ತನ್ನ ನಿಜಸ್ವರೂಪವೇ ಪರತತ್ತ್ವ, ಅದು ತನ್ನಿಂದ ಬೇರೆ ಇಲ್ಲ.

ಪ್ರಶ್ನೆ : ಆತ್ಮಜ್ಞಾನವು ಹೇಗೆ ಸಾಧ್ಯವು?

ಉತ್ತರ : ಆತ್ಮಜ್ಞಾನವೆಂದರೆ 'ನಾನು ದೇಹ' ಎಂಬ ಭಾವನೆಯು ಹೇಗೆ ದೃಢವಾಗಿದೆಯೋ ಹಾಗೆ ನಾನು ದೇಹವಲ್ಲ, ಎಲ್ಲ ಜಡ ವಿಷಯಗಳನ್ನು ತಿಳಿಯುವ ಅರಿವು, ಆನಂದ ಎಂಬ ಭಾವವು ದೃಢವಾಗುವದು. ಈಗ 'ದೇಹವೇ ನಾನು ಎಂಬ ಭಾವವು ದೃಢವಾಗಿದೆ. ಮೊದಲಿಗೆ 'ದೇಹವು ನಾನು' ಎಂಬ ಭಾವವು ಹೋಗಬೇಕು, ನಂತರ 'ಅರಿವು ನಾನು' ಎಂಬ ಭಾವವು ದೃಢವಾಗಬೇಕು.

'ದೇಹವು ನಾನು' ಎಂಬ ಭಾವನೆಯು ಹೋಗಬೇಕಾದರೆ, ಮೊದಲಿಗೆ ನಾನು ದೇಹವೋ ಅಥವಾ ಅಲ್ಲವೋ ಎಂಬ ಸಂಶಯವು ಬರಬೇಕು. ದೇಹವು ತಾನಲ್ಲ ಎಂಬುದು ತಿಳಿಯುವದು ಹೇಗೆಂದರೆ, ನಾವು ಯಾವುದನ್ನು ತಿಳಿಯುವವರಾಗುವೆವೋ, ಅದು ನಾವು ಎಂದೂ ಆಗಲಾರೆವು. ನಾವು ದೇಹವನ್ನು ತಿಳಿಯುವೆವು, ಆದ್ದರಿಂದ ದೇಹವು ನಾವಲ್ಲ. ನಾವು ಪಂಚ ಜ್ಞಾನೇಂದ್ರಿಯಗಳನ್ನು (ಕಣ್ಣು ಉರಿಯುವದು ಇತ್ಯಾದಿ), ಪಂಚ ಕರ್ಮೇಂದ್ರಿಯಗಳನ್ನು (ಕೈಕಾಲು ನೋಯುವವು ಇತ್ಯಾದಿ), ಪಂಚ ಪ್ರಾಣಗಳನ್ನು (ಹೊಟ್ಟೆಯಲ್ಲಿ ಗ್ಯಾಸ ಹಿಡಿಯುವದು ಇತ್ಯಾದಿ) ತಿಳಿಯುವೆವು, ಆದ್ದರಿಂದ ಅವು ನಾವಲ್ಲ. ಅದರಂತೆ ನಾವು ಮನಸ್ಸನ್ನು (ನಮ್ಮ ಮನಸ್ಸು ಸಮಾಧಾನವಿಲ್ಲ), ಬುದ್ಧಿಯನ್ನು (ನಮ್ಮ ಬುದ್ಧಿಯು ಸರಿಯಾಗಿಲ್ಲ), ಚಿತ್ತವನ್ನು (ನಮಗೆ ಅದು ನೆನಪಿದೆ, ನೆನಪಿಲ್ಲ) ತಿಳಿಯುವೆವು, ಆದ್ದರಿಂದ ನಾವು ಮನಸ್ಸು, ಬುದ್ಧಿ, ಚಿತ್ತವಲ್ಲ. ಅದರಂತೆ ನಾವು ಅಹಂಕಾರವನ್ನು ತಿಳಿಯುವೆವು, (ನಾನು ಮಾಡುವವ, ಮತ್ತು ನಾನು ಉಣ್ಣುವವ) ಆದ್ದರಿಂದ ಅಹಂಕಾರವು ನಾವಲ್ಲ. ಅದರಂತೆ ನಾವು ಅಜ್ಞಾನವನ್ನು ತಿಳಿಯುವೆವು (ನಾನು ನಿಜವಾಗಿ ಯಾರು ಎಂಬುದು ನನಗೆ ತಿಳಿಯದು), ಆದ್ದರಿಂದ ನಾವು ಅಜ್ಞಾನವಲ್ಲ. ನಾವು ಬಾಲ್ಯ, ಯೌವನಾದಿ ಅವಸ್ಥೆಗಳನ್ನು; ಜಾಗ್ರ, ಕನಸು, ಗಾಢನಿದ್ರೆಯೆಂಬ ಮೂರು ಅವಸ್ಥೆಗಳನ್ನು; ಅಸಂಖ್ಯ ಜನ್ಮಗಳನ್ನು ತಿಳಿಯುವೆವು, ಆದ್ದರಿಂದ ಇವಾವೂ ನಾವಲ್ಲ. ಆದರೆ ಇವೆಲ್ಲವುಗಳನ್ನು ತಿಳಿಯುವ ಅರಿವು ಆನಂದ ಸ್ವರೂಪರೇ ನಾವು. ಹೀಗೆ ಒಮ್ಮೆ ವಿಚಾರ ಮಾಡಿಕೊಂಡರೆ ಅರಿವು ಆನಂದದ ಭಾವವು ನೆಲೆಯಾಗಿ ನಿಲ್ಲುವದಿಲ್ಲ. ವ್ಯಾವಹಾರಿಕ ಎಚ್ಚರಿಕೆಯಲ್ಲಿ ಇರುವಾಗ, ವಿಷಯೇಂದ್ರಿಯ ಸಂಪರ್ಕಭೋಗವು ನಡೆದಾಗ, ಖಾಲಿ ಕುಳಿತಾಗ ಮತ್ತು ವಿಶೇಷವಾಗಿ ವಿಚಾರಕ್ಕೆ ಕುಳಿತಾಗ ದೇಹ, ಇಂದ್ರಿಯ, ಪ್ರಾಣ ಮುಂತಾದ ಅನಾತ್ಮ ಸಮೂಹವು ನಾವಲ್ಲ, ಆದರೆ ಅವೆಲ್ಲವನ್ನು ತಿಳಿಯುವ ಅರಿವು, ಆನಂದರೂಪವೇ ನಾವೆಂದು ನಿರಂತರ ನೆನಪಿಸಿಕೊಳ್ಳಬೇಕು. ಕೂಸಿಗೆ ಮೊದಲಿಗೆ ತಾನು ದೇಹವೆಂಬುದು ದೃಢವಾಗಿರುವದಿಲ್ಲ, ಆದರೆ ನಂತರ ತಾಯಿ ತಂದೆಗಳು ಆ ಕೂಸಿಗೆ ಹೆಸರನ್ನಿಡುವರು. ಆ ಹೆಸರಿನಿಂದ ಕರೆದಾಗಲೆಲ್ಲ ಅದು ಆ ದೇಹವೇ ತಾನು ಎಂದು ನೆನಪಿಸಿಕೊಂಡು ಅದನ್ನೇ ರೂಢಿಸಿಕೊಳ್ಳುವದು. ಹೀಗೆ ತನ್ನ ನಿಜಸ್ವರೂಪದ ನಿರಂತರ ನೆನಪಿನಿಂದ ತನ್ನ ನಿಜಸ್ವರೂಪದ ಭಾವವು ದೃಢವಾಗುವದು. ಆದ್ದರಿಂದ ತನ್ನ ನಿಜಸ್ವರೂಪದ ನಿರಂತರ ನೆನಪಿನಿಂದ ಆತ್ಮಜ್ಞಾನವು ಆಗುವದು.

ನಾವು ದೇಹಭಾವವು ಸುಖ ಎನ್ನುವವರೆಗೆ ಜನ್ಮತಾಳುವೆವು. ನಾವು ಎಲ್ಲಿಯವರೆಗೆ ಮಾಡುವವರಾಗುವೆವೋ ಅಲ್ಲಿಯವರೆಗೆ ಉಣ್ಣುವವರಾಗುವೆವು, ಉಣ್ಣುವದಕ್ಕಾಗಿ ಪುನರ್ಜನ್ಮ ತಾಳುವೆವು. ಅನಾತ್ಮ ಸಮೂಹವೇ ನಾವೆಂದು ತಿಳಿದುಕೊಳ್ಳುವವರೆಗೆ ನಾವು ಮಾಡುವವರಾಗುವೆವು. ಅರಿವು ಆನಂದವೇ ನಾವು ಎಂಬುದು ದೃಢವಾದಾಗ ನಾವು ಮಾಡುವವರು ಆಗುವದಿಲ್ಲ. ಏಕೆಂದರೆ ಅರಿವಿಗೆ ಇಂದ್ರಿಯಗಳಿಲ್ಲ, ಅರಿವು ನಿಷ್ಕ್ರಿಯವು, ಆದ್ದರಿಂದ ನಾವು ಉಣ್ಣುವವರು ಆಗುವದಿಲ್ಲ.

ಆಗ ಜನನ ಮರಣಗಳ ಕರ್ಮಚಕ್ರವು (ಪುನರ್ಜನ್ಮ) ತಪ್ಪುವದು, ಶಾಶ್ವತ ಸುಖವು ಪ್ರಾಪ್ತವಾಗುವದು.

ಪ್ರಶ್ನೆ : ಎಲ್ಲ ಜೀವಿಗಳಲ್ಲಿ ಏಕತ್ವವನ್ನು ಕಾಣುವದು ಹೇಗೆ?

ಉತ್ತರ : ಯಾರೇ ಆಗಲಿ (ಜ್ಞಾನಿ ಅಥವಾ ಅಜ್ಞಾನಿ) ವ್ಯಾವಹಾರಿಕ ಎಚ್ಚರದಲ್ಲಿ ಇರುವಾಗ ನೀತಿ, ನಿಯಮಗಳಿಗೆ ಅನುಸಾರವಾಗಿ ನಡೆದುಕೊಳ್ಳಬೇಕು. ಇದನ್ನು ಬಿಟ್ಟು ಎಲ್ಲವೂ ಬ್ರಹ್ಮವೇ, ಆತ್ಮನು ನಿರ್ಲಿಪ್ತನಿರುವನು ಎಂದು ನೀತಿಹೀನವಾದ ವ್ಯವಹಾರವನ್ನು ನಡೆಯಿಸಿದರೆ, ಅದರ ದುಃಖರೂಪಿ ಫಲವನ್ನು ಉಣ್ಣಬೇಕಾಗುವದು. ನಿದ್ರೆಯಲ್ಲಿ ಇರುವಾಗಿನ ಅಥವಾ ತುರ್ಯಸ್ಥಿತಿಯಲ್ಲಿ ಇರುವಾಗಿನ ಸ್ಥಿತಿಯೇ ಬೇರೆ, ಅಲ್ಲಿ ವ್ಯಾವಹಾರಿಕ ಎಚ್ಚರಿಕೆಯೊಳಗಿನ ನಿಯಮಗಳು ಅನ್ವಯಿಸುವದಿಲ್ಲ. ವ್ಯಾವಹಾರಿಕ ಎಚ್ಚರಿಕೆಯಲ್ಲಿ ಜ್ಞಾನಿಯೆಂದು ಕರೆಯಿಸಿಕೊಂಡು, ನೀತಿಹೀನ ವ್ಯವಹಾರ ನಡೆಯಿಸುತ್ತಾನೆಂದರೆ ಅವನು ನೀತಿವಂತನೇ ಅಲ್ಲ, ಅಂದಮೇಲೆ ಅವನು ಜ್ಞಾನಿ ಹೇಗೆ ಆಗಬಲ್ಲನು? ಜ್ಞಾನಿಯು ನೀತಿಯುಕ್ತ ವಿಹಿತ ಭೋಗವೇ ದುಃಖವೆಂದು ತಿಳಿದುಕೊಂಡು, ಶ್ರೇಷ್ಠವಾದ ವೈರಾಗ್ಯವನ್ನು ಹೊಂದಿ, ಜ್ಞಾನನಿಷ್ಠನಾಗಿ, ನೀತಿಹೀನ ವ್ಯವಹಾರವನ್ನು ನಡೆಯಿಸುತ್ತಾನೆಂದರೆ ಪರಮಾಶ್ಚರ್ಯ, ಎಲ್ಲ ಜೀವಿಗಳಲ್ಲಿ ಏಕತ್ವವನ್ನು ಕಾಣುವದು ಹೇಗೆಂದರೆ, ಎಲ್ಲ ಜೀವಿಗಳಲ್ಲಿ ಇರುವ ಆತ್ಮಸ್ವರೂಪವು ಒಂದೇ ಎಂದು ಮನಸ್ಸಿನಲ್ಲಿ ಏಕತ್ವದ ಭಾವನೆಯನ್ನು ತಳೆಯುವದು.

* * * * *

॥ ಓಂ ತತ್ ಸತ್ ॥